ಅನುಬಂಧ–1

(ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಲೆಪಶಾ/ಸಸಬ್ಯಾ/3/2006–07 ದಿನಾಂಕ: 22–06–2006ಕ್ಕೆ ಅನುಬಂಧ)

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

ಲೆಕ್ಕಪರಿಶೋಧನಾ ವರದಿಯ ವಿಸ್ತೃತ ನಮೂನೆ (LFAR)

ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು 2025–2026 ನೇ ಸಾಲಿನ ಲೆಕ್ಕಪರಿಶೋಧನಾ ವರದಿ

ಭಾಗ–1

1	ಎ) ಬ್ಯಾಂಕಿನ ಹೆಸರು	**ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ,**
	ತಾಲ್ಲೂಕು	ಬೆಂಗಳೂರು
	ಜಿಲ್ಲೆ	ಬೆಂಗಳೂರು
	ಶಾಖೆಗಳ ಸಂಖ್ಯೆ	ಪ್ರಧಾನ ಕಛೇರಿ ಸೇರಿ 3
2	ಎ) ನೋಂದಣಿ ಸಂಖ್ಯೆ ಮತ್ತು ದಿನಾಂಕ	ಜೆಆರ್‌ಬಿ.ನೋಂದಣಿ.97.12.26148:98–99ದಿನಾಂಕ 15.02.1999
	ಬಿ) ಆರ್.ಬಿ.ಐ.ಯವರ ಲೈಸೆನ್ಸ್ ಸಂಖ್ಯೆ ಮತ್ತು ದಿನಾಂಕ	ಭಾರತೀಯ ರಿಸರ್ವ್ ಬ್ಯಾಂಕ್ ಲೈಸನ್ಸ್ ಸಂಖ್ಯೆ ಯುಬಿಡಿ:ಕೆಎಎನ್:0006ಪಿ ದಿನಾಂಕ 23.02.2000
3	ಬ್ಯಾಂಕ್‌ನ ಪದಾಧಿಕಾರಿಗಳ ಹೆಸರು ಅಧ್ಯಕ್ಷರು ರಿಂದ ವರೆಗೆ	ಶ್ರೀ. ಯತಿರಾಜ್.ಎಸ್ 14.10.2024 ರಿಂದ 21.01.2026 ರವರೆಗೆ ಶ್ರೀ. ಶ್ರೀನಿವಾಸ. ಎಸ್.ಬಿ 21.01.2026 ರಿಂದ ತಹಲ್‌ವರೆಗೂ
	ಮುಖ್ಯಕಾರ್ಯನಿರ್ವಹಣಾಧಿಕಾರಿ	ಶ್ರೀ. ಪ್ರಸನ್ನ.ಡಿ.ಆರ್ ,ಪ್ರಧಾನ ವ್ಯವಸ್ಥಾಪಕರು
4	ಹಿಂದಿನ ಸಾಲಿಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿದ ಅಧಿಕಾರಿಯ ಹೆಸರು, ಹುದ್ದೆ ಹಾಗೂ ಅವಧಿ	ಪಾಲುದಾರರು, ಮೆ: ಬಿ.ಎಂ.ಎಸ್.ಎಸ್ ಅಂಡ್ ಕೋ, ಚಾರ್ಟರ್ಡ್ ಅಕೌಂಟೆಂಟ್ಸ್, ಸುಮಗಿರಿ, ನಂ.165, 1ನೇ ಮಹಡಿ, 9ನೇ ಮುಖ್ಯರಸ್ತೆ, ಸೆಕ್ಟರ್ 6, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು–560102
5	ಎ) ಪ್ರಸಕ್ತ ಸಾಲಿಗೆ ಬ್ಯಾಂಕಿನ ಲೆಕ್ಕಪರಿಶೋಧನೆ ಮಾಡಿದ ಅಧಿಕಾರಿಯ ಹೆಸರು, ಹುದ್ದೆ ಹಾಗೂ ಅವಧಿ	ಪಾಲುದಾರರು, ಬಿ.ಎಂ.ಎಸ್.ಎಸ್ ಅಂಡ್ ಕೋ , ಚಾರ್ಟರ್ಡ್ ಅಕೌಂಟೆಂಟ್ಸ್, ಸುಮಗಿರಿ, ನಂ.165, 1ನೇ ಮಹಡಿ, 9ನೇ ಮುಖ್ಯರಸ್ತೆ, ಸೆಕ್ಟರ್ 6, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು–560102
	ಬಿ) ಲೆಕ್ಕಪರಿಶೋಧನೆ ಮಾಡಲು ನೀಡಿದ ಆದೇಶ ಸಂಖ್ಯೆ ಮತ್ತು ದಿನಾಂಕ	ಆರ್.ಬಿ.ಐ ನೇಮಕಾತಿ ಆದೇಶ ಸಂಖ್ಯೆ. BLR.DOS.ARG.No.S-944/11.01.111/2025-26 dated 23.09.2025
6	ಸಂಘದ ಲೆಕ್ಕಪುಸ್ತಕಗಳನ್ನು ಹಾಜರು ಪಡಿಸಿದವರ ಹೆಸರು ಮತ್ತು ಹುದ್ದೆ. ಅ) ಹೆಸರು : ಆ) ಹುದ್ದೆ : ಇ) ದಿನಾಂಕ :	1. ಪ್ರಧಾನ ಕಛೇರಿ– ಪ್ರಸನ್ನ.ಡಿ.ಆರ್, ಪ್ರಧಾನ ವ್ಯವಸ್ಥಾಪಕರು 31–03–2026 2. ಸಿಟಿ ಸಿವಿಲ್ ಕೋರ್ಟ್ ಶಾಖೆ– ದೀಪಕ್.ಕೆ.ಸಿ ವ್ಯವಸ್ಥಾಪಕರು ಪ್ರಭಾರ.– 31–03–2026 3.ಮ್ಯಾಜಿಸ್ಟ್ರೇಟ್ ಕೋರ್ಟ್ ಶಾಖೆ– ಈರಮ್ಮ.ಸಿ.ಎನ್ ವ್ಯವಸ್ಥಾಪಕರು ಪ್ರಭಾರ.– 31–03–2026
7	ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ಅವಧಿ, ಲೆಕ್ಕಪರಿಶೋಧನೆ ಪ್ರಾರಂಭಿಸಿದ ದಿನಾಂಕ ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ದಿನಾಂಕ ಲೆಕ್ಕಪರಿಶೋಧನೆಗೆ ತೆಗೆದುಕೊಂಡ ದಿನಗಳು	2025–26 10.01.2026 23.06.2026 70 ಮಾನವ ದಿನಗಳು
8	ನ್ಯೂನತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ:	
	ಎ) ಹಿಂದಿನ ಸಾಲು/ ಸಾಲುಗಳ ಲೆಕ್ಕಪರಿಶೋಧನೆಯಲ್ಲಿ ಕಾಣಿಸಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡ ಬಗ್ಗೆ ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿದೆಯೇ?	ಸಲ್ಲಿಸಲಾಗಿದೆ.
	ಬಿ) ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗಿದೆಯೇ? (ಉಳಿದ ಪ್ರಮುಖ ನ್ಯೂನತೆಗಳ ಬಗ್ಗೆ ವಿವರ ನೀಡುವುದು)	ಸರಿಪಡಿಸಿಕೊಳ್ಳಲಾಗಿರುತ್ತದೆ.
	ಸಿ) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.	

ಕ್ರ. ಸಂ	ವರದಿ ವರ್ಷ	ಪುಟ ಸಂಖ್ಯೆ	ಕಂಡಿಕೆ ಸಂಖ್ಯೆ	ನ್ಯೂನತೆಗಳ ಸಂಕ್ಷಿಪ್ತ	ಷರಾ
1	2024–25	41	25(12)	ಬ್ಯಾಂಕಿನಿಂದ ನೀಡುತ್ತಿರುವ ಸಾಲಕ್ಕೆ ಆದಾರ ಪಡೆದಿರುವ ಸ್ಥಿರಾಸ್ತಿಗಳಿಗೆ ವಿಮೆ ಪಡೆಯುವುದು	ಪಡೆದುಕೊಂಡಿರುವುದಿಲ್ಲ.
2	2024–25	6	9	ಬ್ಯಾಂಕಿನ ಉಪನಿಯಮಗಳು 2013 ರಲ್ಲಿ ತಿದ್ದುಪಡಿ ಮಾಡಿಕೊಂಡಿರುತ್ತದೆ. ಇತ್ತೀಚಿನ ಪರಿಷ್ಕೃತ ಕಾನೂನುಗಳನ್ನು	ಮಾಡಲಾಗಿದೆ

					ಉಪನಿಯಮಾವಳಿಗಳಲ್ಲಿಅಳವಡಿಸಿಕೊಂಡು ಉಪನಿಯಮಗಳನ್ನು ಆಮೂಲಾಗ್ರವಾಗಿ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.	
	3				ಆರ್.ಬಿ.ಐ ಸುತ್ತೋಲೆಗಳಂತೆ ಬ್ಯಾಂಕು ತಾನು ಸಂಗ್ರಹಿಸಿರುವ ಒಟ್ಟು ಠೇವಣಿಗಳ ಜವಾಬ್ದಾರಿಗಳ ಮೇಲೆ ಶೇ.5ಕ್ಕಿಂತ ಹೆಚ್ಚಾಗಿ ಯಾವುದೇ ಒಂದು ಬ್ಯಾಂಕಿನಲ್ಲಿ ಹೂಡತಕ್ಕದ್ದಲ್ಲ.	ಪಾಲನೆ ಆಗಿರುತ್ತದೆ
9	ಬ್ಯಾಂಕ್ ಅಧಿಕೃತ ಉಪನಿಯಮ, ಕಾಯಿದೆ, ನಿಯಮಗಳ ಪ್ರತಿಗಳನ್ನು ಹೊಂದಿದೆಯೇ? ಉಪನಿಯಮಗಳ ಅಥವಾ ಕಾಯಿದೆ ನಿಯಮಗಳ ಉಲ್ಲಂಘನೆಯಾಗಿದ್ದಲ್ಲಿ ಅವುಗಳ ವಿವರ ನೀಡುವುದು.				ಉಪನಿಯಮ ಕಾಯಿದೆ ಹೊಂದಿದ್ದು ಪ್ರಸಕ್ತವಾಗಿ ಆಮೂಲಾಗ್ರವಾಗಿ ಉಪನಿಯಮ ಪ್ರಸಕ್ತದವರೆಗೆ ತಿದ್ದುಪಡಿ ಮಾಡಿಕೊಂಡಿರುವುದಿಲ್ಲ. ಆದರೆ ಕಾಯಿದೆ ಕಲಂನ ಅನ್ವಯ ಕಾರ್ಯನಿರ್ವಹಿಸುತ್ತಿದೆ.	
10	ಆಂತರಿಕ ಲೆಕ್ಕಪರಿಶೋಧನೆ ಹಾಗೂ ಸದರಿ ವರದಿಯ ಪರಿಶೀಲನೆ ಹಾಗೂ ಅನುಸರಣೆ ಆಗಿದೆಯೇ?				ನೈನೆಗ್ಲಿ ಅಂಡ್ ಕಂಪನಿ (ಸೆಪ್ಟೆಂಬರ ವರೆಗೆ) ಮತ್ತು ಮೆ.ಅಳವಂಡಿ ಅಂಡ್ ಅಸೋಸಿಯೆಟ್ಸ್, ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸಿ ಪ್ರತಿ ಮಾಹೆ ವರದಿಗಳನ್ನು ನೀಡುತ್ತಿದ್ದು ಅದರ ಪರಿಶೀಲನೆ ಹಾಗೂ ಅನುಸರಣೆ ಆಗುತ್ತಿದೆ.	

ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಪುಸ್ತಕಗಳ ವಿವರ

ಭಾಗ–2

	ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಪ್ರಮುಖ ಲೆಕ್ಕಪುಸ್ತಕಗಳ ವಿವರ	ಬ್ಯಾಂಕು ಸಂಪೂರ್ಣ ಗಣಕೀಕೃತಗೊಂಡಿದ್ದು ಗಣಕಯಂತ್ರದಲ್ಲಿ ಲೆಕ್ಕ ಪುಸ್ತಕಗಳ ಸರಿದೂಗಿಸುವಿಕೆಯನ್ನು ಕೂಲಂಕುಷವಾಗಿ ಪರೀಶೀಲಿಸಿದ್ದು ಅವುಗಳು ಸರಿಯಾಗಿರುತ್ತದೆ.
11	**ಸದಸ್ಯತ್ವ:**	
	ಎ) ವರ್ಷದ ಪ್ರಾರಂಭದಲ್ಲಿದ್ದ ಸದಸ್ಯರು : 9371	
	ಬಿ) ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು : 492	
	ಸಿ) ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು : 57	
	ಡಿ) ವರದಿ ಸಾಲಿನ ಆಖೈರಿಗೆ ಇರತಕ್ಕ ಸದಸ್ಯರು : 9806	
	(ಹಿಂದಿನ ಎರಡು ಸಾಲುಗಳ ಹೋಲಿಕೆಯ ವಿವರಗಳನ್ನು ನೀಡುವುದು)	ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಹಸದಸ್ಯರು 15% ರಷ್ಟು ಇರಬೇಕಾಗುತ್ತದೆ. ವರದಿ ಸಾಲಿನಲ್ಲಿ ಸದಸ್ಯರಾಗಿರುವ ಸದಸ್ಯರ ಅರ್ಜಿಗಳನ್ನು ಪರೀಶಿಲಿಸಲಾಗಿ ಬ್ಯಾಂಕು ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆಯುತ್ತಿದ್ದಾರೆ.

	ಸದಸ್ಯರು	ಸಹಸದಸ್ಯರು (15%)	ಸಹಸದಸ್ಯರು	ಶೇ. %
2025–2026	9392	1409	398	4.24%
2024–2025	8965	1345	394	4.40%
2023–2024	8659	1299	385	4.45%

12	ಸದಸ್ಯತ್ವದ ಬಗ್ಗೆ ವಿಮರ್ಶೆ	ಉಪನಿಯಮ 35ರಂತೆ ಬ್ಯಾಂಕಿನಲ್ಲಿ ಸದಸ್ಯರಾಗಲು ಅವಕಾಶವಿರುತ್ತದೆ.
13	**ಷೇರು ಬಂಡವಾಳ:**	
	ದಿನಾಂಕ 31–03–2026 ರ ಅಂತ್ಯಕ್ಕೆ ಪಾವತಿಯಾದ ಷೇರು ಬಂಡವಾಳ	31.03.2026ರ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ.834.45ಲಕ್ಷ ಬಂಡವಾಳವಿರುತ್ತದೆ.
	(ಹಿಂದಿನ ಮೂರು ಸಾಲುಗಳ ಹೋಲಿಕೆಯ ವಿವರಗಳನ್ನು ನೀಡುವುದು)	

	ಸದಸ್ಯರು	ಷೇರು ಬಂಡವಾಳ	ಸಹಸದಸ್ಯರು	ಷೇರು ಬಂಡವಾಳ
2025–26	9392	8,33,80,700	398	62,200
2024–25	8965	7,83,03,200	394	61,800
2023–24	8659	7,50,91,500	385	60,900

14	ಷೇರು ಬಂಡವಾಳದ ಮೇಲೆ ವಿಮರ್ಶೆ	ಬ್ಯಾಂಕಿನ ಷೇರುಧನ ಅಧಿಕೃತ ಪಾಲು ಬಂಡವಾಳದ ಮಿತಿಯು ಅಧಿಕೃತ ಷೇರು ಬಂಡವಾಳದ ಮಿತಿ0ಯೊಳಗೆ ಇರುತ್ತದೆ. ಉಪನಿಯಮ ಸಂಖ್ಯೆ 10 ರಂತೆ ಬ್ಯಾಂಕಿನ ಪ್ರತಿ ಷೇರಿನ ಮುಖಬೆಲೆ ರೂ.100/– ಇರತಕ್ಕದ್ದು. ಬ್ಯಾಂಕು ಸಂಪೂರ್ಣ ಗಣಕಿಕೃತಗೊಂಡಿದ್ದು ಗಣಕಯಂತ್ರದಲ್ಲಿ ಷೇರು ಬಂಡವಾಳ ಮತ್ತು ಸದಸ್ಯರ ಕುಳುವಾರು ಪಟ್ಟಿಯನ್ನು ಪರಿಶೀಲಿಸಲಾಗಿ ಸರಿ ಇರುವುದರ ಬಗ್ಗೆ ಧೃಡಿಕರಿಸಲಾಗಿರುತ್ತದೆ.
15	ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಷೇರು ಬಂಡವಾಳವು ಬ್ಯಾಂಕು ನಿರ್ವಹಿಸಿರುವ ಷೇರು ಖಾತೆಗಳಲ್ಲಿನ ಪ್ರತಿಯೊಬ್ಬ ಸದಸ್ಯರ ಷೇರು ಬಂಡವಾಳದ ಮೊತ್ತಕ್ಕೆ ತಾಳೆ ಇರುವುದೇ?	ಹೌದು
16	ಹೊರಗಿನಿಂದ ಪಡೆದ ಸಾಲಗಳು: ಅವುಗಳ ಬಗ್ಗೆ ವಿಮರ್ಶೆ	ಬ್ಯಾಂಕು ವರದಿ ಸಾಲಿನಲ್ಲಿ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ.

17	**<u>ಠೇವಣಿಗಳು:</u>** ಬ್ಯಾಂಕ್ ಪಡೆದ ವಿವಿಧ ರೀತಿಯ ಠೇವಣಿಗಳ ಬಗ್ಗೆ ವಿವರಗಳು	ಬ್ಯಾಂಕಿನ ಉಪನಿಯಮದ ಸಂಖ್ಯೆ 7ರ ರೀತ್ಯಾ, ಬ್ಯಾಂಕಿನವರು ಈ ಕೆಳಕಂಡ ಠೇವಣಿಗಳನ್ನು ಸಂಗ್ರಹಿಸಬಹುದು. 1)ಚಾಲ್ತಿ ಠೇವಣಿ, 2) ಉಳಿತಾಯ ಠೇವಣಿ 3) ನಿಶ್ಚಿತ ಠೇವಣಿ 4) ಪಿಗ್ಮಿ ಠೇವಣಿ 5) ಆವರ್ತಕ ಠೇವಣಿ 6) ನಿಧಿ ಸ್ವೀಕರಣಾ ಪತ್ರಗಳು (ಕ್ಯಾಷ್ ಸರ್ಟಿಫಿಕೇಟ್) 7) ಪಿಗ್ಮಿ ಭದ್ರತಾ ಠೇವಣಿ 8) ಲಾಕರ್ ಭದ್ರತಾ ಠೇವಣಿ 9) ನಿರ್ದೇಶಕ ಮಂಡಳಿಯವರು ಕಾಲಕಾಲಕ್ಕೆ ನಿರ್ದರಿಸುವ ಇತರೆ ಠೇವಣಿ ಯೋಜನೆಗಳು. ಬ್ಯಾಂಕಿನ ಉಪನಿಯಮದ ಸಂಖ್ಯೆ 8ರ ಪ್ರಕಾರ ಬ್ಯಾಂಕು ಸಾಲಗಳನ್ನು ಮತ್ತು ಠೇವಣಿಗಳನ್ನು ನಿಗದಿಯಾದ ಅವಧಿಗೆ ಸ್ವೀಕರಿಸಬಹುದು.
18	ಉಳಿತಾಯ ಠೇವಣಿ ಮತ್ತು ಇತರೆ ಠೇವಣಿಗಳ ಬಗ್ಗೆ ವಿಮರ್ಶೆ	ಬ್ಯಾಂಕು ಸದಸ್ಯರಿಂದ ಹಾಗೂ ಸದಸ್ಯರಲ್ಲದವರಿಂದ ಹಿಂದಿನಿಂದಲೂ ಠೇವಣಿ ಸ್ವೀಕರಿಸಲಾಗುತ್ತಿದೆ. ಬ್ಯಾಂಕಿನಲ್ಲಿ ಗಣಕಯಂತ್ರದಲ್ಲಿ ಒಟ್ಟು ಠೇವಣಿದಾರರು ಹಾಗೂ ಒಟ್ಟು ಠೇವಣಿಯ ಮೊತ್ತದ ಬಗ್ಗೆ ಪ್ರತ್ಯೇಕ ಲೆಕ್ಕಗಳವಾರು ನಿರ್ವಹಿಸಲಾಗಿರುತ್ತದೆ.
19	ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಠೇವಣಿಗಳ ಮತ್ತು ಹೊರಗಿನಿಂದ ಪಡೆದ ಸಾಲಗಳ ಬಾಕಿಯು ನಿರ್ವಹಿಸಿರುವ ಠೇವಣಿ ಮತ್ತು ಸಾಲಗಳ ಖಾತೆಗಳಲ್ಲಿರುವ ಒಟ್ಟು ಮೊತ್ತಗಳಿಗೆ ತಾಳೆ ಇರುತ್ತದೆಯೇ?	ಹೌದು
20	ಸರ್ಕಾರದ ಅನುಧಾನಗಳು ಮತ್ತು ಸಾಲಗಳು	ಯಾವುದು ಇರುವುದಿಲ್ಲ
21	ಆನಿಶ್ಚಿತ (ಕಂಟಿಂಜೆಂಟ್) ಜವಾಬ್ದಾರಿಗಳು	ಯಾವುದು ಇರುವುದಿಲ್ಲ.
22	ದ್ರವ್ಯಾಸ್ತಿಗಳ (ಪ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/ CRR ಗಳ ನಿರ್ವಹಣೆ–ಶಾಖೆಗಳ ವಾರದ DTI ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿ ಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ?	ಹೌದು
23	ನಗದು i) ಶಾಖೆಗಳಲ್ಲಿ ನಗದು ನಿರ್ವಹಣೆ ಮತ್ತು ಮೇಲ್ವಿಚಾರಣೆ ಬಗ್ಗೆ ಇರುವ ವ್ಯವಸ್ಥೆ ii) ನಗದು ಶಿಲ್ಕಿಗೆ ವಿಮಾ ಸೌಲಭ್ಯ ಒದಗಿಸುವ ಬಗ್ಗೆ. (ಚಲಿಸುತ್ತಿರುವ ನಗದನ್ನು ಒಳಗೊಂಡು) iii) ನಗದು ಶಿಲ್ಕಿನ ಭೌತಿಕ ಸ್ವಾಧೀನ – ನಗದು ಯಾರ ವಶದಲ್ಲಿರಬೇಕು ಎಂಬ ಬಗ್ಗೆ ರೂಪಿಸಲಾದ ನಿಯಮ.	ಬ್ಯಾಂಕಿನ ಉಪನಿಯಮ 95ರಂತೆ ಬ್ಯಾಂಕಿನ ನಗದು ಹಣ ಮುಖ್ಯ ಕಾರ್ಯನಿರ್ವಾಹಕರು / ವ್ಯವಸ್ಥಾಪಕರ ಹಾಗೂ ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿಡತಕ್ಕದ್ದು ಹಾಗೂ ಜಂಟಿ ಭದ್ರತೆಯಲ್ಲಿರುವ ಹಣದ ಮಿತಿಯನ್ನು ಮಂಡಳಿಯು ಕಾಲಕಾಲಕ್ಕೆ ನಿಗದಿಪಡಿಸತಕ್ಕದ್ದು. ನಗದು ಶಿಲ್ಕನ್ನು ಕಾಲಕಾಲಕ್ಕೆ ಅಧಿಕೃತರು ಪರೀಕ್ಷಿಸಿರುವುದರ ಬಗ್ಗೆ ಮಾಹಿತಿ ಇರುತ್ತದೆ. ಸದರಿ ಉಪನಿಯಮದಂತೆ ಕಾರ್ಯಕಾರಿ ಮಂಡಳಿಯವರು ಬ್ಯಾಂಕಿನ ಶಿಲ್ಕಿನ ಮಿತಿಯನ್ನು 2.5 ಕೋಟಿ ರೂಗಳಿಗೆ ನಿಗದಿ ಪಡಿಸಿಕೊಂಡಿರುತ್ತಾರೆ.
24	**Call money operations :** ಒಂದು ಬ್ಯಾಂಕಿನಿಂದ ಇನ್ನೊಂದು ಬ್ಯಾಂಕಿನ ನಡುವೆ ಕರೆ ಠೇವಣಿ ವ್ಯವಹಾರಗಳ ಬಗ್ಗೆ ಜಾರಿಯಲ್ಲಿರುವ ವ್ಯವಸ್ಥೆ.	ಮಾರ್ಚ್ ಅಂತ್ಯಕ್ಕೆ 0ಯಾವುದೇ ಬಾಕಿಯಿರುವುದಿಲ್ಲ.
25	ಮೀಸಲು ನಿಧಿ ಮತ್ತು ಹೂಡಿಕೆಗಳು (ಫಂಡ್ಸ್ ಮ್ಯಾನೇಜ್‌ಮೆಂಟ್)	
	ಎ) ನಿಧಿಗಳ ವಿವರಗಳು	ಉಪನಿಯಮ(09)ರಂತೆ ಬ್ಯಾಂಕು ಹೊಂದಿರುವ ನಿಧಿಗಳ ಪೈಕಿ ಕೆಲವು ನಿಧಿಗಳನ್ನು ಬ್ಯಾಂಕಿನ ನಿತ್ಯ ವ್ಯವಹಾರಗಳಿಂದ ಪ್ರತ್ಯೇಕಿಸಿ ಹೊರಗಿನ ವ್ಯವಹಾರಗಳಲ್ಲಿ ತೊಡಗಿಸಲು ಕ್ರಮ ಅಗತ್ಯವಿರುತ್ತದೆ.

	ಬಿ) ಹೂಡಿಕೆಗಳು	ಬ್ಯಾಂಕಿನ ವತಿಯಿಂದ ಹೂಡಿಕೆಗಳ ನಿಯಾಮಾವಳಿಗಳನ್ನು ರಚಿಸಿ ಕೇಂದ್ರ/ರಾಜ್ಯ ಸರ್ಕಾರದ ಹೂಡಿಕೆಗಳನ್ನು ಖರೀದಿಸುವ ಮೊದಲು ಆಡಳಿತ ಮಂಡಳಿಯ ಅನುಮತಿಯನ್ನು ಪಡೆದು ಹೂಡಿಕೆಗಳನ್ನು ಖರೀದಿಸಲಾಗಿರುತ್ತದೆ.
	i) ಆರ್.ಬಿ.ಐ. ಮಾರ್ಗಸೂಚಿಗಳಂತೆ ಬ್ಯಾಂಕಿನ ವಿವಿಧ ಹೂಡಿಕೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನಿಯಮ ಮತ್ತು ಅವುಗಳ ಪಾಲನೆ ಕುರಿತು. ii) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿ ಮಾಡುವ ಕುರಿತು. iii) ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕೆ iv) ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ v) ಆರ್.ಬಿ.ಐ. ಮಾರ್ಗಸೂಚಿಗಳನ್ವಯ Investment portfolio ರಚಿಸಿರುವ ಬಗ್ಗೆ ಮತ್ತು ಹೂಡಿಕೆಗಳ ಮಾ ಏರಿಳಿತಗಳ ಮೇಲೆ ಸವಕಳಿ ಅವಕಾಶ ಕಲ್ಪಿಸಿರುವ ಬಗ್ಗೆ. vi) Investment portfolio ದಲ್ಲಿ ಉಲ್ಲೇಖಿಸದೇ ಇರುವ ಹೂಡಿಕೆಗಳು ಮತ್ತು ಅವುಗಳ ನಗದೀಕರಣ ಬಗ್ಗೆ. vii) SGL/BRs ಪದ್ಧತಿ, ಸಾಲಾಂತ್ಯಕ್ಕೆ ಇರವ SGL/BRs ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ. viii) ಹೂಡಿಕೆಗಳ ನಿರ್ವಹಣೆ ಬಗ್ಗೆ ಬ್ಯಾಂಕಿನವರು ನಿಯತಕಾಲಿಕವಾಗಿ ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ ಮತ್ತು ಪರಿವೀಕ್ಷಣೆ ನಡೆಸುತ್ತಿರುವ ಬಗ್ಗೆ. ix) ಹೂಡಿಕೆಗಳ ಮೇಲಿನ ಆದಾಯವನ್ನು ಲೆಕ್ಕಪತ್ರಗಳಲ್ಲಿ ದಾಖಲಿಸುವ ಬಗ್ಗೆ ಬ್ಯಾಂಕ್ ಅನುಸರಿಸುತ್ತಿರುವ ನಿಯಮಗಳು x) ಹೂಡಿಕೆಗಳ ಮೇಲೆ ಪ್ರಾಪ್ತವಾದ ಆದರೆ ಸ್ವೀಕೃತಿಯಾಗದೆ ಇರುವ ಆದಾಯವನ್ನು ಪರಿಗಣಿಸುವ ಬಗ್ಗೆ ಬ್ಯಾಂಕ್ ಅನುಸರಿಸುತ್ತಿರುವ ನಿಯಮ. xi) ಅವಧಿ ಪೂರ್ಣ ಹೂಡಿಕೆಗಳು ಮತ್ತು ಅವುಗಳನ್ನು ಸಕಾಲದಲ್ಲಿ ನಗದೀಕರಿಸುವ ಬಗ್ಗೆ. xii) ಹೂಡಿಕೆಗಳ ಮೇಲೆ ಸರಾಸರಿ ಆದಾಯ xiii) REPO ಗಳ ಮೇಲೆ ಅನುಸರಿಸುತ್ತಿರುವ ನಿಯಮಗಳು	1.ಆರ್.ಬಿ.ಐ ನಿ0ಯಾಮಾನುಸಾರ ಹೂಡಿಕೆಗಳನ್ನು ಹೂಡಿ ಕಾ0ರ್ಯನಿರ್ವಹಿಸುತ್ತಿದೆ. 2.ಬ್ಯಾಂಕಿನ ವತಿಯಿಂದ ಹೂಡಿಕೆಗಳ ನಿಯಾಮಾವಳಿಗಳನ್ನು ರಚಿಸಿ ಕೇಂದ್ರ/ರಾಜ್ಯ ಸರ್ಕಾರದ ಹೂಡಿಕೆಗಳನ್ನು ಖರೀದಿಸುವ ಮೊದಲು ಆಡಳಿತ ಮಂಡಳಿಯು ಅನುಮತಿಯನ್ನು ಪಡೆದು ಹೂಡಿಕೆಗಳನ್ನು ಖರೀದಿಸಲಾಗಿರುತ್ತದೆ. 3.ನಿಧಿಗಳ ಹೂಡಿಕೆಗಳು ಕಾ0ದ್ದಿಗೆ ಅನುಗುಣವಾಗಿರುತ್ತದೆ ಹಾಗೂ ಲೆಕ್ಕಪತ್ರಗಳು ತಾಳೆಯಿರುತ್ತದೆ. 4.ಬ್ಯಾಂಕಿನಲ್ಲಿ ಎಲ್ಲಾ ಹೂಡಿಕೆಗಳು ಹೆಚ್.ಟಿ.ಎಂ ವರ್ಗಕ್ಕೆ ವರ್ಗಾಯಿಸಿದ್ದು ಅವಕಾಶಗಳನ್ನು ಕಲ್ಪಿಸುವ ಅವಶ್ಯಕತೆ ಕಂಡುಬರುವುದಿಲ್ಲ. ಆದರೆ 10 ಲಕ್ಷ ರೂಪಾಯಿಗಳನ್ನು ಹೂಡಿಕೆಗಳ ಏರಿಳಿತ ನಿದಿ0ಯಲ್ಲಿ ಇಡಲಾಗಿದೆ. 5.ಎಲ್ಲಾ ಹೂಡಿಕೆಗಳು ಪರಿಪಕ್ವತೆ0ಯ ವರ್ಗದಲ್ಲಿರುತ್ತವೆ ಹಾಗೂ ಅವಕಾಶಗಳನ್ನು ಕಲ್ಪಿಸುವ ಅವಶ್ಯಕತೆ ಕಂಡುಬರುವುದಿಲ್ಲ. 6.0ಯಾವುದು ಇರುವುದಿಲ್ಲ. 7. ಕೆಂದ್ರ /ರಾಜ್ಯ ಹೂಡಿಕೆ ಮತ್ತು ಇತರೆ ಹೂಡಿಕೆ ಬಗ್ಗೆ ರಿಜಿಸ್ಟರ್ ಇಟ್ಟಿದ್ದು ಈ ಬಗ್ಗೆ ಪರಿಶೀಲಿಸಲಾಗಿದೆ. ಬ್ಯಾಂಕು ಎಸ್.ಜಿ.ಎಲ್ ಖಾತೆ0ಯನ್ನು ಹೆಚ್.ಡಿಎಫ್.ಸಿ ಬ್ಯಾಂಕಿನಲ್ಲಿ ನಿರ್ವಹಿಸಿದ್ದು ಅಂತಿಮ ಶಿಲ್ಕಿಗೆ ತಾಳೆ ಇರುತ್ತದೆ. 8. ಕಾಲಕಾಲಕ್ಕೆ ಸಮವರ್ತಿ ಇದ್ದು ತ್ರೈಮಾಸಿಕವಾಗಿ ಆಂತರೀಕ ಲೆಕ್ಕಪರಿಶೋಧಕರು ಪ್ರಮಾಣ ಪತ್ರವನ್ನು ನೀಡುತ್ತಿದ್ದು ಇದನ್ನು ಆರ್.ಬಿ.ಐಗೆ ಸಲ್ಲಿಸಲಾಗುತ್ತಿದೆ. 9.ಕಾಲಕಾಲಕ್ಕೆ ಕೆಂದ್ರ/ರಾಜ್ಯ ಹೂಡಿಕೆಗಳು ಹಾಗೂ ಇತರೆ ಹೂಡಿಕೆಗಳಿಂದ ಬಂದಂತಹ ಆದಾ0ಯವನ್ನು ಪಡೆ0ಯಲಾಗುತ್ತಿದೆ. 10. 0ಯಾವುದು ಇರುವುದಿಲ್ಲ. 11. 0ಯಾವುದೇ ಹೂಡಿಕೆಗಳು ಪಕ್ವವಾದ ನಂತರ ನವೀಕರಿಸುವ/ವಾಪಸ್ಸು ಪಡೆ0ಯುವ ಪದ್ದತಿ0ಯನ್ನು ಅನುಸರಿಸಲಾಗುತ್ತಿದೆ. ಅದೇ ರೀತಿ ಕೆಂದ್ರ/ರಾಜ್ಯ ಸರ್ಕಾರದ ಹೂಡಿಕೆಗಳು ಪಕ್ವವಾದ ಪಕ್ಷದಲ್ಲಿ ಅವುಗಳನ್ನು ಚಾಲ್ತಿ ಖಾತೆಗೆ ವರ್ಗಾಯಿಸುವ ಪದ್ದತಿಯಿರುತ್ತದೆ. 12. ಹೂಡಿಕೆಗಳ ಮೇಲೆ ಚಾಲ್ತಿ ವರ್ಷದಲ್ಲಿ ರೂ.499.75 ಲಕ್ಷಗಳು ಬಡ್ಡಿ ಬಂದಿರುತ್ತದೆ. 13.ಆರ್.ಬಿ.ಐ ನಿಯಾಮಾನುಸಾರ ಬ್ಯಾಂಕಿನ ಒಟ್ಟು ರೂ.4794.75 ಲಕ್ಷ ಮೊತ್ತವನ್ನು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ ಹೂಡಿಕೆ ಮಾಡಿದ್ದು ಅವುಗಳನ್ನು ಪರಿಪಕ್ವತೆಯ ವರ್ಗದಲ್ಲಿ ವರ್ಗೀಕರಿಸಲಾಗಿರುವುದರಿಂದ ಹೂಡಿಕೆಗಳ ಏರಿಳಿತ ಮೀಸಲು ನಿದಿಯನ್ನು ನಿರ್ವಹಿಸುವ ಅವಶ್ಯಕತೆ ಇರುವುದಿಲ್ಲ.

<table>
<tr><td>26</td><td>ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:</td><td></td></tr>
<tr><td></td><td>I. ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ.</td><td>
<table>
<tr><td>ಕ್ರ</td><td>ಖಾತೆಗಳ ವಿವರ</td><td>ಮೊಬಲಗು</td></tr>
<tr><td>ಕ್ರ ಸ ಂ</td><td>ಹೂಡಿಕೆ ಸ್ವರೂಪ</td><td>31.3.2026ಕ್ಕೆ ಮೊಬಲಗು (ಲಕ್ಷಗಳು)</td></tr>
<tr><td>1</td><td>ಸರ್ಕಾರಿ ಭದ್ರತಾಠೇವಣಿ</td><td>4794.75</td></tr>
<tr><td>2</td><td>ಬಿ.ಡಿ. ಮತ್ತು ಬಿ.ಆರ್.ಡಿ.ಸಿ.ಸಿ. ಬ್ಯಾಂಕು – ಆರ್.ಎಫ್.ಡಿ</td><td>943.50</td></tr>
<tr><td>3</td><td>ಅಪೆಕ್ಸ್ ಬ್ಯಾಂಕ್–ಎಫ್.ಡಿ</td><td>470.00</td></tr>
<tr><td>4</td><td>ಐ.ಡಿ.ಬಿ.ಐ ಬ್ಯಾಂಕ್– ಮಲ್ಲೇಶ್ವರಂ ಶಾಖೆ</td><td>950.00</td></tr>
<tr><td>5</td><td>ಬಿ.ಡಿ. ಮತ್ತು ಬಿ.ಆರ್.ಡಿ.ಸಿ.ಸಿ. ಬ್ಯಾಂಕು –.ಎಫ್.ಡಿ</td><td>104.03</td></tr>
<tr><td>6</td><td>ಹೆಚ್.ಡಿ,ಫ್.ಸಿ ಬ್ಯಾಂಕ್ ಎಫ್ಡಿ</td><td>735.00</td></tr>
<tr><td>7</td><td>ಕರ್ನಾಟಕ ಬ್ಯಾಂಕ್ ಎಫ್ಡಿ</td><td>1080.00</td></tr>
</table>
ಮೇಲ್ಕಂಡ ಬಾಬ್ತುಗಳಿಗೆ ಎಲ್ಲವು ದೃಢೀಕರಣ ಹಾಜರಿದ್ದು ತಾಳೆ ಇರುತ್ತದೆ. ಉಪನಿಯಮ (09) ರಂತೆ ಬ್ಯಾಂಕು ಹೊಂದಿರುವ ನಿಧಿಗಳ ಪೈಕಿ ಕೆಲವು ನಿಧಿಗಳನ್ನು ಬ್ಯಾಂಕಿನ ನಿತ್ಯ ವ್ಯವಹಾರಗಳಿಂದ ಪ್ರತ್ಯೇಕಿಸಿ ಹೊರಗಿನ ವ್ಯವಹಾರಗಳಲ್ಲಿ ತೊಡಗಿಸಲು ಕ್ರಮ ಅಗತ್ಯವಿರುತ್ತದೆ</td></tr>
<tr><td></td><td>II. SLR ಹೂಡಿಕೆಗಳನ್ನು AFS, HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ?</td><td>ಹೌದು</td></tr>
<tr><td></td><td>III. ರೂ.100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ?</td><td>ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ ಹೂಡಿಕೆ ಮಾಡಿದ್ದು ಅವುಗಳನ್ನು ಪರಿಪಕ್ವತೆಯ ವರ್ಗದಲ್ಲಿ ವರ್ಗೀಕರಿಸಲಾಗಿರುವುದರಿಂದ ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸುವ ಅವಶ್ಯಕತೆ ಇರುವುದಿಲ್ಲ.</td></tr>
</table>

27) **ಸಾಲ ಮತ್ತು ಮುಂಗಡಗಳು:**

<table>
<tr><td colspan="2">ಮುಂಗಡಗಳು:</td></tr>
<tr><td>ಎ) ಸಾಲ ವಿತರಣೆ ನಿಯಮ:
ಸಾಲ ವಿತರಣೆ ಬಗ್ಗೆ ಬ್ಯಾಂಕ್‌ನಲ್ಲಿ ಅಸ್ತಿತ್ವದಲ್ಲಿರುವ ಮತ್ತು ಅನುಸರಣೆಯಲ್ಲಿರುವ ನಿಯಮಗಳು – ವಿವೇಕ ಪೂರ್ಣ ಮಾನದಂಡಗಳು, ಕೈಗಾರಿಕಾ ವಲಯಕ್ಕೆ ನಿಗದಿಪಡಿಸಿದ ಸಾಲದ ಮಿತಿ ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸುವ ಬಗ್ಗೆ, ಹತೋಟಿ ಮತ್ತು ಅನುಪಾಲನೆ ಬಗ್ಗೆ.</td><td>ಬ್ಯಾಂಕಿನ ಉಪನಿಯಮ 70ರಂತೆ ಕಾರ್ಯಕಾರಿ ಮಂಡಳಿಯು ಸಾಲ ಮತ್ತು ಮುಂಗಡಗಳನ್ನು ಮಂಜೂರು ಮಾಡುವ ಮುನ್ನಾ ಭಾರತೀಯ ರಿಜರ್ವ ಬ್ಯಾಂಕ್ ಮತ್ತು ನಿಬಂಧಕರು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳಿಗೆ ಅನುಗುಣವಾಗಿರತಕ್ಕದ್ದು</td></tr>
<tr><td>ಬಿ) ಸಾಲಗಳ ಮೌಲ್ಯಾಂಕನ (Credit Appraisal)
ಸಾಲಗಳ ಮೌಲ್ಯಾಂಕನಕ್ಕಾಗಿ ಉತ್ತಮ ಪದ್ಧತಿಯನ್ನು ಹೊಂದಲಾಗಿದೆಯೇ? ಹಾಗೂ ಸಾಲಗಾರರು ಸಾಲ ಪಡೆಯುವ ಅರ್ಹತೆಯನ್ನು ಹೊಂದಿರುವುದನ್ನು ನಿರ್ಧರಿಸುವುದಕ್ಕೆ ಸಾಕಷ್ಟು ಅಂಕಿ ಅಂಶಗಳನ್ನು / ಮಾಹಿತಿಗಳನ್ನು ಹೊಂದಲಾಗಿದೆಯೇ ಮತ್ತು ಅವುಗಳನ್ನು ಪಾಲಿಸಲಾಗುತ್ತಿದೆಯೇ?</td><td>ಸಾಲಗಳ ಮೌಲ್ಯಾಂಕನ (credit appraisal) ಕ್ಕಾಗಿ ಅಗತ್ಯ ದಾಖಲೆಗಳನ್ನು ಪಡೆಯುತ್ತಿರುವುದು ತನಿಖೆ ಕೈಗೊಳ್ಳುತ್ತಿರುವುದು, ಸಾಕಷ್ಟು ಭದ್ರತೆಗಳನ್ನು ಪಡೆಯುತ್ತಿರುವುದು, ಸವಿವರವಾಗಿ ಟಿಪ್ಪಣಿಗಳನ್ನು ದಾಖಲೆ ಮಾಡುತ್ತಿರುವುದು, ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆಯುತ್ತಿರುವುದು, ಸ್ಥಿರಾಸ್ತಿಯನ್ನು ಅಧಿಕೃತ ಮೌಲ್ಯ ಮಾಪಕರಿಂದ ಧೃಢೀಕರಿಸಿಕೊಳ್ಳುತ್ತಿರುವುದು, ಸಾಲಗಾರರು ಸಾಲ ಪಡೆಯುವ ಅರ್ಹತೆ ಬಗ್ಗೆ, ಆದಾಯ ಮೂಲಗಳನ್ನು ಖಚಿತಪಡಿಸಿಕೊಳ್ಳುತ್ತಿರುವುದು – ಇವೇ ಮೊದಲಾದ ಉತ್ತಮ ಪದ್ಧತಿಯನ್ನು ಅನುಸರಿಸುತ್ತಿರುವುದನ್ನು ಗಮನಿಸಿದೆ.</td></tr>
<tr><td>ಸಿ) ಸಾಲ ಮಂಜೂರಾತಿ/ ವಿತರಣೆ
ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?</td><td>ಬ್ಯಾಂಕಿನ ಸಾಲ ಮಂಜೂರಾತಿ0ಯ ಎಲ್ಲಾ ಹಕ್ಕುಗಳನ್ನು ಆಡಳಿತ ಮಂಡಳಿ ಹೊಂದಿರುತ್ತದೆ. ಠೇವಣಿಆದಾರಿತ ಸಾಲಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಮಾತ್ರ ಆ0ಯಾ ಶಾಖಾ ವ್ಯವಸ್ಥಾಪಕರು ಹೊಂದಿರುತ್ತಾರೆ. ಶಾಖಾ ವ್ಯವಸ್ಥಾಪಕರು ನೀಡಿರುವ ಠೇವಣಿ ಆದಾರಿತ ಸಾಲಗಳಿಗೆ ನಿರ್ದೇಶಕರ ಮಂಡಳಿಯಿಂದ ಘಟೋನೋತ್ತರ ಅನುಮತಿ ಪಡೆ0ಯಲಾಗುತ್ತಿದೆ. ಸಾಲ ಮಂಜೂರಾತಿ0ಯು ನಿಬಂದನೆಗಳನ್ನು ಮತ್ತು ದಾಖಲೆಗಳನ್ನು ಪಡೆದ ನಂತರ ಸಾಲ ಬಿಡುಗಡೆ ಮಾಡುವಕ್ರಮ ವಿರಿಸಿರುತ್ತಾರೆ.</td></tr>
</table>

	ಬ್ಯಾಂಕಿನ ಉಪನಿಯಮ 70ರಂತೆ ನಿ0ಯಾಮಾನುಸಾರ ಕಾರ್ಯಕಾರಿ ಮಂಡಳಿಯು ಸಾಲ ಮತ್ತು ಮುಂಗಡಗಳನ್ನು ಮಂಜೂರು ಮಾಡುವ ಮುನ್ನಾ ಭಾರತೀಯ ರಿಜರ್ವ್ ಬ್ಯಾಂಕ್ ಮತ್ತು ನಿಬಂಧಕರು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳಿಗೆ ಅನುಗುಣವಾಗಿರುತ್ತದೆ.
ಡಿ) ದಾಖಲೀಕರಣ ಸಂಗ್ರಹಣೆ (Documentation)	
ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿ ಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances)	ಸಾಲಗಳ ಮೌಲ್ಯಾಂಕನ (credit appraisal)ಕ್ಕಾಗಿ ಅಗತ್ಯ ದಾಖಲೆಗಳನ್ನು ಪಡೆಯುತ್ತಿರುವುದು ತನಿಖೆ ಕೈಗೊಳ್ಳುತ್ತಿರುವುದು, ಸಾಕಷ್ಟು ಭದ್ರತೆಗಳನ್ನು ಪಡೆಯುತ್ತಿರುವುದು, ಸವಿವರವಾಗಿ ಟಿಪ್ಪಣಿಗಳನ್ನು ದಾಖಲೆ ಮಾಡುತ್ತಿರುವುದು, ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆಯುತ್ತಿರುವುದು, ಸ್ಥಿರಾಸ್ತಿಯನ್ನು ಅಧಿಕೃತ ಮೌಲ್ಯ ಮಾಪಕರಿಂದ ಧೃಢೀಕರಿಸಿಕೊಳ್ಳುತ್ತಿರುವುದು, ಸಾಲಗಾರರು ಸಾಲ ಪಡೆಯುವ ಅರ್ಹತೆ ಬಗ್ಗೆ, ಆದಾಯ ಮೂಲಗಳನ್ನು ಖಚಿತಪಡಿಸಿಕೊಳ್ಳುತ್ತಿರುವುದು – ಇವೇ ಮೊದಲಾದ ಉತ್ತಮ ಪದ್ಧತಿಯನ್ನು ಅನುಸರಿಸುತ್ತಿರುವುದನ್ನು ಗಮನಿಸಿದೆ. ಕೆಲವೊಮ್ಮೆ ವ್ಯವಸ್ಥಾಪಕರು ಆದಾಯ ತೆರಿಗೆಯ ರಿಟರ್ನ್ಗಳ ಆಧಾರದ ಮೇಲೆ ಸೂಚಿಸಿರುವ ಮೊತ್ತಕ್ಕಿಂತ ಅಧಿಕ ಪ್ರಮಾಣದಲ್ಲಿ ಆಡಳಿತ ಮಂಡಳಿಯು ಸಾಲಗಳನ್ನು ಮಂಜೂರು ಮಾಡಲಾಗುತ್ತದೆ. ಅಂತಹ ಸನ್ನಿವೇಶಗಳಲ್ಲಿ ಆಡಳಿತ ಮಂಡಳಿಯು ಸಾಲಗಾರರ ಸಂಪಾದನೆಯ ಸಾಮರ್ಥ್ಯಕ್ಕಗನುಸಾರವಾಗಿ ಮಂಜೂರಾತಿ ಮಾಡುತ್ತದೆ.
ಇ) ನವೀಕರಣ/ ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ: i) ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ ಹಾಗೂ ಅವುಗಳ ಒಪ್ಪಿಕೊಳ್ಳುವಿಕೆ. ii) ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿ ಯಾಗುತ್ತಿರುವ ಬಗ್ಗೆ. iii) ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ. iv) ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ. v) ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ. vi) ನಿಯತಕಾಲಿಕವಾಗಿ ದಾಸ್ತಾನು ಪರಿಶೋಧನೆ ನಿರ್ವಹಿಸುತ್ತಿರುವ ಬಗ್ಗೆ. vii) ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ viii) ಕ್ರೆಡಿಟ್ ರೇಟಿಂಗ್ ನೀಡುವಾಗ ಪಾಲಿಸುತ್ತಿರುವ ಮಾನದಂಡಗಳು ix) ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI) x) ಲೀಸಿಂಗ್, ಹೈಯರ್ ಪರ್ಚೇಸ್ ಮತ್ತು ಕ್ರೆಡಿಟ್ ಕಾರ್ಡ್ ವ್ಯವಹಾರಗಳ ಸುಸ್ತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತು ಮೇಲ್ವಿಚಾರಣಾ ವ್ಯವಸ್ಥೆ. xi) ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ. xii) ಸೌಲಭ್ಯಗಳ ನವೀಕರಣ	i) ಬ್ಯಾಂಕು ವಿತರಿಸದ ಸಾಲಗಳ ಪುನರ್ ಪರಿಶೋದನೆಯನ್ನು ಕಾಲಕಾಲಕ್ಕೆ ಕೈಗೊಳ್ಳುತ್ತಿದೆ. ಕೆಲವು ಸಾಲಗಾರರಿಂದ ಧೃಢೀಕರಣ ಪಡೆಯಲಾಗಿರುತ್ತದೆ. ii) ದಾಸ್ತಾನಿನ ಆಧಾರದ ಮೇಲೆ ಯಾವುದೇ ಸಾಲಗಳು ಇರುವುದಿಲ್ಲ. iii) ಭಾರತೀಯ ರಿಸರ್ವ ಬ್ಯಾಂಕಿನ ಮಾರ್ಗ ಸೂತ್ರದ ಅನುಸಾರ ಕಾರ್ಪೋರೇಟರ್‌ರೆತರ ಸಾಲಗಳಿಗೆ ಸಂಬುಧಿಸಿದಂತೆ ರೂ.10.00ಲಕ್ಷಗಳಿಗಿಂತ ಹೆಚ್ಚು ಸಾಲ ನೀಡಿದ ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆ ಕಡ್ಡಾಯವಾಗಿದ್ದು ಪಡೆಯಬೇಕಾಗಿದ್ದು ಪಡೆದಿರುವುದಿಲ್ಲ. iv) ಸದರಿ ಮಾಹಿತಿಗಳನ್ನು ಪಡೆ0ಯುವ ಬಗ್ಗೆ ಅನುಸರಿಸುವ ಪದ್ದತಿ0ಯಾಗಲೀ ಹಿಂಬಾಲಿಕೆ ಕ್ರಮವಾಗಲಿ ಇಟ್ಟಿರುವುದಿಲ್ಲ v) ಅನ್ವಯಿಸುವುದಿಲ್ಲ (ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇದಕ್ಕೆ ಸಂಬಂದಪಟ್ಟ ಅದಾರದ ಮೇಲೆ ಯಾವುದೇ ಸಾಲವನ್ನು ನೀಡಿರುವುದಿಲ್ಲ) vi) ಅಂತಹ ಯಾವ ಪ್ರಕರಣಗಳು ಇರುವುದಿಲ್ಲ vii) ಅಂತಹ ಯಾವ ಪ್ರಕರಣಗಳು ಇರುವುದಿಲ್ಲ viii) ಅಂತಹ ಯಾವ ಪ್ರಕರಣಗಳು ಇರುವುದಿಲ್ಲ ix) (Allotment Health Code of RBI) ಈ ಪದ್ದತಿ ಜಾರಿಯಲ್ಲಿರುವುದಿಲ್ಲ. ಆರ್.ಬಿ.ಐ ನವರು ದಿನಾಂಕ 01.12.2015ರಂದು ನೀಡಿರುವ ಸುತ್ತೋಲೆಯಂತೆ ಈ ಪದ್ದತಿಯನ್ನು ಕೈಬಿಡಲಾಗಿದೆ. x) ಅಂತಹ ಯಾವ ಪ್ರಕರಣಗಳು ಇರುವುದಿಲ್ಲ. xi) ನಿಗದಿತ ಮಿತಿ0ಯೊಳಗೆ ಸುತ್ತೋಲೆ0ಯಂತೆ ಸಾಲವನ್ನು ಮಂಜೂರು ಮಾಡಲಾಗುತ್ತಿದೆ xii) ಲೆಕ್ಕಪರಿಶೋಧನಾ ವರದಿ ಸಾಲಿನಲ್ಲಿ ಕೈಗಾರಿಕೆಗಳಿಗೆ ಸಾಲ ಮಂಜೂರು ಮಾಡಿರುವುದಿಲ್ಲ. xiii) ಅಂತಹ ಯಾವ ಪ್ರಕರಣಗಳು ಇರುವುದಿಲ್ಲ.

xiii) ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.	
(ಎಫ್) ಕರಡು ಮತ್ತು ಸಂಶಯಾಸ್ಪದ ಸಾಲಗಳು: i) ಸಾಲ ವಸೂಲಾತಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿರುವ ವ್ಯವಸ್ಥೆಗಳು ಮತ್ತು ಕಾಲಕಾಲಕ್ಕೆ ಇವುಗಳನ್ನು ಪರಿಷ್ಕರಿಸಿ ಅನುಸರಿಸುತ್ತಿರುವ ಬಗ್ಗೆ ಹಾಗೂ ಈ ಕುರಿತು ಆರ್.ಬಿ.ಐ. ಮಾರ್ಗಸೂಚಿಗಳ ಪಾಲನೆ ಬಗ್ಗೆ. ii) ಬ್ಯಾಂಕ್ ವಿತರಿಸಿದ ಕ್ರೆಡಿಟ್ ಕಾರ್ಡ್‌ಗಳಲ್ಲಿ ಕ್ರೆಡಿಟ್ ಕಾರ್ಡ್ ಸಾಲ ವಸೂಲಾತಿ ಬಗ್ಗೆ. iii) ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ iv) ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ v) ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ. vi) ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು DICGC/ECGC ಯನ್ನೊಳಗೊಂಡಂತೆ. vii) ಪುನ: ಸ್ಪಷ್ಟೀಕರಣದ (Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ viii) ಸಾಲ ವಸೂಲಾತಿ ಮೊಬಲಗನ್ನು ಸಾಲದ ಅಸಲಿಗೆ, ಬಡ್ಡಿಗೆ ಹೊಂದಾಣಿಕೆ ಮಾಡುವ ಬಗ್ಗೆ ಇರುವ ವ್ಯವಸ್ಥೆ. ix) ರಾಜಿ ಸಂಧಾನದ ಮೂಲಕ ಏಕಕಾಲದಲ್ಲಿ ಸಾಲಗಳನ್ನು ಇತ್ಯರ್ಥಗೊಳಿಸಿರುವ ಪ್ರಕರಣಗಳು – ರೂ.1.00ಕೋಟಿಗೂ ಮೀರಿದ ಇಂತಹ ಪ್ರಕರಣಗಳು ಮತ್ತು ಆರ್.ಬಿ.ಐ. ನಿಗದಿಗೊಳಿಸಿರುವ ಮಿತಿಗಿಂತ ಹೆಚ್ಚಿನ ಮೊಬಲಗು ವಿನಾಯಿತಿ ನೀಡಿರುವ ಪ್ರಕರಣಗಳ ಬಗ್ಗೆ. x) ಸಕ್ಷಮ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು xi) ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ. xii) ಉದ್ದೇಶಪೂರ್ವಕ ಸುಸ್ತಿದಾರರನ್ನು ಗುರುತಿಸುವ ಬಗ್ಗೆ ಮತ್ತು ಇಂತಹ ಪ್ರಕರಣಗಳನ್ನು ವರದಿ ಮಾಡುವ ಬಗ್ಗೆ ಬ್ಯಾಂಕಿನ ನಿಯಮಗಳು.	1.ಸಾಲ ವಸೂಲಾತಿಗೆ ಸಂಬಂದಪಟ್ಟಂತೆ ಪ್ರತಿ ಮಾಹೆ ಆಡಳಿತ ಮಂಡಳಿ0ಯಲ್ಲಿ ಚರ್ಚಿಸಿ ಸಾಲ ವಸೂಲಾತಿಗೆ ಕ್ರಮ ಕೈಗೊಂಡಿರುತ್ತಾರೆ. ಅದೇ ರೀತಿ ಸುಸ್ತಿ0ಯಾದ ಸಾಲಗಾರರಿಗೆ ನೋಟಿಸನ್ನು ನೀಡಿ ಹಾಗೂ ಸಾಲಗಾರರ ವಾಸಸ್ಥಳಕ್ಕೆ ಭೇಟಿ ನೀಡಿ ನಿ0ಯಾಮಾನುಸಾರ ವಸೂಲಾತಿ ಮಾಡಲಾಗುತ್ತಿದೆ. 2.0ಯಾವುದು ಇರುವುದಿಲ್ಲ. 3.ಭಾರತೀಯ ರಿಸರ್ವ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ವಯ ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಿತಿಗಳನ್ನು ಕಲೆ ಹಾಕುವಲ್ಲಿ ಪರಿಣಾಮಕಾರಿ ಪದ್ಧತಿ ಅನುಸರಿಸುವುದನ್ನು ಗಮನಿಸಿದೆ ಮತ್ತು ವಾಸ್ತವವಾಗಿ ಕಾದಿರಿಸಬೇಕಾದ ಮೊತ್ತಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಾದಿರಿಸಿರುತ್ತದೆ, ಅವಕಾಶ ಕಲ್ಪಿಸಿರುವುದರಲ್ಲಿ ಯಾವುದೇ ಕೊರತೆ ಇರುವುದಿಲ್ಲ 4.ಬ್ಯಾಂಕು ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಪರಿಶೀಲಿಸಿ ಮತ್ತು ವಿವರಗಳನ್ನು ಕಲೆ ಹಾಕುವಲ್ಲಿ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದೆ.ದಿನಾಂಕ 31.03.2026 ಕ್ಕೆ ಕರಡು ಮತ್ತು ಸಂಶಯಾಸ್ಪದ ಸಾಲಗಳ ಅವಕಾಶ ರೂ 105.05 ಲಕ್ಷ ಅವಶ್ಯವಿದ್ದು, ಈಗಾಗಲೆ ಕರಡು ಮತ್ತು ಸಂಶಯಾಸ್ಪದ ಸಾಲಗಳ ಅವಕಾಶ ರೂ 490 ಲಕ್ಷ ಕಲ್ಪಿಸಲಾಗಿದೆ. 5.ಭಾರತೀಯ ರಿಸರ್ವ ಬ್ಯಾಂಕ್ ಮಾರ್ಗಸೂಚಿಯಂತೆ ಸಾಲಗಳ ಮೇಲೆ ಬಡ್ಡಿಯನ್ನು ಸಾಲದ ಖಾತೆಗಳಿಗೆ ವಿಧಿಸದೆ ಅದನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದೆ. 6.ಭದ್ರತಾ ಸಾಲಗಳನ್ನು ಸಾಕಷ್ಟು ಹೆಚ್ಚಿನ ಮೌಲ್ಯದ ಆಸ್ತಿ ಭದ್ರತೆ ಪಡೆದು ನೀಡಲಾಗಿದೆ. ಪುನ: ಸ್ಪಷ್ಟೀಕರಣ ಸಾಲದ ಪ್ರಕರಣಗಳು ಯಾವುದು ಇರುವುದಿಲ್ಲ. 7.ಯಾವುದು ಇರುವುದಿಲ್ಲ. 8. ಸಾಲಗಳ ಮೇಲೆ ವಸೂಲಾತಿ0ಯನ್ನು ಮಾಡಿದಂತಹ ಸಂದರ್ಬದಲ್ಲಿ ಮೊದಲು ಇತರೆ ವೆಚ್ಚಗಳು, ಸುಸ್ತಿಬಡ್ಡಿ ನಂತರ ಅಸಲಿಗೆ ಪಡೆಯುವಂತಹ ಪದ್ಧತಿ0ಯನ್ನು ಅನುಸರಿಸಲಾಗುತ್ತಿದೆ. 9.0ಯಾವುದು ಇರುವುದಿಲ್ಲ. 10.0ಯಾವುದು ಇರುವುದಿಲ್ಲ. 11.ಪ್ರತಿ ಮಾಹೆ ಸಾಲ ವಸೂಲಾತಿ ಆಡಳಿತ ಮಂಡಳಿ0ಯಲ್ಲಿ ಹಮ್ಮಿಕೊಂಡ ಯೋಜನೆ ಮತ್ತು ವಿಧಿ ವಿಧಾನಗಳನ್ನು ಸಾಲ ಸಾಧಿಸಲ್ಪಟ್ಟ ಪ್ರಗತಿಯನ್ನು ಆಡಳಿತ ಮಂಡಳಿ ಸಭೆಯಲ್ಲಿ ವಿಮರ್ಷಿಸಲಾಗುತ್ತಿರುವುದನ್ನು ಗಮನಿಸಿದೆ 12.ಸಾಲಗಾರರನ್ನು ಗುರುತಿಸುವ ಬಗ್ಗೆ ಸಾಲ ನೀಡುವ ಮೊದಲು ಹಾಗೂ ನಂತರ ಅವರ ವಿಳಾಸಗಳಿಗೆ ಭೇಟಿ ನೀಡಿ ವಸೂಲಾತಿ0ಯನ್ನು ಮಾಡಲಾಗುತ್ತಾ ಬಂದಿದ್ದು ಇದರಿಂದ ಸಾಲಗಾರರು ಕೂಡ ಬ್ಯಾಂಕಿಗೆ ಭೇಟಿ ನೀಡಿ ಸಾಲ ಜಮಾ ಮಾಡುವ ಪದ್ಧತಿ0ಯು ಬ್ಯಾಂಕಿನಲ್ಲಿ ಕಂಡುಬಂದಿರುತ್ತದೆ.
ಜಿ) ದೊಡ್ಡ ಪ್ರಮಾಣ ಸಾಲ/ ಮುಂಗಡಗಳು: ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.	ಸಾಲಕ್ಕೆ ಆಧಾರವಾಗಿ ಪಡೆದ ಕೆಲವು ಸಾಲಗಳ ಸ್ಥಿರಾಸ್ತಿಗಳಿಗೆ ವಿಮೆ ಪಾಲಿಸಿ ಪಡೆದಿರುವುದಿಲ್ಲ.

ದಿನಾಂಕ: 31–03–2026 ರ ಅಂತ್ಯಕ್ಕೆ ಬಾಕಿ ಬರಬೇಕಾದ ಸಾಲ ಮತ್ತು ಮುಂಗಡಗಳು

ಸಾಲದ ಸ್ವರೂಪ	ವರ್ಷಾಂತ್ಯದ ಬಾಕಿ
ನಿಗದಿತ ಠೇವಣಿ ಸಾಲ	139.34
ಆವರ್ತ ಠೇವಣಿ ಸಾಲ	0.00
ನಗದು ಪತ್ರದ ಸಾಲ	1.81
ಪಿಗ್ಮಿ ಠೇವಣಿ ಮೇಲೆ ಸಾಲ	66.08
ಜಾಮೀನುಸಾಲ	14.46
ಸಂಬಳಾದಾರ ಸಾಲಗಳು	5.36
ವಾಹನ ಸಾಲ	475.22
ಗೃಹಸಾಲ	7702.29
ಅಡಮಾನ ಸಾಲ	9068.82
ಸಿಬ್ಬಂದಿ ಸಾಲಗಳು	38.21
ಚಿನ್ನಾಭರಣ ಸಾಲ	213.34
ಸಿಬ್ಬಂದಿ ವಾಹನ ಸಾಲ	5.75
ಪಿಗ್ಮೆ ಭದ್ರತಾ ಠೇವಣಿ ಸಾಲ	8.14
ಒಟ್ಟು ರೂ	**17738.82**

28 ಸುಸ್ತಿ ಸಾಲಗಳ ವಿವರ — ವರ್ಷಾಂತ್ಯಕ್ಕೆ ಬ್ಯಾಂಕಿನಿಂದ ನೀಡಿರುವ ಒಟ್ಟು ಸಾಲ ರೂ. 17738.82,ಲಕ್ಷ ಆಗಿದ್ದು ಈ ಪೈಕಿ ಒಟ್ಟು ರೂ.131.98 ಲಕ್ಷ ಸಾಲ ಸುಸ್ತಿಯಾಗಿರುತ್ತದೆ.

1) ಶೇಕಡಾವಾರು ಸುಸ್ತಿ ಸಾಲಗಳ ಬಗ್ಗೆ ವಿಮರ್ಶೆ — ಒಟ್ಟು ಸಾಲದ ಶೇಕಡ 0.74% ಆಗಿರುತ್ತದೆ.

2) ದಿನಾಂಕ 30–03–2026 ಕ್ಕೆ ಇದ್ದಂತೆ ಸುಸ್ತಿ ಸಾಲಗಳ ವರ್ಗೀಕರಣ – ವರ್ಗವಾರು

ಕ್ರ	ಅವಧಿ	ಎಲ್ಲಾ ರೀತಿಯ ಆದಾರ, ಠೇವಣಿ, ಸಿಬ್ಬಂದಿ ಮತ್ತು ಆದಾರರಹಿತ ಸಾಲಗಳು
1	ಒಂದು ವರ್ಷದೊಳಗೆ	74.27
2	1 ರಿಂದ 2 ವರ್ಷದೊಳಗೆ	35.28
3	2 ರಿಂದ 3 ವರ್ಷದೊಳಗೆ	0.3
4	3 ರಿಂದ 4 ವರ್ಷದೊಳಗೆ	0.13
5	4 ರಿಂದ 5 ವರ್ಷದೊಳಗೆ	3.82
6	5 ರಿಂದ 6 ವರ್ಷದೊಳಗೆ	18.18
	ಒಟ್ಟು ರೂ.	**131.98**

3) ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು) — ದಿ.31.03.2026ರ ಅಂತ್ಯಕ್ಕೆ ಬ್ಯಾಂಕಿನಿಂದ ನೀಡಿರುವ ಒಟ್ಟು ರೂ.17,738.82 ಲಕ್ಷ ಸಾಲದಲ್ಲಿ ರೂ.319.78 ಲಕ್ಷ ಸಾಲಗಳು ಅನುತ್ಪಾದಕ ಆಸ್ತಿ ಸಾಲಗಳು ಆಗಿರುತ್ತದೆ. ಈ ಬಗ್ಗೆ ಒಟ್ಟು 105.05 ಲಕ್ಷ ಅವಕಾಶ ಕಲ್ಪಿಸಬೇಕಾಗಿತ್ತು. ಪ್ರಸಕ್ತ ಸಾಲಿನಲ್ಲಿ ಅನುತ್ಪಾದಕ ಆಸ್ತಿಯ ಮೇಲೆ ಅವಕಾಶವೆಂದು ರೂ.35 ಲಕ್ಷ ಬಾಂಕಿನ 2024–25ನೇ ಸಾಲಿನ ಲಾಭದ ವಿನಿಯೋಗದಿಂದ ಕಲ್ಪಿಸಿದ್ದು, ಬ್ಯಾಂಕಿನಲ್ಲಿ ಈ ಬಗ್ಗೆ ಒಟ್ಟು 490 ಲಕ್ಷ ಕರಡು ಮತ್ತು ಸಂಶಯಾಶ್ಪಕ ನಿಧಿ ಇರುತ್ತದೆ. ದಿ.31.03.2026ಕ್ಕೆ ಬ್ಯಾಂಕ್ ಗ್ರಾಸ್ ಎನ್.ಪಿ.ಎ. 1.80% ಹಾಗೂ ನಿವ್ವಳ ಎನ್.ಪಿ.ಎ ಶೇ.–0.99 ರಷ್ಟು ಇರುತ್ತದೆ. ದೃಢೀಕರಿಸಿದ ತ:ಖ್ತೆಯನ್ನು ವರದಿಗೆ ಲಗತ್ತಿಸಿದೆ,

29 ಆಸ್ತಿ– ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಿರುವ ಸಾಲಗಳ ಬಾಕಿ ಮೊತ್ತಗಳು ಬ್ಯಾಂಕ್‌ನಲ್ಲಿ ನಿರ್ವಹಿಸಿರುವ ಸದಸ್ಯರ ಸಾಲಗಳ ರಿಜಿಸ್ಟರ್‌ಗಳಲ್ಲಿನ ಮೊತ್ತಗಳಿಗೆ ತಾಳೆ ಹೊಂದುತ್ತದೆಯೇ? — ತಾಳೆ ಹೊಂದುತ್ತಿದೆ.

30 ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು. — ಈ ಕೆಳಗೆ ಸೂಚಿಸಲಾಗಿದೆ

ಕ್ರ. ಸಂ.	ನಿರ್ದೇಶಕರ ಹೆಸರು	ಬಾಕಿ ಸಾಲದ ಮೊತ್ತ (ಅಸಲು)	ಸುಸ್ತಿ ಸಾಲದ ಬಗ್ಗೆ		ಯಾವ ದಿನಾಂಕದಿಂದ ಸುಸ್ತಿಯಾಗಿದೆ	ಷರಾ
			ಅಸಲು	ಬಡ್ಡಿ		
1	ಮಮತಾ.ಕೆ.ವಿ	31.62	0.00	2.74	01.09.2025	

ಮಮತಾ.ಕೆ.ವಿ ನಿರ್ದೇಶಕರಾಗಿ ಚುನಾ0ಯಿತರಾಗುವ ಮುಂಚಿತವಾಗಿ ಸಾಲ ಪಡೆದಿರುತ್ತಾರೆ. ಈ ಸಾಲ ಖಾತೆಯನ್ನು ಬ್ಯಾಂಕ್ ಎನ್‌ಪಿಎ ಎಂದು ವರ್ಗೀಕರಿಸಿಲ್ಲ. ಸಾಲಗಾರರು ಸಾಲದ ಕಂತುಗಳನ್ನು ಮುಂಗಡವಾಗಿ ಪಾವತಿಸಿರುವುದರಿಂದ 31.03.2026 ರಂದು ಯಾವುದೇ ಅಸಲು ಕಂತು ಬಾಕಿ ಇರವುದಿಲ್ಲ. ಆದ್ದರಿಂದ, ಕೋರ್ ಬ್ಯಾಂಕಿಂಗ್ ಸಾಫ್ಟ್‌ವೇರ್ ಈ ಖಾತೆಯನ್ನು ಎನ್‌ಪಿಎ ಎಂದು ಪರಿಗಣಿಸಿಲ್ಲ.

ಆದಾಗ್ಯೂ, 31.03.2026 ರಂದು ಮೇ 2025ರ ಭಾಗಶಃ ಬಡ್ಡಿಯನ್ನು ಒಳಗೊಂಡಂತೆ ಒಟ್ಟು ರೂ. 2,74,917 ಬಡ್ಡಿ ಬಾಕಿ ಉಳಿದು ವಸೂಲಿಯಾಗಿಲ್ಲ. ಅನ್ವಯವಾಗುವ ಆರ್‌ಬಿಐ Prudential ನಿಯಮಾವಳಿಗಳ ಪ್ರಕಾರ ಈ ಖಾತೆಯ ಆಸ್ತಿ ವರ್ಗೀಕರಣವನ್ನು ಬ್ಯಾಂಕ್ ಮರುಪರಿಶೀಲಿಸಿ, ಅದರ ಪರಿಣಾಮವಾಗಿ ಆದಾಯ ಗುರುತಿಸುವಿಕೆ ಹಾಗೂ ಮೀಸಲು Provisioning ಮೇಲಿರುವ ಪರಿಣಾಮವನ್ನು ಪರಿಗಣಿಸಬೇಕು. ಬಡ್ಡಿ0ಯಲ್ಲಿ ಈ ಖಾತೆ0ಯು ಅನುತ್ಪಾದಕ ಆಸ್ತಿ0ಯಾಗಿರುತ್ತದೆ.ಇದರ ಬಗ್ಗೆ ಕ್ರಮವಿಡುವುದು.

31	ಚಿ) (ಎ) ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ	ಇದರ ಬಗ್ಗೆ ಈಗಾಗಲೇ ಆಯಾಯ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.
	(ಬಿ) ಸಾಲಾಖ್ಯೆರಿಗೆ ನೀಡಿರುವ ಒಟ್ಟು ಮುಂಗಡದ ಶೇಕಡಾವಾರು ಪ್ರಮಾಣ	ಇದರ ಬಗ್ಗೆ ಈಗಾಗಲೇ ಆಯಾಯ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.
	(ಸಿ) ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖ್ಯೆರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ.	ಇದರ ಬಗ್ಗೆ ಈಗಾಗಲೇ ಆಯಾಯ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.
	(ಡಿ) ಸಾಲಾಖ್ಯೆರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ	ಇದರ ಬಗ್ಗೆ ಈಗಾಗಲೇ ಆಯಾಯ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.
	ಛ) ಎಲ್ಲಾ ತರಹದ ಸಾಲ, ಮುಂಗಡ, ಕ್ಯಾಷ್ ಕ್ರೆಡಿಟ್, ಓವರ್ ಡ್ರಾಫ್ಟ್ ಇತ್ಯಾದಿಗಳ ಮೇಲೆ (ವ್ಯಾಖ್ಯಾನ) ವಿವರಣೆ	ಇದರ ಬಗ್ಗೆ ಈಗಾಗಲೇ ಆಯಾಯ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.
32	***ನಾನ್ ಬ್ಯಾಂಕಿಂಗ್ ಆಸ್ತಿಗಳು:***	**ಬ್ಯಾಂಕ್ ಆಸ್ತಿ** : ಸುಸ್ತಿ0ಯಾದ ಸಾಲಗಾರರು ಬ್ಯಾಂಕಿಗೆ ಸಾಲ ಮರುಪಾವತಿ ಮಾಡದ ಕಾರಣ ಮೂರು ಬಾರಿ ಅವರ ಆಸ್ತಿ0ಯನ್ನು ಹರಾಜಿಗೆ ಇಟ್ಟಿದ್ದು ಹರಾಜಿಗೆ ಇಟ್ಟ ಆಸ್ತಿ0ಯನ್ನು ಖರಿದಿಸಲು 0ಯಾರೂ ಗ್ರಾಹಕರು ಬರದಿದ್ದ ಕಾರಣ ಅವರ ಆಸ್ತಿ0ಯನ್ನು ಮುಟ್ಟುಗೋಲು ಹಾಕಿಕೊಂಡು ಬ್ಯಾಂಕಿನ ಆಸ್ತಿ0ಯನ್ನಾಗಿ ಮಾಡಿಕೊಂಡಿರುವ ಮೊತ್ತ ರೂ.20.01 ಲಕ್ಷಗಳು ಆಗಿರುತ್ತವೆ
33	**ಆಸ್ತಿ ಜವಾಬ್ದಾರಿ ನಿರ್ವಹಣೆ** i) ಈ ಸಂಬಂಧ ಜಾರಿಯಲ್ಲಿರುವ ಕಾರ್ಯನೀತಿ ಮತ್ತು ಆರ್.ಬಿ.ಐ. ಮಾರ್ಗಸೂಚಿಗಳನ್ನು ಪಾಲಿಸುತ್ತಿರುವ ಬಗ್ಗೆ. ii) ಆಸ್ತಿ ಜವಾಬ್ದಾರಿ ನಿರ್ವಹಣಾ ಸಮಿತಿಯ ಕಾರ್ಯಚಟುವಟಿಕೆ ಕುರಿತು iii) ನಿಯತಕಾಲಿಕವಾಗಿ ದ್ರವ್ಯಾಸ್ಥಿ ನಿರ್ವಹಣೆಯಾಗುತ್ತಿರುವ ಬಗ್ಗೆ.	ಹೂಡಿಕೆಗಳ ಮೇಲೆ ರೂ.105.09 ಲಕ್ಷ ಬಡ್ಡಿ ಬರಬೇಕಾಗಿದ್ದು ಅದಕ್ಕೆ ತಕ್ಕ ಕುಳುವಾರು ತಯಾರಿಸಿದ್ದು ಅದು ಸರಿ ಇರುವುದನ್ನು ಧೃಢೀಕರಿಸಲಾಗಿರುತ್ತದೆ. ಆದಾಯತೆರಿಗೆ ಇಲಾಖೆಗೆ ರೂ.85 ಲಕ್ಷ ಮುಂಗಡ ಆದಾಯ ತೆರಿಗೆ ಪಾವತಿಸಿದ್ದು ಇದು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ತೋರಿಸಲಾಗಿರುತ್ತದೆ. ಆದಾ0ಯ ತೆರಿಗೆ ಇಲಾಖೆಗೆ ಆದಾ0ಯ ರಿಟರ್ನ್ ಸಲ್ಲಿಸಿದ ಈ ಬಾಬ್ತನ್ನು ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು. ಟಿ.ಡಿ.ಎಸ್: ರೂ.7000.00ಗಳು ಟಿ.ಡಿ.ಎಸ್ ಬರಬೇಕಾಗಿದ್ದು ಇದನ್ನು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಎದುರು ತೋರಿಸಲಾಗಿರುತ್ತದೆ. **ಜಿ.ಎಸ್.ಟಿ:** ದಿ.31.03.2026ಕ್ಕೆ ಜಿ.ಎಸ್.ಟಿ ಬಾಬ್ತು ಬ್ಯಾಂಕುಗಳ ಲೆಕ್ಕಗಳ ಪ್ರಕಾರ ರೂ.24.78 ಲಕ್ಷ ಜಮಾ ಇರುತ್ತದೆ. **ಸಾಲಗಳ ಮೇಲೆ ಬಡ್ಡಿ**ಬರಬೇಕಾಗಿದ್ದು ರೂ.250.73 ಲಕ್ಷ ಇದ್ದು ಇದಕ್ಕೆ ಕುಳುವಾರು ಪಟ್ಟಿ ತಯಾರಿಸಿದ್ದು ತಾಳೆ ಇರುವುದನ್ನು ಪರಿಶೀಲಿಸಿ ಇದು ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಎದುರು ತೋರಿಸಲಾಗಿರುತ್ತದೆ.
34	ಡೆಡ್ ಸ್ಟಾಕು : ವಿವರಣೆ	ಯಾವುದು ಇರುವುದಿಲ್ಲ
35	ಕಟ್ಟಡ– ವಿವರಣೆ	ಯಾವುದು ಇರುವುದಿಲ್ಲ
36	ಬಿಲ್ಸ್, ಡಿಸ್ಕೌಂಟ್, ಕ್ಲಿಯರಿಂಗ್, ಡ್ರಾಫ್ಟ್ ಇತ್ಯಾದಿಗಳು	ಅಂತಹ ವ್ಯವಹಾರ ಕೈಗೊಂಡಿರುವುದಿಲ್ಲ.
37	ಬಡ್ಡಿ, ಬ್ಯಾಂಕ್ ಚಾರ್ಜಸ್ ಇತ್ಯಾದಿಗಳು	ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಅನುಗುಣವಾಗಿ ಆಡಳಿತ ಮಂಡಳಿ ಕಾಲಕಾಲಕ್ಕೆ ನಿಗಧಿಗೊಳಿಸಿರುವಂತೆ ಸಾಲಗಳ ಮೇಲೆ ಬಡ್ಡಿ ವಸೂಲಿ ಮಾಡಲಾಗುತ್ತಿದೆ. ಇದೇ ರೀತಿ ಠೇವಣಿಗಳ ಮೇಲೆ 4.0%–7.00% (ಹಿರಿಯ ನಾಗರಿಕರಿಗೆ 0.5% ಹೆಚ್ಚುವರಿ), ಉಳಿತಾಯ ಖಾತೆಗೆ 3% ರಂತೆ ಬಡ್ಡಿ ನೀಡಲಾಗುತ್ತಿದೆ. ಸಾಲಗಳ ಮೇಲೆ 9.%–16% ರವರೆಗೆ ಬಡ್ಡಿ ವಿಧಿಸಲಾಗುತ್ತಿದೆ. ಬ್ಯಾಂಕಿನ ಠೇವಣಿಗಳ ಮೇಲಿನ ಸರಾಸರಿ ವೆಚ್ಚ 5.65% ಇರುತ್ತದೆ. ಹೂಡಿಕೆಗಳು ಮತ್ತು ಸಾಲಗಳ ಮೇಲೆ ಬಂದ ಬಡ್ಡಿಯ ಸರಾಸರಿ ಆದಾಯ 8.08%. ಇವೆರಡರ ವ್ಯತ್ಯಾಸ 2.43% ರಷ್ಟಿರುತ್ತದೆ.
38	ಹೊಂದಾಣಿಕೆ ಶೀರ್ಷಿಕೆಗಳಡಿಯಲ್ಲಿನ ಅಂಶಗಳಿಗೆ ವಿವರಗಳನ್ನು ಪರಿಶೀಲಿಸಿದ ಬಗ್ಗೆ ಅವುಗಳು ಖಾತೆಗಳ ಶಿಲ್ಕುಗಳಿಗೆ ತಾಳೆ ಹೊಂದುತ್ತವೆಯೇ?	ಬ್ಯಾಂಕಿನಲ್ಲಿರುವ ಹೊಂದಾಣಿಕೆ ಲೆಕ್ಕಗಳನ್ನು ಪರಿಶೀಲಿಸಿ ತಾಳೆ ಇರುವುದನ್ನು ಮನದಟ್ಟು ಮಾಡಿಕೊಳ್ಳಲಾಗಿದೆ.

39	**ಆಂತರಿಕ ಹತೋಟಿ** a) ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ ಕೈಪಿಡಿಗಳ ಬಗ್ಗೆ b) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ (i) ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. (ii) ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ	ಶಾಖೆಯಲ್ಲಿ ಗಣಕಯಂತ್ರ ಅಳವಡಿಸಲಾಗಿದ್ದು, ರಿಜಿಸ್ಟರ್‌ಗಳ ನಿರ್ವಹಣೆ ಹಾಗೂ ಸಮನ್ವಯತೆಯನ್ನು ಗಣಕಯಂತ್ರ ಮೂಲಕ ನಿರ್ವಹಿಸಲಾಗುತ್ತಿದೆ.
	c) <u>ಅಂತರ ಶಾಖೆಗಳ ಲೆಕ್ಕಗಳ ಸಮನ್ವಯತೆ</u> i) ರಿಜಿಸ್ಟರ್‌ಗಳ ನಿರ್ವಹಣೆಯಲ್ಲಿ ಅನುಸರಿಸಲಾದ ಪದ್ಧತಿ/ ಕ್ರಮದ ಬಗ್ಗೆ ವಿವರಣೆ. ii) ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಮಾನ್ಯ ಎಂಟ್ರಿಗಳನ್ನು ಹಾಕಲಾಗಿದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸುವುದು. iii) ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳನ್ನು ಕಂಡುಕೊಳ್ಳಲು ಅನುಸರಿಸಲಾದ ಪದ್ಧತಿಯ ಬಗ್ಗೆ ಹಾಗೂ ಅವುಗಳ ಸ್ಥಿತಿ iv) ಸಮನ್ವಯಗಳನ್ನು ತಹಲ್‌ವರೆಗೆ ಮಾಡುತ್ತಿರುವ ವಿಚಾರದಲ್ಲಿ ತೆಗೆದುಕೊಳ್ಳಲಾದ ಕ್ರಮಗಳು v) ಹಳೆಯ ಬಾಕಿಯಲ್ಲಿರುವ ನಮೂದುಗಳ ಬಗ್ಗೆ ಆರ್.ಬಿ.ಐ. ಸೂಚನೆಗಳನ್ನು ಪಾಲಿಸುತ್ತಿರುವ ಬಗ್ಗೆ. **d) <u>ಶಾಖೆಗಳ ಪರಿವೀಕ್ಷಣೆ:</u>** i) ಶಾಖೆಗಳ ಪರಿವೀಕ್ಷಣೆ ಆಗಿಂದಾಗ್ಗೆ ನಡೆಸುವ ಪದ್ಧತಿ ಬಗ್ಗೆ/ ಎಲ್ಲಾ ವಿಚಾರಗಳನ್ನು ಅಳವಡಿಸಿಕೊಳ್ಳಲಾಗಿದೆಯೇ? ಆಂತರಿಕ ತನಿಖ (ಪರಿವೀಕ್ಷಣೆ), ಸಮವರ್ತಿ ಲೆಕ್ಕಪರಿಶೋಧನೆ ಅಥವಾ ರೆವಿನ್ಯೂ ಆಡಿಟ್‌ಗಳ ಹಾಗೂ ವರದಿ ಮಾಡುವ ಬಗ್ಗೆ ವಿವರಣೆ ii) ಮೇಲಿನ ವರದಿಗಳ ಮೇಲೆ ಹಿಂಬಾಲಿಕೆ ಕ್ರಮ ಹಾಗೂ ಅನುಪಾಲನಾ ವರದಿ ಪಡೆಯುತ್ತಿರುವ ಬಗ್ಗೆ ಇರುವ ಪದ್ಧತಿ ಕುರಿತು ವಿವರಣೆ e) <u>ಜಾಗರೂಕತೆ</u> ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ. ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ, ಅಮಾನತ್ ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು.	ಶಾಖೆಗಳ ಹಾಗೂ ಕೇಂದ್ರದ ಲೆಕ್ಕಗಳಲ್ಲಿ ಅಸಾಮಾನ್ಯ ಎಂಟ್ರಿಗಳು ಕಂಡುಬಂದಿರುವದಿಲ್ಲ. ಹೆಚ್ಚಿನ ಮೊತ್ತದ ಹಾಗೂ ದೀರ್ಘಕಾಲದ ಬಾಕಿಯಿರುವ ನಮೂದುಗಳು ಇರುವುದಿಲ್ಲ. ಶಾಖೆಯಲ್ಲಿ ಗಣಕಯಂತ್ರ ಅಳವಡಿಸಲಾಗಿದ್ದು, ಸಮನ್ವಯತೆಯನ್ನು ಗಣಕಯಂತ್ರ ಮೂಲಕ ನಿರ್ವಹಿಸಲಾಗುತ್ತಿದೆ. ಆರ್.ಬಿ.ಐ ನೀಡಿರುವ ಸುತ್ತೋಲೆಯಂತೆ ವಿವಿಧ ಬ್ಯಾಂಕುಗಳಲ್ಲಿ ಇರಿಸಬೇಕಾಗಿದ್ದ ಒಟ್ಟು ಮಿತಿ ಶೇ.20 ಹಾಗೂ ಪ್ರತಿ ಬ್ಯಾಂಕುಗಳಲ್ಲಿ ಇರಿಸಬೇಕಾಗಿದ್ದ ಶೇ.5 ಮಿತಿ0ಯ ಒಳಗಡೆ ಇರುತ್ತದೆ ಸಿಟಿ ಸಿವಿಲ್ ಕೋರ್ಟಿನ ಶಾಖೆ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟಿನ ಶಾಖೆಯ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸಿ ಪ್ರತಿ ಮಾಹೆ ವರದಿಗಳನ್ನು ಸಲ್ಲಿಸಲಾಗುತ್ತಿದೆ. ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆ. ಆಂತರಿಕ ಲೆಕ್ಕಪರಿಶೋಧನೆ ವರದಿಯಲ್ಲಿ ಕೆಲವು ಅನುಸರಣೆ ಆಗಿರುವುದಿಲ್ಲ. ಉದಾ : ವಾಹನ ಸಾಲದ ನೀಡಿದ ಅರ್ಜಿಗಳಲ್ಲಿ ಆರ್.ಸಿ.ಪುಸ್ತಕ, ಕೀ ಹಾಗೂ ಇನ್ಸೂರೆನ್ಸ್ ಪಡೆದಿರುವುದಿಲ್ಲ ಹಾಗೂ ಎಲ್ಲಾ ಸಾಲಗಳ ಬಗ್ಗೆ ಕ್ರೆಡಿಟ್ ಇನ್ಫರ್‌ಮೇಷನ್ ಕಂಪನಿಗಳಿಗೆ ಮಾಹಿತಿ0ಯನ್ನು ಸಲ್ಲಿಸುವುದು. ವರದಿ ಸಾಲಿನಲ್ಲಿ ಹಣದುರುಪಯೋಗ ಪತ್ತೆಯಾಗಿರುವುದಿಲ್ಲಾ.ಈ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವ ಪ್ರಮೇಯ ಉದ್ಭವಿಸುವುದಿಲ್ಲಾ, ಪ್ರಧಾನ ಕಛೇರಿ ಶಾಖೆ, ಸಿಟಿಸಿವಿಲ್ ಕೋರ್ಟಿನ ಶಾಖೆ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟಿನ ಶಾಖೆಗಳ ಹೊಂದಾಣಿಕೆಯ ಲೆಕ್ಕಗಳು 31.03.2026ರ ಅಂತ್ಯಕ್ಕೆ ತಾಳೆ ಇರುತ್ತದೆ. -- ಆಯಾ ಖಂಡಿಕೆಯಲ್ಲಿ ವಿವರಿಸಲಾಗಿದೆ.---
40	ಆಡಳಿತ / ಸಿಬ್ಬಂದಿ	ಇದರ ಬಗ್ಗೆ ಈಗಾಗಲೇ ಆಯಾಯ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.
41	ಆಕಸ್ಮಿಕ ವೆಚ್ಚಗಳು	ಇದರ ಬಗ್ಗೆ ಈಗಾಗಲೇ ಆಯಾಯ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

42	ಬೋನಸ್ಸು/ ಎಕ್ಸ್‌ಗ್ರೇಷಿಯಾ ಇತ್ಯಾದಿ	ವರದಿ ಸಾಲಿನಲ್ಲಿ ರೂ.8.94 ಲಕ್ಷ ಸಿಬ್ಬಂದಿ ಬೋನಸ್ಸು/ಎಕ್ಸ್‌ಗ್ರೇಷಿಯಾ ತೆಗೆದಿರಿಸಿದ್ದು ಅದನ್ನು ಸಕಾಲದಲ್ಲಿ ಪಾವತಿಸಲಾಗಿದ್ದು ಬಾಕಿ ಉಳಿದಿರುವುದನ್ನು ಆಪದ್ಧನ ನಿಧಿಗೆ ವರ್ಗಾಯಿಸಲಾಗಿದೆ.
43	ಲಾಭ ವಿಲೇವಾರಿ	ಲಾಭ ವಿಂಗಡಣೆಗೆ ಮಹಾಸಭೆಯ ಒಪ್ಪಿಗೆ ಪಡೆಯಲಾಗಿದೆ. ವರದಿ ಸಾಲಿನಲ್ಲಿ ದಿ.31.08.2025 ರನ್ವಯ ಸರ್ವಸದಸ್ಯರ ಸಭೆಯಲ್ಲಿ ಲಾಭ ವಿಲೆವಾರಿ ಮಾಡಿರುತ್ತಾರೆ. ಸದರಿ ಲಾಭ ವಿಲೇವಾರಿ ಮಾಡಿಕೊಳ್ಳುವಾಗ ಶಾಸನಬದ್ದ ನಿದಿಗಳನ್ನು ಕ್ರಮಬದ್ದವಾಗಿ ತೆಗೆದಿರಿಸಿಕೊಂಡಿರುತ್ತದೆ.
44	**<u>ಡಿವಿಡೆಂಡ್:</u>** ಬ್ಯಾಂಕಿನ ಆರ್ಥಿಕ ಸ್ಥಿತಿಗನುಗುಣವಾಗಿ ಶೇಕಡಾವಾರು ಡಿವಿಡೆಂಡ್‌ನ್ನು ಘೋಷಿಸಲಾಗಿದೆಯೇ?	2024–2025ನೇ ಸಾಲಿನ ಲಾಭದಲ್ಲಿ ಶೇ.16ರಷ್ಟು ಲಾಭಾಂಶವನ್ನು ಮಹಾಸಭೆಯ ತೀರ್ಮಾನದಂತೆ ಘೋಷಣೆ ಮಾಡಿರುತ್ತಾರೆ.
45	**ಸಭೆಗಳು** a) ಕೊನೆಯ ಸರ್ವ ಸದಸ್ಯರ ಮಹಾ ಸಭೆ ನಡೆದ ದಿನಾಂಕ ಹಾಗೂ ಅದು ಯಾವ ಸಾಲಿಗೆ ಸಂಬಂಧಿಸಿದ್ದು, ಎಂಬುದರ ಬಗ್ಗೆ b) ವರದಿ ಸಾಲಿನಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯನಿರ್ವಾಹಕರ ಮಂಡಳಿ ನಡೆಸಿದ ಸಭೆಗಳ ಸಂಖ್ಯೆ c) ಆಡಳಿತ ಮಂಡಳಿ ಮತ್ತು ಪ್ರಧಾನ ಕಾರ್ಯ ನಿರ್ವಹಣಾಧಿಕಾರಿಯ ಕಾರ್ಯಕ್ಷಮತೆಯ ಬಗ್ಗೆ ಸಮಗ್ರ ವಿವರಣೆ.	31.03.2025ರ ಅಂತ್ಯಕ್ಕೆ ಇರುವ ವಾರ್ಷಿಕ ಲೆಕ್ಕಗಳ ಬಗ್ಗೆ ದಿನಾಂಕ 31.08.2025 ರಂದು ಬ್ಯಾಂಕಿನ ವಾರ್ಷಿಕ ಮಹಾಸಭೆ ನಡೆದಿರುತ್ತದೆ. ಸಭೆಗಳ ಸಂಖ್ಯೆ 24 ಬ್ಯಾಂಕ್ ಉಪನಿಯಮ 53(2)ರಂತೆ ಬ್ಯಾಂಕಿನಲ್ಲಿ ಕನಿಷ್ಟ ಪಕ್ಷ ತಿಂಗಳಿಗೊಮ್ಮೆಯಾದರೂ ಸಭೆ ಸೇರಬೇಕಾಗಿರುತ್ತದೆ. ಸಭೆಯ ನಡುವಳಿಕೆಗಳಲ್ಲಿ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿರುವ ನ್ಯೂನತೆಗಳ ಬಗ್ಗೆ ಚರ್ಚೆಯಾಗಿರುತ್ತವೆ.
46	**ತನಿಖೆ / ಹಿಂದಿನ ತನಿಖೆಯ ದಿನಾಂಕ** a) ಆರ್.ಬಿ.ಐ ಯಿಂದ	2022–2023ಮತ್ತು 2023–2024ನೇ ಸಾಲಿಗೆ ಆರ್.ಬಿ.ಐ ನಿಂದ ತಪಾಸಣೆಯಾಗಿರುತ್ತದೆ.
47	**<u>ಶಾಖೆಗಳ ಬಗ್ಗೆ ವಿವರಣೆ:</u>** ಎ) ಆರ್ಥಿಕ ಸ್ಥಿತಿ ಮತ್ತು ಶಾಖೆಗಳ ಸ್ವಾವಲಂಬನೆ ಬಗ್ಗೆ ಬಿ) ಶಾಖೆಗಳು ನಿಯತಕಾಲಿಕೆಗಳನ್ನು ವಿಳಂಬವಿಲ್ಲದೆ ಸಲ್ಲಿಸುತ್ತಿವೆಯೇ? ಸಿ) ಹೊಂದಾಣಿಕೆ ಲೆಕ್ಕಗಳ ಬಗ್ಗೆ "ಕೇಂದ್ರ ಕಛೇರಿಯ ಹೊಂದಾಣಿಕೆ ಲೆಕ್ಕ" ಶಾಖೆಯ ಹೊಂದಾಣಿಕೆ ಲೆಕ್ಕ ಮತ್ತು ಇತರೆ ಅಮಾನತ್ ಲೆಕ್ಕಗಳ ಸ್ಥಿತಿಯ ಬಗ್ಗೆ	ಎ) ಶಾಖೆಯಲ್ಲಿ ಗಣಕಯಂತ್ರ ಅಳವಡಿಸಲಾಗಿದ್ದು, ರಿಜಿಸ್ಟರ್‌ಗಳ ನಿರ್ವಹಣೆ ಹಾಗೂ ಸಮನ್ವಯತೆಯನ್ನು ನಿರ್ವಹಿಸಲಾಗುತ್ತಿದೆ. ಬಿ) ಹೌದು ಸಿ) ಪ್ರಧಾನ ಕಛೇರಿ ಶಾಖೆ, ಸಿಟಿ ಸಿವಿಲ್ ಕೋರ್ಟಿನ ಶಾಖೆ ಮತ್ತು ಮ್ಯಾಜಿಸ್ಟ್ರೇಟ್ ಕೋರ್ಟಿನ ಶಾಖೆಗಳ ಹೊಂದಾಣಿಕೆಯ ಲೆಕ್ಕಗಳು 31.03.2026ರ ಅಂತ್ಯಕ್ಕೆ ತಾಳೆ ಇರುತ್ತದೆ.
48	**ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ (Automation & Computerisation)** i) ಸ್ವಯಂಚಾಲಿತ ಗಣಕೀಕರಣ ವ್ಯವಸ್ಥೆ ಜಾರಿಯಲ್ಲಿರುವ ಬಗ್ಗೆ ಮತ್ತು ಪ್ರಸ್ತುತ ಸಾಲಿನಲ್ಲಿ ಈ ಕಾರ್ಯದಲ್ಲಿನ ಪ್ರಗತಿ. ii) ಸ್ವಯಂಚಾಲಿತ ವ್ಯವಸ್ಥೆಗೆ ಒಳಪಡದೇ ಇರುವ ಗಂಭೀರ ಅಂಶಗಳ ಕುರಿತು ವಿಮರ್ಶೆ iii) ಗಣಕೀಕರಣಗೊಳಿಸಿರುವ ಶಾಖೆಗಳ ಸಂಖ್ಯೆ ಹಾಗೂ ಗಣಕೀಕರಣಗೊಂಡ ಪ್ರಮಾಣ iv) ತುರ್ತು ಪರಿಸ್ಥಿತಿಯಲ್ಲಿ ಗಣಕೀಕೃತ ಮಾಹಿತಿಗಳನ್ನು ಸಂರಕ್ಷಿಸುವ ಬಗ್ಗೆ ಪಾಲಿಸುತ್ತಿರುವ ನಿಯಮ (Backups / Offsite storage) v) ಇ.ಆ.ಕ ಲೆಕ್ಕಪರಿಶೋಧನೆ ಜಾರಿಯಲ್ಲಿರುವ ಬಗ್ಗೆ ಮತ್ತು ಅಳವಡಿಕೆ ಪ್ರಮಾಣ. vi) ಇ–ಬ್ಯಾಂಕಿಂಗ್: ಜಾರಿಯಲ್ಲಿರುವ ಮಾರ್ಗಸೂಚಿಗಳು, ಈ ಕುರಿತು ಮೇಲ್ವಿಚಾರಣೆ ಮತ್ತು ಕಾಲಕಾಲಕ್ಕೆ ತಾಂತ್ರಿಕತೆಯನ್ನು ಅಪ್‌ಡೇಟ್ ಮಾಡುವ ಬಗ್ಗೆ, ವಿಮರ್ಶೆಯ ವಿಧಾನ ಮತ್ತು ಲೆಕ್ಕಪರಿಶೋಧನೆ ಬಗ್ಗೆ. vii) ಗಣಕೀಕರಣ ಮತ್ತು ಸ್ವಯಂ ಚಾಲಿತ ವ್ಯವಸ್ಥೆ ಬಗ್ಗೆ ಸಲಹೆ ಸೂಚನೆಗಳು, ಯಾವುದಾದರೂ ಇದ್ದಲ್ಲಿ.	i. ಬ್ಯಾಂಕಿನಲ್ಲಿ ಲೆಕ್ಕಗಳನ್ನು ಗಣಕಯಂತ್ರಕ್ಕೆ ಅಳವಡಿಸಿದ್ದು ಬ್ಯಾಂಕು ಅಳವಡಿಸಿಕೊಂಡಿರುವ ಕಾರ್ಯನೀತಿಯು ನಿರ್ವಹಿಸುತ್ತಿರುವ ಲೆಕ್ಕದ ಪ್ರಮಾಣಕ್ಕೆ ಅನುಗುಣವಾಗಿದೆ. ii. ಯಾವುದು ಇರುವುದಿಲ್ಲ. iii. ಒಟ್ಟು ಪ್ರಧಾನ ಕಛೇರಿ ಸೇರಿ 3 ಶಾಖೆಗಳು ಸಂಪೂರ್ಣ ಕೋರ್ ಬ್ಯಾಂಕಿಂಗ್ ತತ್ರಾಂಶವನ್ನು ಅಳವಡಿಸಲಾಗಿದೆ. iv. ಪ್ರತಿ ದಿನ ಪ್ರತ್ಯೇಕ ಗಣಕೀಕೃತ ಮಾಹಿತಿಗಳನ್ನು ಸಂರಕ್ಷಿಸಲಾಗುತ್ತಿದೆ. v. ವರದಿ ಸಾಲಿನಲ್ಲಿ ಮಾಡಲಾಗಿದೆ. ಇ.ಡಿ.ಪಿ. ಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ ಅಪಾಯ ಸಂಭವ ಕಡಿಮೆಯಾಗಿರುತ್ತದೆ. vi. ಇನ್ನೂ ಇದರ ಸೇವೆಯನ್ನು ಮಾಡಿರುವುದಿಲ್ಲ. vii. ಯಾವುದು ಇರುವುದಿಲ್ಲ.
49	**ಲಾಭ–ನಷ್ಟ ಮತ್ತು ಆಸ್ತಿ–ಜವಾಬ್ದಾರಿ ಬಗ್ಗೆ ವಿಶ್ಲೇಷಣೆ** (ಂ) *ಲಾಭದಾಯಕತ್ವ:* a. ಹಿಂದಿನ ಸಾಲಿಗಿಂತ ವರದಿ ಸಾಲಿನಲ್ಲಿ ಜಮಾ–ಖರ್ಚಿನ ಪ್ರಮುಖ ಅಂಶಗಳಲ್ಲಿ ಆಗಿರತಕ್ಕ ಏರಿಳಿತಗಳ ಬಗ್ಗೆ ಮುಖ್ಯ ಅನುಪಾತ ಗಳೊಂದಿಗೆ ವಿಶ್ಲೇಷಣೆ.	ಎ. ಹಿಂದಿನ ಸಾಲಿನಲ್ಲಿ ಎಲ್ಲಾ ಮೂಲಗಳಿಂದ ಬಂದಂತಹ ಆದಾಯದಲ್ಲಿ ಈ ವರದಿ ಸಾಲಿನಲ್ಲಿ ಹೆಚ್ಚಿನ ಆದಾಯ ಗಳಿಕೆಯಾಗಿದ್ದು ಈ ಕೆಳಕಂಡ ಮೂಲಗಳಿಂದ 21,84,09,574.11ರೂ.ಗಳಆದಾಯ ಜಮೆಯಾಗಿರುತ್ತದೆ. 1. ಹೂಡಿಕೆಗಳ ಮೇಲಿನ ಆದಾಯ

	b. ಲೆಕ್ಕಗಳ ನಿರ್ವಹಣೆಯಲ್ಲಿನ / ಕಾರ್ಯನೀತಿಯಲ್ಲಿನ ಬದಲಾವಣೆ ಯಿಂದಾಗಿ ವರದಿ ಸಾಲಿನ ಲಾಭ–ನಷ್ಟದ ಮೇಲಾದ ಪರಿಣಾಮಗಳ ಬಗ್ಗೆ (ಃ) ಆಸ್ತಿ– ಜವಾಬ್ದಾರಿ ತ:ಖ್ತೆಯಲ್ಲಿ ಈ ಮೇಲೆ ವಿವರಿಸದೇ ಬಾಕಿ ಉಳಿದ ಎಲ್ಲಾ ಅಂಶಗಳ ಬಗ್ಗೆ ವಿಶ್ಲೇಷಣೆ.	2. ಠೇವಣಿಗಳ ಮೇಲಿನ ಆದಾಯ 3. ಸಾಲ ಮತ್ತು ಮುಂಗಡಗಳ ಮೇಲೆ ಬಡ್ಡಿ 4. ಇತರೆ ಆದಾಯಗಳು ಹಿಂದಿನ ಸಾಲಿನಲ್ಲಿ ಆಗಿರುವಂತಹ ಖರ್ಚು ವೆಚ್ಚಗಳು ಹಾಗೂ ಲಾಭಾಂಶದಲ್ಲಿ ವ್ಯತ್ಯಾಸಗಳಿದ್ದು ಈ ಸಾಲಿನಲ್ಲಿ ಆದಾ0ಯವು ಹೆಚ್ಚಾಗಿದ್ದು, ಬಂದಂತಹ ಆದಾ0ಯದಲ್ಲಿ ಸಿಬ್ಬಂದಿ ವೆಚ್ಚ, ಆಡಳಿತ ವೆಚ್ಚ, ಸವಕಳಿ ಹಾಗೂ ಇನ್ನಿತರೆ ವೆಚ್ಚಗಳನ್ನು ಮೇಲ್ಕಂಡ ಆದಾಯಗಳಲ್ಲಿ ಕಳೆದ ನಂತರ ದಿನಾಂಕ 31.03.2026ಕ್ಕೆ 3,83,52,885.70 ರೂಗಳ ನಿವ್ವಳ ಆದಾಯವನ್ನು ಗಳಿಸಿರುತ್ತದೆ. ಬಿ. 0ಯಾವುದು ಇರುವುದಿಲ್ಲ. (B) 0ಯಾವುದು ಇರುವುದಿಲ್ಲ.
50	**ಆಂತರಿಕ ವ್ಯವಸ್ಥೆ ಮತ್ತು ನಿಯಂತ್ರಣ (Systems & Control)** i) ಸಮವರ್ತಿ / ಆಂತರಿಕ ಲೆಕ್ಕಪರಿಶೋಧನೆ / ಗಣಕಯಂತ್ರ ಮತ್ತು Software ಗಳ E.D.P. ಲೆಕ್ಕಪರಿಶೋಧನೆ ಹಾಗೂ ಪರಿವೀಕ್ಷಣೆ ಬಗ್ಗೆ ಬ್ಯಾಂಕ್ ಹೊಂದಿರುವ ವ್ಯವಸ್ಥೆ ಮತ್ತು ನಿಯಂತ್ರಣ. ii) ಎಂ.ಐ.ಎಸ್. ಅಸ್ಥಿತ್ವದಲ್ಲಿರುವ ಬಗ್ಗೆ. ಮಾಹಿತಿಗಳ ಕ್ರೋಢೀಕರಣ ಮತ್ತು ನಿಖರತೆ ಬಗ್ಗೆ. iii) ಆರ್.ಬಿ.ಐ. ಪರಿವೀಕ್ಷಣಾ ವ್ಯವಸ್ಥೆಗೆ ಹೊರತುಪಡಿಸಿದ ಮಾಹಿತಿಗಳ ನಂಬಲಾರ್ಹತೆ ಬಗ್ಗೆ ಜಾರಿಯಲ್ಲಿರುವ ನಿಯಮಗಳು.	1)ಬ್ಯಾಂಕಿನಲ್ಲಿನ ಎಲ್ಲಾ ಬ್ಯಾಂಕಿಂಗ್ ವ್ಯವಹಾರಗಳನ್ನು ಸಂಪೂರ್ಣ ವಾಗಿ ಗಣಕೀಕೃತಗೊಳಿಸಿದ್ದು , ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯನ್ವಯ ಬ್ಯಾಂಕಿಗೆ ಸಂಪೂರ್ಣ ಕೋರ್ ಬ್ಯಾಂಕಿಂಗ್ ಪದ್ದತಿಯಂತೆ ಅಳವಡಿಸಿಕೊಂಡಿದ್ದು ಇದು ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪಾಲನೆಯಾಗಿದ್ದು ಸದರಿ ಗಣಕೀಕರಣ ಬ್ಯಾಂಕಿನ ವ್ಯವಹಾರಕ್ಕೆ ಉಪಯುಕ್ತವಾಗಿದ್ದು, ಸಮರ್ಪಕವಾಗಿರುವುದು ಕಂಡುಬರುತ್ತದೆ. 2)ಪ್ರತಿಮಾಹೆ0ಯಾನ ಆಡಳಿತ ಮಂಡಳಿ0ಯಲ್ಲಿ ಮಾಹೆವಾರು ಅಂತಿಮ ಲೆಕ್ಕಗಳು ಹಾಗೂ ಬ್ಯಾಂಕಿನ ಆರ್ಥಿಕ ಚಿತ್ರಣದ ಬಗ್ಗೆ ಸವಿವರವಾಗಿ ಚರ್ಚಿಸಿ ತೀರ್ಮಾನ ಕೈಗೋಂಡಿರುತ್ತಾರೆ. 3)0ಯಾವುದು ಇರುವುದಿಲ್ಲ.
51	**ಇತರೆ ವಿಷಯಗಳು:** i) ಹಿಂದಿನ ವರ್ಷಕ್ಕೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಲೆಕ್ಕಪತ್ರ ನೀತಿ ನಿಯಮಗಳಲ್ಲಿ ಆಗಿರುವ ಬದಲಾವಣೆ ಬಗ್ಗೆ ಟಿಪ್ಪಣಿ. ii) Under writing ಹಾಗೂ ನಿಷ್ಪನ್ನ (Derivatives) ಇವುಗಳ ನಿರ್ವಹಣೆ ಬಗ್ಗೆ ಬ್ಯಾಂಕ್ ಅನುಸರಿಸುತ್ತಿರುವ ನಿಯಮಗಳು. iii) ಆದಾಯ ತೆರಿಗೆ, ಬಡ್ಡಿ ತೆರಿಗೆ, ಗ್ರಾಚ್ಯುಟಿ, ಪಿಂಚಣಿ ಮತ್ತು ಭವಿಷ್ಯ ನಿಧಿ ಇವುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. iv) ಬ್ಯಾಂಕಿನ ಆಸ್ತಿ–ಜವಾಬ್ದಾರಿ ತ:ಖ್ತೆ ಖಾತೆಗಳನ್ನು ಹೊರತುಪಡಿಸಿದ ಕ್ಲೇಮ್‌ಗಳ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ. v) ಶಾಖೆಗಳ ನಿಯತ ಕಾಲಿಕೆಗಳಲ್ಲಿ ಹಾಗೂ ಅವುಗಳ ಆರ್ಥಿಕ ತ:ಖ್ತೆಗಳ ಕ್ರೋಢೀಕರಣದ ಬಗ್ಗೆ ಅಂತಿಮವಾಗಿ ಕ್ರೋಢೀಕರಿಸುವಾಗ ಕಂಡು ಬಂದ ಗಮನಾರ್ಹ ಅಂಶಗಳು. vi) ಬೇರೆ ಬ್ಯಾಂಕುಗಳ ಶಿಲ್ಕುಗಳ ತಾಳೆ ಹೊಂದಿರುವ ಬಗ್ಗೆ – ಸಮನ್ವಯಕ್ಕೊಳಪಟ್ಟಿರುವ ತ:ಖ್ತೆಗಳ ಬಗ್ಗೆ ವಿವರಣೆ. vii) NOSTRO ಲೆಕ್ಕಗಳ ಮರು ಮೌಲ್ಯಮಾಪನ ಹಾಗೂ ಬಾಕಿ ಇರುವ ಫಾರ್‌ವಾರ್ಡ್ ಎಕ್ಸ್‌ಚೇಂಜ್ ಕರಾರುಗಳ ಪದ್ದತಿ ಬಗ್ಗೆ viii) CRAR ನ ಬಗ್ಗೆ ವಿಶ್ಲೇಷಣೆ	1.ಬ್ಯಾಂಕಿನಲ್ಲಿ ಲೆಕ್ಕಗಳನ್ನು ಗಣಕಯಂತ್ರಕ್ಕೆ ಅಳವಡಿಸಿದ್ದು ಬ್ಯಾಂಕು ಅಳವಡಿಸಿಕೊಂಡಿರುವ ಕಾರ್ಯನೀತಿಯು ನಿರ್ವಹಿಸುತ್ತಿರುವ ಲೆಕ್ಕದ ಪ್ರಮಾಣಕ್ಕೆ ಅನುಗುಣವಾಗಿದೆ. 2. 0ಯಾವುದು ಇರುವುದಿಲ್ಲ. 3) ಭಾರತೀಯ ರಿಸರ್ವ್ ಬ್ಯಾಂಕಿನ ಕಾಲಕಾಲಕ್ಕೆ ನೀಡಿದ ಸೂಚನೆಗಳು: ನಿರ್ದೇಶನಗಳನ್ನು ಹಾಗೂ ಬೇರೆ ಬ್ಯಾಂಕುಗಳ ಬಡ್ಡಿಯ ದರಗಳನ್ನು ಗಣನೆಗೆ ತೆಗೆದುಕೊಂಡು, ಠೇವಣಿಗಳು ಮತ್ತು ಮುಂಗಡಗಳ ಮೇಲೆ ಬಡ್ಡಿಯ ದರಗಳನ್ನು ಆಡಳಿತ ಮಂಡಳಿಯಲ್ಲಿ ನಿಗದಿ ಮಾಡಲಾಗಿದೆ. ಬ್ಯಾಂಕಿನ ಠೇವಣಿಗಳ ಮೇಲಿನ ಸರಾಸರಿ ವೆಚ್ಚ ಶೆ.5.65 ಇರುತ್ತದೆ. ಹೂಡಿಕೆಗಳು ಮತ್ತು ಸಾಲಗಳ ಮೇಲೆ ಬಂದ ಬಡ್ಡಿಯ ಸರಾಸರಿ ಆದಾಯ ಶೇ.8.08 ಇವೆರಡರ ವ್ಯತ್ಯಾಸ ಶೇ.2.43 ಷ್ಟಿರುತ್ತದೆ. ಈ ಅನುಪಾತವು ಲಾಭಗಳಿಕೆಯಲ್ಲಿ ಸಮರ್ಪಕವಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ. 4.0ಯಾವುದು ಇರುವುದಿಲ್ಲ. 5. 0ಯಾವುದು ಇರುವುದಿಲ್ಲ. 6. ತಾಳೆ ಹೊಂದಿರುವತ್ತವೆ. 7.NOSTRO ಬ್ಯಾಂಕು ಈ ವ್ಯವಹಾರ ಮಾಡುತ್ತಿಲ್ಲ. 8.ಸಿ.ಆರ್.ಎ.ಆರ್ : ದಿ. 31.03.2026ಕ್ಕೆ ಬ್ಯಾಂಕಿನ ಸಿಆರ್.ಎ.ಆರ್, ಬ್ಯಾಂಕು ನೀಡಿರುವ ಮಾಹಿತಿಗಳ ಪ್ರಕಾರ 13.45 ಇದ್ದು ವಿಧಿಸಿರುವ ಶೇ.9ರ ಮಿತಿಗಿಂತ

	(i) ಹಿಂದಿನ ಸಾಲಿನ ಲಾಭದ ಶೇ.1% ಕ್ಕಿಂತ ಹೆಚ್ಚಿಗೆ ಕೊಡುಗೆ/ ದಾನ ಕೊಟ್ಟಿದ್ದರೆ ಅದರ ಬಗ್ಗೆ ವಿವರಣೆ (ii) ಠೇವಣಿ ಮತ್ತು ಮುಂಗಡಗಳ ಮೇಲಿನ ಬಡ್ಡಿ ದರ–ಅದರ ಸಮರ್ಪಕತೆ ಇವುಗಳಿಂದಾಗಿ ಬ್ಯಾಂಕಿನ ಲಾಭದ ಮೇಲಿನ ಪರಿಣಾಮ ix) ಲೆಕ್ಕಪರಿಶೋಧಕರು ಆಡಳಿತ ಮಂಡಳಿಯ ಗಮನಕ್ಕೆ ತರಲಿಚ್ಚಿಸುವ ಇತರೆ ವಿಷಯಗಳ ಬಗ್ಗೆ.	ಹೆಚ್ಚಾಗಿದ್ದು, ಬ್ಯಾಂಕಿನ ಕ್ಯಾಪಿಟಲ್ ಫಂಡ್ಸ್ ಉತ್ತಮವಾಗಿರುವುದು ಕಂಡುಬರುತ್ತದೆ. 1.ವರದಿ ಸಾಲಿನಲ್ಲಿ ಕೊಡುಗೆ ಧಾನ ಕೊಟ್ಟಿರುವುದಿಲ್ಲ. 2.ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ : ನಿರ್ದೇಶನ ಮತ್ತು ಮಾರ್ಗಸೂಚಿಗಳನ್ನು ಸಹಕಾರ ಸಂಘಗಳ ಕಾಯ್ದೆ1959 ಮತ್ತು 1960ರ ನಿಯಮಗಳು ಮತ್ತು ಬ್ಯಾಂಕಿನ ಉಪನಿಯಮಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿರುವ ನ್ಯೂನತೆಗಳ ಬಗ್ಗೆ ಕ್ರಮವಿಡುವುದು. (ix) 1. ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ರ ಮತ್ತು ಅದರ ಮೇಲಿನ ನಿಯಮಗಳ ಪ್ರಕಾರ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿಯನ್ನು ರಶೀದಿ ಆಧಾರದ ಮೇಲೆ ಸ್ಥಿರವಾಗಿ ಗುರುತಿಸಲಾದ ಆದಾಯವೆಂದು ಪರಿಗಣಿಸುವುದು ಮತ್ತು ಲಾಭ ಮತ್ತು ನಷ್ಟ ಖಾತೆಯ ಮೇಲೆ ಪರಿಣಾಮ ಬೀರದಂತೆ ಹೊಣೆಗಾರಿಕೆಗಳು ಮತ್ತು ಸ್ವತ್ತುಗಳ ಅಡಿಯಲ್ಲಿ ಕಾಂಟ್ರಾ ಆಧಾರದ ಮೇಲೆ ಸಂಚಿತ ಬಡ್ಡಿಯನ್ನು ಲೆಕ್ಕಹಾಕುವುದು, ಇದು ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಅಂಐ) ಹೊರಡಿಸಿದ ಂಖ 9 ಆದಾಯ ಗುರುತಿಸುವಿಕೆ ಮತ್ತು ಖಃಖ ಸೂಚಿಸಿದ ಆದಾಯ ಗುರುತಿಸುವಿಕೆ, ಆಸ್ತಿ ವರ್ಗೀಕರಣ ಮತ್ತು ನಿಬಂಧನೆ (ಖಖಂಅಕ) ಮಾನದಂಡಗಳಿಗೆ ಸಂಚಯ ಆಧಾರಕ್ಕೆ ವಿರುದ್ಧವಾಗಿದೆ. 2. ಟಿಪ್ಪಣಿ 13.07 2020 ರಿಂದ 2025 ರ ವರ್ಷಗಳಿಗೆ ಉದ್ಯೋಗಿಗಳಿಗೆ ಸೇವೆಯಲ್ಲಿರುವಾಗ ರಜೆ ನಗದೀಕರಣ ಪ್ರಯೋಜನದ ಕಡೆಗೆ ರೂ. 22,71,452 ಸಂಬಂಧಿಸಿದಂತೆ ಲಾಭ ಮತ್ತು ನಷ್ಟ ಖಾತೆಗೆ ವಿಧಿಸಲಾಗಿದೆ ಮತ್ತು AS 15 ನಿವೃತ್ತಿ ಪ್ರಯೋಜನಗಳ ಪ್ರಕಾರ ಸೇವೆಯ ನಿರ್ಧಾರದ ಸಮಯದಲ್ಲಿ ನಗದೀಕರಿಸಬಹುದಾದ ಸಂಚಿತ ಗಳಿಸಿದ ರಜೆಯ ಕಡೆಗೆ ನಿಬಂಧನೆ ಮಾಡಲಾಗಿಲ್ಲ.; 3. ಟಿಪ್ಪಣಿ 5 ಅ. RBI ಸರ್ಕ್ಯುಲರ್ ಪ್ರಕಾರ ಬಹಿರಂಗಪಡಿಸುವಿಕೆಗಳ ಅಡಿಯಲ್ಲಿ, ದಿನಾಂಕ ಫೆಬ್ರುವರಿ 24, 2025 ರ ಖಃಖ ಅಧಿಸೂಚನೆ ಆಔಖ.ಅಖಇ.ಖಇಅ.62/07.10.002/2024–25 ರ ಪ್ರಕಾರ ಬ್ಯಾಂಕಿನ ಒಟ್ಟು ಮುಂಗಡಗಳ ನಿಗದಿತ ಸೀಲಿಂಗ್ 25% ಮೀರಿದ ವಸತಿ ಮತ್ತು ರಿಯಲ್ ಎಸ್ಟೇಟ್ ವಲಯಕ್ಕೆ ಎಕ್ಸ್ಪೋಶರ್ಗೆ ಸಂಬಂಧಿಸಿದಂತೆ; 4. ಟಿಪ್ಪಣಿ 5 ಅ. RBI ಸರ್ಕ್ಯುಲರ್ ಪ್ರಕಾರ ಬಹಿರಂಗಪಡಿಸುವಿಕೆಗಳ ಅಡಿಯಲ್ಲಿ, ಆದ್ಯತೆ ಮತ್ತು ಆದ್ಯತೆಯೇತರ ವಲಯ ವರ್ಗೀಕರಣವು ಖಃಖ ಸೂಚನೆಗಳು/ಮಾರ್ಗದರ್ಶಿ ಸೂತ್ರಗಳಿಗೆ ಅನುಸಾರವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಪರಿಶೀಲನೆಯಲ್ಲಿದೆ ಎಂಬುದಕ್ಕೆ ಸಂಬಂಧಿಸಿದಂತೆ; ಮತ್ತು 5. ಸಿಬ್ಬಂದ್ದಿ ಬೋನಸ ಧನವನ್ನು ಕರ್ನಾಟಕ ಸಹಕಾರ ಸಂಸ್ಥೆಗಳ ಕಾಯಿದೆ, 1959 ರ ಕಲಂ 57 ಮತ್ತು ಉಪನಿಯಮಗಳೊಂದಿಗೆ ಓದಿದಾಗ ಲಾಭ ಮತ್ತು ನಷ್ಟ ತ:ಕ್ತೆಗೆ ಖರ್ಚಾಗಿ ಹಾಕುವ ಬದಲು ಲಾಭದಿಂದ ಮಾಡಲಾದ ವಿನಿಯೋಜನೆಯೆಂದು, ಇದು ಸಾರ್ವತ್ರಿಕವಾಗಿ ಅಂಗೀಕರಿಸಲಾದ ಲೆಕ್ಕಪತ್ರ ತತ್ವಗಳ ವಿರುದ್ಧವಾಗಿರುತ್ತದೆ.
52	**ಬ್ಯಾಂಕಿನ ಅಧೀನ ಸಂಸ್ಥೆಗಳ ಕಾರ್ಯನಿರ್ವಹಣೆ ಬಗ್ಗೆ:** ಅಧೀನ ಸಂಸ್ಥೆಗಳು ಬ್ಯಾಂಕಿಗೆ ವರದಿ ಮಾಡಲು ಜಾರಿಯಲ್ಲಿರುವ ವ್ಯವಸ್ಥೆ. i) ಅಧೀನ ಸಂಸ್ಥೆಗಳು ನಿವ್ವಳ ನಷ್ಟ ಅನುಭವಿಸುತ್ತಿದ್ದಲ್ಲಿ ವಿಮರ್ಶೆ	ಈ ರೀತಿಯ ವ್ಯವಹಾರಗಳು ನಡೆದಿರುವುದಿಲ್ಲ.
53	D.E.A. Fund Scheme 2014 ಜಾರಿಯಲ್ಲಿರುವ ಬಗ್ಗೆ ii) ಬ್ಯಾಂಕ್ ಪ್ರಾರಂಭವಾದಾಗಿನಿಂದ ವಾರಸುದಾರರಿಲ್ಲದ ಠೇವಣಿಗಳನ್ನು ಆ.ಇ.ಂ. Fund ಗೆ ವರ್ಗಾಯಿಸಿರುವ ಬಗ್ಗೆ. iii) ಈ ಕುರಿತು ನಿಗದಿಪಡಿಸಲಾಗಿರುವ ವಿವಿಧ ನಮೂನೆ ಹಾಗೂ ನಿಯತಕಾಲಿಕೆಗಳನ್ನು ಸಲ್ಲಿಸಿರುವ ಬಗ್ಗೆ. iv) ಈ ಕುರಿತು ಸಮನ್ವಯ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ. v) ಗ್ರಾಹಕರ ದೂರುಗಳನ್ನು ಪರಿಹರಿಸಲು ಬ್ಯಾಂಕ್ ಹೊಂದಿರುವ ವ್ಯವಸ್ಥೆ vi) ಗ್ರಾಹಕರ / ವಾರಸುದಾರರ ಠೇವಣಿಗಳನ್ನು ಹಿಂದಿರುಗಿಸುವ ಬಗ್ಗೆ	ಕಾಲಕಾಲಕ್ಕೆ ನಿಗದಿಪಡಿಸಿದ ನಮೂನೆಯಲ್ಲಿ ವರದಿ ಸಾಲಿನಲ್ಲಿ ಸಲ್ಲಿಸುತ್ತಿದ್ದು ಅದರಂತೆ ಬ್ಯಾಂಕಿನಲ್ಲಿ ಈ ರೀತಿಯ ಲೆಕ್ಕಗಳು ಇರುವುದಿಲ್ಲ. ಸಲ್ಲಿಸಲಾಗಿದೆ. ಸಲ್ಲಿಸಲಾಗಿದೆ. ದೂರುಪೆಟ್ಟಿಗೆಯನ್ನು ಬ್ಯಾಂಕಿನಲ್ಲಿ ಇಡಲಾಗಿದೆ. ಅನ್ವಯಿಸುವುದಿಲ್ಲ. ಅನ್ವಯಿಸುವುದಿಲ್ಲ.

	ಈ ಸಂಬಂಧ ಬ್ಯಾಂಕಿನ ದಾಖಲೆಗಳನ್ನು ಪರಿಶೋಧಿಸುವ ಬಗ್ಗೆ ಇರುವ ವ್ಯವಸ್ಥೆ.	ಅನ್ವಯಿಸುವುದಿಲ್ಲ.
54	**ಆಡಳಿತ ಮಂಡಳಿ:** i) ಚುನಾಯಿತ ಆಡಳಿತ ಮಂಡಳಿಯ ಕಾರ್ಯನಿರ್ವಹಣೆ, ರಚನೆ, ಸಮಿತಿಗಳು, ಸಮಿತಿಗಳ ರಚನೆ, ಕಾರ್ಪೊರೇಟ್ ಗೌವರ್ನೆನ್ಸ್, ಆಡಳಿತ ಮಂಡಳಿಯಲ್ಲಿನ ವೃತ್ತಿ ಪರತೆ, ನಿಯತ ಕಾಲಿಕವಾಗಿ ಸಭೆ ನಡೆಸುವ ಬಗ್ಗೆ, ಸಭೆಯಲ್ಲಿ ಚರ್ಚೆಯಾದ ವಿಷಯಗಳು, ಗೈರು ಹಾಜರಾದ ನಿರ್ದೇಶಕರು, ನಿರ್ದೇಶಕರಿಂದ ಬೈಲಾ ಉಲ್ಲಂಘನೆ, ನಿರ್ದೇಶಕರನ್ನು ವಜಾಗೊಳಿಸಿರುವ ವಿವರ ಯಾವುದಾದರೂ ಇದ್ದಲ್ಲಿ, ಇತ್ಯಾದಿ ಅಂಶಗಳ ಬಗ್ಗೆ (ಚುನಾಯಿತ ಆಡಳಿತ ಮಂಡಳಿ ಇಲ್ಲದೆ ಇದ್ದಲ್ಲಿ ಮೇಲಿನ ಅಂಶಗಳ ಬಗ್ಗೆ ಆಡಳಿತಾಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ ನೀಡುವುದು.) ii) ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ನೇಮಕಾತಿ, ವಿದ್ಯಾರ್ಹತೆ ಮತ್ತು ಬ್ಯಾಂಕ್ ನಡೆಸುವ ಸಾಮರ್ಥ್ಯ ಹೊಂದಿರುವ ಬಗ್ಗೆ. iii) 2ನೇ ಹಂತದ ಸಿಬ್ಬಂದಿಗಳ ಕಾರ್ಯನಿರ್ವಹಣೆ, ನೇಮಕಾತಿ, ತರಬೇತಿ, ಜವಾಬ್ದಾರಿ ನಿಗದಿಪಡಿಸುವಿಕೆ, ರೊಟೇಷನ್ ಬಗ್ಗೆ ವಿಮರ್ಶೆ.	i)ಬ್ಯಾಂಕಿನ ಆಡಳಿತ ಮಂಡಳಿಯ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆ0ಯು ದಿನಾಂಕ 29.07.2023ರಂದು ಜರುಗಿದ್ದು ಅದರಲ್ಲಿ ಕಾನೂನಿನ್ವ0ಯ 17 ಜನ ನಿರ್ದೇಶಕರು ಚುನಾಯಿತರಾಗಿದ್ದು, ಬ್ಯಾಂಕಿನ ಪದಾಧಿಕಾರಿಗಳ ಚುನಾವಣೆ0ಯು ದಿನಾಂಕ 21.01.2026 ರಂದು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ0ಯು 29.11.2025 ರಂದು ಜರುಗಿರುತ್ತದೆ. ವರದಿ ಸಾಲಿನಲ್ಲಿ 24 ಸಭೆ ನಡೆದಿದ್ದು ಇದು ಉಪನಿಯಮ ಹಾಗೂ ಕಾಯ್ದೆ ಅನುಗುಣವಾಗಿರುತ್ತದೆ. ಬ್ಯಾಂಕ್ ಉಪನಿಯಮ 53(2)ರಂತೆ ಬ್ಯಾಂಕಿನಲ್ಲಿ ಕನಿಷ್ಟ ಪಕ್ಷ ತಿಂಗಳಿಗೊಮ್ಮೆಯಾದರೂ ಸಭೆ ಸೇರಬೇಕಾಗಿರುತ್ತದೆ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಕಲಂ 56 ರೊಂದಿಗೆ ಓದಲ್ಪಡುವ ಕಲಂ 10ಂ(2ಂ)(ಎ) ರ ಉಲ್ಲಂಘನೆ ಕುರಿತು ಬ್ಯಾಂಕಿನ ನಿರ್ದೇಶಕರಾಗಿ ಹತ್ತು ವರ್ಷಗಳಿಗಿಂತ ಹೆಚ್ಚು ಅವಧಿಗೆ ಕಾರ್ಯನಿರ್ವಹಿಸಿರುವುದು ಗಮನಕ್ಕೆ ಬಂದಿದೆ. ಇದು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಕಲಂ 56 ರೊಂದಿಗೆ ಓದಲ್ಪಡುವ ಕಲಂ 10ಂ(2ಂ)(ಎ) ರಲ್ಲಿರುವ ನಿರ್ದೇಶಕರ ಗರಿಷ್ಠ ಸೇವಾ ಅವಧಿಗೆ ಸಂಬಂಧಿಸಿದ ನಿಯಮಗಳಿಗೆ ಅನುಗುಣವಾಗಿಲ್ಲ.ಆದರೆ ಬ್ಯಾಂಕು ರಾಜ್ಯ ಉಚ್ಚನ್ಯಾ0ಯಲ0ಯದಲ್ಲಿ ದಾವಾ ಹೂಡಿದ್ದು ಈ ಸುತ್ತೋಲೆ ಬಗ್ಗೆ 0ಯಾವುದೇ ಕ್ರಮವಿಡದಿರಲು ರಾಜ್ಯ ಉಚ್ಚ ನ್ಯಾ0ಯಾಲ0ಯವು ಸೂಚನೆ ನೀಡಿರುತ್ತದೆ. ಆದ್ದರಿಂದ, ಬ್ಯಾಂಕ್ ಈ ವಿಷಯವನ್ನು ತಕ್ಷಣ ಪರಿಶೀಲಿಸಿ, ಮೇಲ್ಕಂಡ ಕಾನೂನು ನಿಬಂಧನೆಗಳಿಗೆ ಅನುಸಾರವಾಗುವಂತೆ ಅಗತ್ಯ ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳಬೇಕು. ಈ ವಿಷಯವನ್ನು ನಿರ್ದೇಶಕ ಮಂಡಳಿಯ ಮುಂದೆ ಮಂಡಿಸಿ, ಮಂಡಳಿಯ ರಚನೆಯನ್ನು ನಿಯಮಾನುಸಾರಗೊಳಿಸಲು ಹಾಗೂ ಇಂತಹ ಉಲ್ಲಂಘನೆಗಳು ಮರುಕಳಿಸದಂತೆ ಅಗತ್ಯ ಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳಬೇಕು. ಇದಲ್ಲದೆ, ಮೇಲ್ಕಂಡ ನಿರ್ದೇಶಕರು ಯಾವ ದಿನಾಂಕದಿಂದ ನಿರ್ದೇಶಕರಾಗಿ ಮುಂದುವರಿಯಲು ಅನರ್ಹರಾಗಿದ್ದಾರೆ ಎಂಬುದನ್ನು ಬ್ಯಾಂಕ್ ಸ್ಪಷ್ಟವಾಗಿ ಗುರುತಿಸಿ ದಾಖಲಿಸಬೇಕು. ಅನರ್ಹತೆಯ ದಿನಾಂಕದಿಂದ ಅವರು ನಿರ್ದೇಶಕ ಮಂಡಳಿ ಅಥವಾ ಅದರ ಉಪಸಮಿತಿಗಳ ಸಭೆಗಳಲ್ಲಿ ಭಾಗವಹಿಸಿ ಕೈಗೊಂಡ ನಿರ್ಣಯಗಳು, ಅನುಮೋದನೆಗಳು ಹಾಗೂ ಇತರೆ ತೀರ್ಮಾನಗಳ ವಿವರಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಅನರ್ಹತೆಯ ನಂತರ ಅವರು ಭಾಗವಹಿಸಿ ಕೈಗೊಂಡ ನಿರ್ಣಯಗಳಿಂದ ಬ್ಯಾಂಕಿನ ಆಡಳಿತ, ಕಾರ್ಯಾಚರಣೆ, ಸಾಲ ಮಂಜೂರಾತಿ, ಹೂಡಿಕೆ, ನೇಮಕಾತಿ ಅಥವಾ ಇತರೆ ವಿಷಯಗಳ ಮೇಲೆ ಉಂಟಾಗಿರುವ ಅಥವಾ ಉಂಟಾಗಬಹುದಾದ ಪರಿಣಾಮಗಳನ್ನು ಮೌಲ್ಯಮಾಪನ ಮಾಡಿ, ಅಗತ್ಯವಿದ್ದಲ್ಲಿ ಸೂಕ್ತ ಕಾನೂನು ಹಾಗೂ ಆಡಳಿತಾತ್ಮಕ ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳಬೇಕು. ಈ ಸಂಬಂಧ ಕೈಗೊಂಡ ಕ್ರಮಗಳ ವರದಿ, ನಿರ್ದೇಶಕ ಮಂಡಳಿಯ ನಿರ್ಣಯಗಳ ಪ್ರತಿಗಳು ಹಾಗೂ ಸಂಬಂಧಿತ ದಾಖಲೆಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸಬೇಕು. ii)ಪ್ರತ್ಯೇಕ ತ:ಖ್ತೆ ಲಗತ್ತಿಸಲಾಗಿರುತ್ತದೆ. ಬ್ಯಾಂಕಿನಲ್ಲಿ ಸಿಬ್ಬಂದಿ ಸೇವಾ ನಿಯಮಗಳನ್ನು ರಚಿಸಿಕೊಂಡು ಹಾಲಿ ಸಿಬ್ಬಂದಿಗಳಿಗೆ ಅರ್ಬನ್ ಫೆಡರೇಷನ್‌ನಲ್ಲಿ ನೀಡಿರುವ 8ನೇ ವೇತನಾ ಸಮಿತಿಯು ಶಿಫಾರಸ್ಸು ಮಾಡಿರುವಂತೆ ಸಿಬ್ಬಂದಿಗಳಿಗೆ 7ನೇ ವೇತನ ಶ್ರೇಣಿಯನ್ನು ಬಿ ವರ್ಗದ ಶ್ರೇಣಿಯಂತೆ ನೀಡುತ್ತಿದ್ದಾರೆ.

		iii)ಎಲ್ಲಾ ಸಿಬ್ಬಂದಿಗಳಿಗೆ ಆಡಳಿತ ಮಂಡಳಿಯ ತೀರ್ಮಾನದಂತೆ ಸಿಬ್ಬಂದಿಗಳ ಸೇವಾ ಪುಸ್ತಕವು ಬ್ಯಾಂಕಿನಲ್ಲಿ ಲಭ್ಯವಿದ್ದು ಅದನ್ನು ಪರಿಶೀಲಿಸಲಾಗಿರುತ್ತದೆ. ಸಿಬ್ಬಂದಿಗಳನ್ನು ಆಗಿಂದಾಗ್ಗೆ ರೋಟೇಷನ್ ಮಾಡುತ್ತಾ ವಿವಿದ ವಿಭಾಗಗಳಲ್ಲಿ ವಿವಿಧ ಶಾಖೆಗಳಲ್ಲಿ ಕೆಲಸ ಹಂಚಿಕೆ ಮಾಡಲಾಗುತ್ತಿದೆ.
55	ಲೆಕ್ಕಪರಿಶೋಧಕರ ಸಲಹೆ / ಸೂಚನೆಗಳು	ಸಾಲ ಮಂಜೂರು ಮಾಡುವಾಗ ಸಾಲಗಾರರ ಆದಾಯ ದಾಖಲಾತಿಗಳು, ಮರುಪಾವತಿಯ ಸಾಮರ್ಥ್ಯ, ಆದಾಯ ತೆರಿಗೆ ದಾಖಲೆಗಳು ಮತ್ತು ಇತರೆ ಆರ್ಥಿಕ ತ:ಖ್ತೆತಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾಲ ಮಂಜೂರು ಮಾಡಲು ಸೂಚಿಸಿದೆ. ವಿವಿಧ ಸಿಬಿಲ್ ರೇಟಿಂಗ್ ನೀಡುವ ಕಂಪನಿಗಳಿಂದ ಸಿಬಿಲ್ ಸ್ಕೋರ್ಗಳನ್ನು ಪಡೆದು ಸಾಲವಿತರಿಸುವುದು.
56	ಲೆಕ್ಕಪರಿಶೋಧನಾ ಫಲಿತಾಂಶ ಹಾಗೂ ಕ್ರಮವಿಡಬೇಕಾದ ಕಂಡಿಕೆಗಳು	ಆರ್.ಬಿ.ಐ ಸುತ್ತೋಲೆಗಳಂತೆ ಬ್ಯಾಂಕು ತಾನು ಸಂಗ್ರಹಿಸಿರುವ ಒಟ್ಟು ಠೇವಣಿಗಳ ಜವಾಬ್ದಾರಿಗಳ ಮೇಲೆ ಶೇ.5ಕ್ಕಿಂತ ಹೆಚ್ಚಾಗಿ ಯಾವುದೇ ಒಂದು ಬ್ಯಾಂಕಿನಲ್ಲಿ ಹೂಡತಕ್ಕದ್ದಲ್ಲ.
57	a) **<u>ಲೆಕ್ಕಪರಿಶೋಧನಾ ವರ್ಗೀಕರಣ</u>**: ಎ) ಹಿಂದಿನ ಸಾಲಿಗೆ ವರ್ಗೀಕರಣ ಬಿ) ವರದಿ ಸಾಲಿಗೆ ವರ್ಗೀಕರಣ	(ವರ್ಗೀಕರಣ ಪಟ್ಟಿ ಲಗತ್ತಿಸಿದೆ) ಎ–ವರ್ಗ ಎ–ವರ್ಗ

<u>ಅಡಕಗಳು:</u>

1) ಜಮಾ–ಖರ್ಚು ತ:ಖ್ತೆ
2) ಲಾಭ–ನಷ್ಟ ತ:ಖ್ತೆ
3) ಆಸ್ತಿ–ಜವಾಬ್ದಾರಿ ತ:ಖ್ತೆ
4) ನಿಗದಿಪಡಿಸಿದ ನಮೂನೆಯಲ್ಲಿ ದೃಢೀಕರಣ
5) ಸಮಗ್ರ ಆರ್ಥಿಕ ವಿವರವುಳ್ಳ ತ:ಖ್ತೆ
   (ನಿಗದಿತ ನಮೂನೆಯಲ್ಲಿ ಲಗತ್ತಿಸುವುದು)
6) ಎನ್.ಪಿ.ಎ ತ:ಖ್ತೆ
7) ವರ್ಗೀಕರಣ ತ:ಖ್ತೆ, ಅನುಬಂಧ–2 ಲೆಕ್ಕಪರಿಶೋಧನಾ ವರ್ಗೀಕರಣ
8) ಶಾಖೆಗಳಿದ್ದಲ್ಲಿ **LFAR** ನಮೂನೆಯಲ್ಲಿ ವರದಿ, ಅನುಬಂಧ–3 ಶಾಖೆಗಳ **LFAR**

ದಿನಾಂಕ : 23.06.2026

ಸ್ಥಳ : ಬೆಂಗಳೂರು

ಭಾಗ–2

ಬ್ಯಾಂಕಿನ ಪರಿಚಯಾತ್ಮಕ ವಿವರಗಳು

1) ಬ್ಯಾಂಕಿನ ವಿವರಗಳು

1) ಬ್ಯಾಂಕಿನ ಹೆಸರು	ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿಯಮಿತ
2) ಬ್ಯಾಂಕಿನ ವಿಳಾಸ	ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ನಿ, ರಾಜ್ಯ ಉಚ್ಚ ನ್ಯಾಯಾಲಯದ ಕಟ್ಟಡ, (ಹೊಸ ಸಂಕೀರ್ಣ), ಡಾ:ಅಂಬೇಡ್ಕರ್ ವೀದಿ, ಬೆಂಗಳೂರು–560001.
3) ಬ್ಯಾಂಕಿನ ನೋಂದಣಿ ಸಂಖ್ಯೆ/ದಿನಾಂಕ	ಜೆ.ಆರ್.ಬಿ.ನೋಂದಣಿ.97.12.26148:98–99ದಿನಾಂಕ15.02.1999
4) ರಿಸರ್ವ್ ಬ್ಯಾಂಕಿನಿಂದ ಪಡೆದ ಬ್ಯಾಂಕಿಂಗ್ ಲೈಸನ್ಸ್‌ಕ್ರಮಾಂಕ ಹಾಗೂ ದಿನಾಂಕ	ಭಾರತೀಯ ರಿಸರ್ವ್ ಬ್ಯಾಂಕ್ ಲೈಸನ್ಸ್ ಸಂಖ್ಯೆ: ಯು.ಬಿ.ಡಿ:ಕೆ.ಎ.ಎನ್:0006ಪಿ ದಿನಾಂಕ 23.02.2000 (Lic No.UBD.KAN.0006P Dated 23.02.2000)
5) ಬ್ಯಾಂಕಿನ ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ)	ಬ್ಯಾಂಕಿನ ಉಪನಿಯಮ ಸಂಖ್ಯೆ3 : ಬ್ಯಾಂಕಿನ ಕಾರ್ಯಕ್ಷೇತ್ರದ ವ್ಯಾಪ್ತಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೆಂಗಳೂರು ನಗರ ಪ್ರದೇಶಕ್ಕೆ ಸೀಮಿತವಾಗಿರತಕ್ಕದ್ದು ಎಂದುಇರುತ್ತದೆ.

2) ಬ್ಯಾಂಕಿನ ಮುಖ್ಯ ಉದ್ದೇಶಗಳು/ಚಟುವಟಿಕೆಗಳು (ಸಂಘದಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) [ಉಪನಿಯಮ 5 ರಂತೆ:]

1) ಬ್ಯಾಂಕಿನ ಸದಸ್ಯರಲ್ಲಿ ಮತ್ತು ಠೇವಣಿದಾರರಲ್ಲಿ ಮಿತವ್ಯಯ, ಸ್ವಸಹಾಯ ಮತ್ತು ಸಹಕಾರ ಭಾವನೆಗಳನ್ನು ಪ್ರೋತ್ಸಾಹಿಸುವುದು
2) 1949ರ ಬ್ಯಾಂಕಿಂಗ್ ನಿಯಂತ್ರಣಕಾಯ್ದೆ (ಸಹಕಾರ ಸಂಘಗಳಿಗೆ ಅನ್ವಯವಾಗುವ) ಕಲಂ 5(ಬಿ)ನಲ್ಲಿ ವಿವರಿಸಿರುವಂತೆ, ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು ಮತ್ತು ಸದರಿ ಕಾಯ್ದೆಯ ಕಲಂ 6ರ ಪ್ರಕಾರ ಇತರ ಬ್ಯಾಂಕಿಂಗ್ ವ್ಯವಹಾರಗಳನ್ನು ಕೈಗೊಳ್ಳುವುದು.
3) ಹಣವನ್ನು ಸಂಗ್ರಹಿಸುವುದುಅಥವಾ ಸಾಲವಾಗಿ ಪಡೆಯುವುದು.
4)ಕಂತು ಖರೀದಿಯ(hire purchase) ಅಥವಾ ತೋರಾಧಾರ(hypothecation)ದ ಮೇಲೆ ಮೋಟಾರು ವಾಹನಗಳ ಕಾಯ್ದೆಯಲ್ಲಿ ವಿವರಿಸುವಂತೆ ಮೋಟಾರು ವಾಹನಗಳನ್ನು ಅಥವಾ ಯಂತ್ರೋಪಕರಣಗಳನ್ನು ಮತ್ತು ಇತರೆ ಯಂತ್ರಗಳನ್ನು ಕೊಳ್ಳಲು ಸದಸ್ಯರಿಗೆ ಸಾಲ ಒದಗಿಸುವುದು
5) ಬ್ಯಾಂಕಿನ ವ್ಯವಹಾರಗಳ ಅವಶ್ಯಕತೆಗಾಗಿ ಮತ್ತು ಅನುಕೂಲಕ್ಕಾಗಿ ನಿವೇಶನ, ಕಟ್ಟಡಗಳನ್ನು ಹೊಂದುವುದು, ಸ್ವಾಧೀನ ಪಡಿಸಿಕೊಳ್ಳುವುದು, ಕಟ್ಟಡ ನಿರ್ಮಿಸುವುದು, ಬದಲಾವಣೆ ಮಾಡುವುದು ಮತ್ತುಇತರ ಕಾರ್ಯಗಳನ್ನು ಕೈಗೊಳ್ಳುವುದು
6) ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆದು ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಶಾಖೆಗಳನ್ನು, ಉಪಶಾಖೆಗಳನ್ನು, ಪಾವತಿ ಕಛೇರಿ ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡಬಹುದಾದ ಕಛೇರಿ ಮುಂತಾದವುಗಳನ್ನು ತೆರೆಯುವುದು ಹಾಗೂ ಅವುಗಳ ವ್ಯವಹಾರಗಳ ಬಗ್ಗೆ ನಿಯಮಗಳನ್ನು ರೂಪಿಸುವುದು.
7)ಗ್ರಾಹಕರ ಪರವಾಗಿ ಎಲ್ಲಾ ವಿಧವಾದ ಮುಚ್ಚಳಿಕೆಗಳು, ಹುಂಡಿಗಳು, ಪ್ರಮಾಣ ಪತ್ರಗಳು, ಡ್ರಾಫ್ಟ್‌ಗಳು, ವಾರಂಟ್‌ಗಳು, ಷೇರು ಪ್ರಮಾಣ ಪತ್ರಗಳು ಮತ್ತಿತರ ಆಧಾರ ಪತ್ರಗಳನ್ನು ಹೊರಡಿಸುವುದು, ಅಂಗೀಕರಿಸುವುದು, ಖರೀದಿಸುವುದು ಅಥವಾ ಮಾರಾಟ ಮಾಡುವುದು
8) ಬ್ಯಾಂಕಿನ ಹೆಚ್ಚುವರಿ ಸಂಪನ್ಮೂಲಗಳನ್ನು ಸರಕಾರದ ಪ್ರಾಮಿಸರಿ ನೋಟುಗಳಲ್ಲಿ, ಋಣ ಪತ್ರಗಳಲ್ಲಿ, ಷೇರುಗಳಲ್ಲಿ ಮತ್ತು ಸರಕಾರದ ಖಾತರಿ ಹೊಂದಿದ ಸಹಕಾರ ಸಂಘಗಳ ಸಾಲ ಪತ್ರಗಳಲ್ಲಿ ಮತ್ತು ಕಾಯ್ದೆಯ ಕಲಂ 58ರನ್ವಯ ಇತರ ಸಂಸ್ಥೆಗಳಲ್ಲಿ ತೊಡಗಿಸುವುದು.
9) ಸಹಕಾರ ಶಿಕ್ಷಣವನ್ನು ಪ್ರೋತ್ಸಾಹಿಸಲು ನಿಧಿಗಳನ್ನು ಸ್ಥಾಪಿಸುವುದು.
10) ಮಂಡಲಿಯಿಂದ ರೂಪಿತವಾದ ನಿಯಮಗಳಿಗನುಸಾರವಾಗಿ ಸಿಬ್ಬಂದಿಯವರ ಮತ್ತು ಸದಸ್ಯರ ಕಲ್ಯಾಣಕ್ಕಾಗಿ ಹಾಗೂ ಅವರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ನಿಧಿಯನ್ನು ಸ್ಥಾಪಿಸುವುದು ಮತ್ತು ನೆರವು ನೀಡುವುದು
11) ಮಂಡಲಿಯಿಂದ ರೂಪಿತವಾದ ನಿಯಮಗಳಿಗೆ ಅನುಸಾರವಾಗಿ ಬ್ಯಾಂಕಿನ ಸದಸ್ಯರ ಅಲ್ಪಾವಧಿ ಹುಂಡಿಗಳನ್ನು ಮತ್ತು ವಹಿವಾಟಿನ ಬಿಲ್ಲುಗಳನ್ನು ಸೋಡಿ (ಡಿಸ್ಕೌಂಟ್) ಮಾಡುವುದು.
12) ಸಾಲ ಮತ್ತು ಮುಂಗಡಗಳನ್ನು ಕೊಡಲು ವ್ಯವಸ್ಥೆ ಮಾಡುವುದು. ಭಾರತೀಯ ರಿಸರ್ವ್ ಬ್ಯಾಂಕಿನ ನಿಯಾಮಾನುಸಾರ ಸಾಲಗಳ ಮಿತಿಯನ್ನು ನಿಗದಿಪಡಿಸಿ ಸಾಲ ಮಂಜೂರು ಮಾಡುವುದು
13) ಸಣ್ಣ, ಗೃಹ ಮತ್ತು ಸ್ವಯಂ ಉದ್ಯೋಗ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ವ್ಯಾಪಾರಗಳನ್ನು ಪ್ರಾರಂಭಿಸಲು ಹಾಗೂ ವಾಹನ ಖರೀದಿಗಾಗಿ ಆರ್ಥಿಕ ಮತ್ತುತಾಂತ್ರಿಕ ಸಹಾಯ ಒದಗಿಸುವುದು.
14) ಸೋಡಿಯನ್ನು ಒಪ್ಪಿಕೊಳ್ಳುವುದು, ಭದ್ರಕಪಾಟು (ಲಾಕರ್) ಮತ್ತುಇತರೆ ಸಂಬಂಧಿತ ಸೇವೆಗಳನ್ನು ಒದಗಿಸುವುದು.
15) ಭಾಗಶ: ಅಥವಾ ಸಂಪೂರ್ಣ ಬಾಕಿ ವಸೂಲಿಗೆ ಬ್ಯಾಂಕುತನ್ನ ಸ್ವಾಧೀನಕ್ಕೆ ಬಂದಿರುವ ಯಾವುದೇ ಆಸ್ತಿಪಾಸ್ತಿಗಳ ನಿರ್ವಹಣೆ ಹಾಗೂ ವಿಲೇವಾರಿ ಮಾಡುವುದು.
16) ಸದಸ್ಯರ ಅನುಕೂಲಕ್ಕಾಗಿ ಮರಣೋತ್ತರ ಸಹಾಯನಿಧಿ ಸಂಗ್ರಹಣೆ ಮಾಡುವುದು ಮತ್ತು ಸದಸ್ಯರ ಕುಟುಂಬಕ್ಕೆ ಮರಣೋತ್ತರ ಸಹಾಯಧನ ನೀಡುವುದು.
17) ಸಾಮಾನ್ಯವಾಗಿ ಸಾರ್ವಜನಿಕರ ವಿಶೇಷತಃ ಸದಸ್ಯರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು.
18) ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯೊಂದಿಗೆ ಕ್ರೆಡಿಟ್ / ಡೆಬಿಟ್ ಕಾರ್ಡುಗಳ ವ್ಯವಹಾರದಲ್ಲಿ ತೊಡಗುವುದು
19) ಬ್ಯಾಂಕಿನ ವ್ಯವಹಾರ ವೃದ್ಧಿಯಾಗುವುದಕ್ಕೆ ಮತ್ತು ಬಲಗೊಳ್ಳುವುದಕ್ಕೆ ಅವಶ್ಯಕವಾದ ಎಲ್ಲಾ ಬಗೆಯ ಕೆಲಸಗಳನ್ನು ಮಾಡುವುದು.
20.ಸದಸ್ಯರ ಮತ್ತು ಸಮಾಜದಲ್ಲಿನ ಆರ್ಥಿಕವಾಗಿ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಯೋಜನೆಗಳನ್ನು ತಯಾರಿಸುವುದು ಮತ್ತು ಹಣಕಾಸಿನ ಸಹಾಯ ಮಾಡುವುದು

21.ಸದಸ್ಯರ ಹಾಗೂ ಗ್ರಾಹಕರ ಪರವಾಗಿ ಖಾತರಿಗಾರನಾಗಿ (ಗ್ಯಾರಂಟರ್) ವರ್ತಿಸುವುದು ಮತ್ತು ಸರಕಾರ ಅಥವಾ ಅರೆ ಸರಕಾರಿ ಸಂಸ್ಥೆಗಳಿಗೆ ಖಾತರಿ ನೀಡುವುದು.
22. ನಿರುದ್ಯೋಗಸ್ಥರಿಗೆ ಸ್ವಂತ ಉದ್ಯಮ / ಉದ್ಯೋಗ ಸ್ಥಾಪಿಸಲು ಆರ್ಥಿಕ ಮತ್ತು ತಾಂತ್ರಿಕ ನೆರವನ್ನೊದಗಿಸುವುದು.
23.ಧಾರ್ಮಿಕ ಸಂಸ್ಥೆ, ವಿಶ್ವಸ್ಥ ಮಂಡಳಿ ಮತ್ತು ಇತರೆ ಸಾರ್ವಜನಿಕ ಸಂಘ ಸಂಸ್ಥೆಗಳಿಂದ ಠೇವಣಿಗಳನ್ನು ಸ್ವೀಕರಿಸುವುದು
ಮೇಲ್ಕಂಡ ಉದ್ದೇಶಗಳ ಪೈಕಿ ಕೆಲವೂಂದು ಉದ್ದೇಶಗಳನ್ನು ಅನುಷ್ಟಾನಕ್ಕೆ ತಂದಿರುವುದಿಲ್ಲ. ಅನುಷ್ಟಾನಕ್ಕೆ ತಂದಿರುವ ಉದ್ದೇಶಗಳ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳತಕ್ಕದ್ದು.

3) ಬ್ಯಾಂಕಿನ ಪದಾಧಿಕಾರಿಗಳ ಹೆಸರು, ಹುದ್ದೆ ಮತ್ತುಅವಧಿ: (ದಿನಾಂಕ 31–03–2025ರಲ್ಲಿದ್ದಂತೆ)

1) ಅಧ್ಯಕ್ಷರು	1.ಶ್ರೀ.ಯತಿರಾಜ್.ಎಸ್ ದಿನಾಂಕ 14.10.2024 ರಿಂದ 21.01.2026 ರವರೆಗೆ 2. ಶ್ರೀ. ಶ್ರೀನಿವಾಸ. ಎಸ್.ಬಿ 21.01.2026 ರಿಂದ ತಹಲ್‌ವರೆಗೂ
2) ಉಪಾಧ್ಯಕ್ಷರು	1.ಶ್ರೀ.ನಾಗಭೂಷಣ.ಟಿ.ಆರ್ ದಿನಾಂಕ 14.10.2024 ರಿಂದ 29.11.2025 2.ಶ್ರೀ.ಮಂಜೇಗೌಡ.ಕೆ.ಎಸ್ ದಿನಾಂಕ 29.11.2025 ರಿಂದ ತಹಲ್‌ವರೆಗೂ
3) ಮುಖ್ಯಕಾರ್ಯನಿರ್ವಹಣಾಧಿಕಾರಿಗಳು	ಶ್ರೀ. ಪ್ರಸನ್ನ.ಡಿ.ಆರ್

4) ಶಾಖೆಗಳು ಮತ್ತು ಅವುಗಳ ವಿಳಾಸ

ಶಾಖೆಯ ಹೆಸರು	ಶಾಖೆಯ ವಿಳಾಸ	ಆರ್.ಬಿ.ಐ ಲೈಸನ್, ಕ್ರಮಾಂಕ, ದಿನಾಂಕ	ಶಾಖಾ ವ್ಯವಸ್ಥಾಪಕರು	ವ್ಯವಹಾರ ಪ್ರಾರಂಭ ದಿನಾಂಕ
1) ಸಿಟಿ ಸಿವಿಲ್ ಕೋರ್ಟ್	ವಕೀಲರ ಭವನ 3ನೇ ಸಂಕೀರ್ಣ, ಸಿಟಿ ಸಿವಿಲ್ ಕೋರ್ಟ್ ಆವರಣ, ಕೆ.ಜಿ.ರಸ್ತೆ, ಬೆಂಗಳೂರು–560009	UBD.BG.BL.726 26.06.2015	ಶ್ರೀ ದೀಪಕ್.ಕೆ.ಸಿ(ಪ್ರಭಾರ)	ಪೆಬ್ರವರಿ 2015
2) ಮ್ಯಾಜಿಸ್ಟ್ರೇಟ್ ಕೋರ್ಟ್	ಮ್ಯಾಜಿಸ್ಟ್ರೇಟ್ ಕೋರ್ಟ್ ಆವರಣ, ನೃಪತುಂಗರಸ್ತೆ, ಬೆಂಗಳೂರು–560001	UBD.BG.BL.727 26.06.2015	ಶ್ರೀಮತಿ.ಈರಮ್ಮ.ಸಿ.ಎನ್	ಜೂನ್ 2015

ಲೆಕ್ಕಪರಿಶೋಧನೆ ಮತ್ತು ಆಂತರಿಕ ಪರಿಶೋಧನೆ ವಿವರಗಳು

5) ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ

ಹೆಸರು	ಹುದ್ದೆ	ಕಛೇರಿ
1) ಶ್ರೀ.ಪ್ರಸನ್ನಡಿ.ಆರ್.	ಪ್ರಧಾನ ವ್ಯವಸ್ಥಾಪಕರು	ಪ್ರಧಾನಕಛೇರಿ
2) ಶ್ರೀ ದೀಪಕ್.ಕೆ.ಸಿ(ಪ್ರಭಾರ)	ಶಾಖಾ ವ್ಯವಸ್ಥಾಪಕರು ಪ್ರಭಾರ	ಸಿಟಿಸಿವಿಲ್ ಕೋರ್ಟ್ ಶಾಖೆ
3) ಶ್ರೀಮತಿ.ಈರಮ್ಮ.ಸಿ.ಎನ್	ಶಾಖಾ ವ್ಯವಸ್ಥಾಪಕರು ಪ್ರಭಾರ	ಮ್ಯಾಜಿಸ್ಟ್ರೇಟ್ ಕೋರ್ಟ್ ಶಾಖೆ

6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ಹೆಸರು ಮತ್ತು ವಿಳಾಸ

ಲೆಕ್ಕಪರಿಶೋಧಕರ ಹೆಸರು	ಎಸ್ ಕೃಷ್ಣಪ್ರಸಾದ್,
ಹುದ್ದೆ ಹಾಗೂ ವಿಳಾಸ	ಪಾಲುದಾರರು, ಬಿ ಎಮ್ ಎಸ್ ಎಸ್ ಆಂಡ್ ಕೋ, ಚಾರ್ಟರ್ಡ್ ಅಕೌಂಟೆಂಟ್ಸ್, ಸುಮಗಿರಿ, ನಂ.165, 1ನೇ ಮಹಡಿ, 9ನೇ ಮುಖ್ಯರಸ್ತೆ, ಸೆಕ್ಟರ್ 6, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು–560102
ಎಂಪಾನಲ್‌ಮೆಂಟ್ ನಂಬರ್	005389 S
ಲೆಕ್ಕಪರಿಶೋಧನಾ ಅವಧಿ	2024–2025

7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ

ಲೆಕ್ಕಪರಿಶೋಧಕರ ಹೆಸರು	ಸಂಜಯ ಕಳ್ಳಿಗುದ್ದಿ
ಹುದ್ದೆ ಹಾಗೂ ವಿಳಾಸ	ಪಾಲುದಾರರು, ಬಿ ಎಂ ಎಸ್ ಎಸ್ ಅಂಡ್ ಕೋ, ಚಾರ್ಟರ್ಡ್ ಅಕೌಂಟೆಂಟ್ಸ್, ನಂ04 ಆದಿತ್ಯಾ ಚೆಂಬರ್, 1ನೆ ಮುಖ್ಯ ರಸ್ತೆ , 2ನೆ ಬ್ಲಾಕ, 3ನೆ ಫೇಸ್, ಬಸವೆಶ್ವರ ನಗರ , ಬೆಂಗಳೂರು–560079
ಎಂಪಾನಲ್‌ಮೆಂಟ್ ನಂಬರ್	005389 S
ನೇಮಕಾತಿ ಉಲ್ಲೇಖ / ವಂಟನೆ ಆದೇಶ ಸಂಖ್ಯೆ ಮತ್ತು ದಿನಾಂಕ	ಆರ್.ಬಿ.ಐ ನೇಮಕಾತಿ ಆದೇಶ ಸಂಖ್ಯೆ. BLR.DOS.ARG.No.S-944/11.01.111/2025-26 dated 23.09.2025
ಲೆಕ್ಕಪರಿಶೋಧನೆಯ ಆರಂಭದ ದಿನಾಂಕ	ದಿ.10.01.2026
ಲೆಕ್ಕಪರಿಶೋಧನೆಯ ಮುಕ್ತಾಯದ ದಿನಾಂಕ	ದಿ.23.06.2026
ಲೆ.ಪ.ಗೆ ತೆಗೆದುಕೊಂಡ (ಮಾನವ) ದಿನಗಳು	70 ಮಾನವ ದಿನಗಳು

8) **ಲೆಕ್ಕಪರಿಶೋಧನಾವರ್ಗೀಕರಣ :**(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ(Audit Instruction)ಕ್ರಮ ಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ**	" ಎ"ವರ್ಗ
ಹಿಂದಿನ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ**	" ಎ"ವರ್ಗ

9) **ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಷೆ :**

1) ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ?	ಹೌದು
2) ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ?	ಪ್ರಧಾನ ಕಛೇರಿ ಶಾಖೆ, ಸಿಟಿ ಸಿವಿಲ್ ಕೋರ್ಟ್ ಹಾಗೂ ಮ್ಯಾಜಿಸ್ಟ್ರೇಟ್ ಕೋರ್ಟಿನ ಶಾಖೆಯ ಆಂತರಿಕ ಲೆಕ್ಕಪರಿಶೋಧನೆಯನ್ನು ಮೇ. ಅಳವಂಡಿ ಅಂಡ್ ಅಸೋಸಿ0ಯೆಟ್ಸ್ ರವರು ನಡೆಸುತ್ತಿದ್ದು, ಈ ಮೇಲ್ಕಂಡ ಕಂಪನಿಯವರು ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸಿ ಪ್ರತಿ ಮಾಹೆ ವರದಿಗಳನ್ನು ನೀಡುತ್ತಿದ್ದು ಅದರ ಪರಿಶೀಲನೆ ಹಾಗೂ ಅನುಸರಣೆ ಆಗಿದೆ.
3) ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು	ವರದಿ0ಯಲ್ಲಿ ಸೂಚಿಸಿರುವಂತಹ ಕೆಲವು ನ್ಯೂನತೆಗಳನ್ನು ಶೀಘ್ರವೇ ಪರಿಹರಿಸಿಕೊಳ್ಳುವುದು.
4) ಅವುಗಳಿಗೆ ಸಂಘವು ನೀಡಿದ ಅನುಪಾಲನಾ ವರದಿಯ ವಿವರ	ಆಂತರೀಕ ಲೆಕ್ಕಪರಿಶೋಧನೆಗೆ ಸಂಬಂದಿಸಿದಂತೆ ಅನುಪಾಲನಾ ವರದಿಗಳನ್ನು ನೀಡಿರುವ ಕ್ರಮ ಇಟ್ಟಿರುವುದಿಲ್ಲ.
5) ಅಂತಹ ನ್ಯೂನತೆಗಳು ಮುಂದುವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು?	ಆದರೆ ಪಟ್ಟಿ ಮಾಡಿರುವ ನ್ಯೂನತೆಗಳನ್ನು ಆಗಿಂದಾಗ್ಗೆ ಸರಿಪಡಿಸಿಕೊಂಡಿರುವ ಬಗ್ಗೆ ಆಡಳಿತ ಮಂಡಳಿ0ಯ ಸಭೆ0ಯಲ್ಲಿ ಚರ್ಚೆ0ಯಾಗಿರುತ್ತದೆ.

<u>ಆಂತರಿಕ ಹತೋಟಿ</u>	
ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ ಕೈಪಿಡಿಗಳ ಬಗ್ಗೆ	ಆರ್.ಬಿ.ಐ. ಮತ್ತು ಸಹಕಾರ ಇಲಾಖೆಯು ನೀಡುವಂತಹ ಮಾರ್ಗಸೂಚಿಗಳು, ಆದೇಶಗಳು ಮತ್ತು ಕೈಪಿಡಿಗಳನ್ನು ಸೂಚಿಸಿದ ರೀತಿಯಲ್ಲಿ ಕಾರ್ಯರೂಪಕ್ಕೆ ತಂದು ಕಾರ್ಯನಿರ್ವಹಿಸುತ್ತಿದೆ. ಲೆಕ್ಕಪತ್ರಗಳ ನಿರ್ವಹಣೆಗೆ ಸಂಬಂದಿಸಿದಂತೆ ಅವಶ್ಯವಿದ್ದ ಮಾರ್ಗ ಸೂಚನೆಗಳನ್ನು ಕೇಂದ್ರ ಕಛೇರಿಯು ತನ್ನ ಎಲ್ಲಾ ಶಾಖೆಗಳಿಗೆ ಸುತ್ತೋಲೆಯ ಮೂಲಕ ಕಳುಹಿಸಿಕೊಡುವ ಪದ್ದತಿ ಜಾರಿಯಲ್ಲಿರುತ್ತದೆ.
ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ	ಬ್ಯಾಂಕು ಸಂಪೂರ್ಣ ಗಣಕೀಕೃತಗೊಂಡಿದ್ದು ಗಣಕಯಂತ್ರದಲ್ಲಿ ಲೆಕ್ಕ ಪುಸ್ತಕಗಳ ಸರಿದೂಗಿಸುವಿಕೆಯನ್ನು ಕೂಲಂಕುಷವಾಗಿ ಪರೀಶೀಲಿಸಿದ್ದು ಅವುಗಳು ಸರಿಯಾಗಿರುತ್ತದೆ.
ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ.	ಲೆಕ್ಕಪತ್ರಗಳನ್ನು ಪ್ರತಿ ತಿಂಗಳು ಪರಾಮರ್ಷಿಸಲಾಗಿದ್ದು ಸಾಮಾನ್ಯವಾಗಿ ಲೆಕ್ಕಪತ್ರಿಕೆಗಳಲ್ಲಿ 0ಯಾವುದೇ ವ್ಯತ್ಯಾಸ ಕಂಡುಬಂದಿರುವುದಿಲ್ಲ. ಆಗಿಂದಾಗ್ಗೆ ಸಮನ್ವ0ಯ ಪಟ್ಟಿ0ಯನ್ನು ತ0ಯಾರಿಸುವ ಪದ್ದತಿ0ಯು ಜಾರಿ0ಯಲ್ಲಿರುತ್ತದೆ.
ಇವುಗಳ ಅನುಷ್ಠಾನದಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ.	ಈ ಮೇಲ್ಕಂಡ ಕಂಪನಿಯವರು ನೀಡುವ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸಿ ಪ್ರತಿ ಮಾಹೆ ವರದಿಗಳನ್ನು ನೀಡುತ್ತಿದ್ದು ಅದರ ಪರಿಶೀಲನೆ ಹಾಗೂ ಅನುಸರಣೆ ಆಗುತ್ತಿದೆ.

<u>ಜಾಗರೂಕತೆ:</u>	
1. ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ.	₹70.00 ಲಕ್ಷ ಮೊತ್ತದ ಐಪಿಎಲ್ ಸಾಲ ಖಾತೆ ಸಂಖ್ಯೆ 230ರ ಲೆಕ್ಕಪರಿಶೋಧನಾ ಪರಿಶೀಲನೆಯ ಸಂದರ್ಭದಲ್ಲಿ ಸಾಲ ಮೌಲ್ಯಮಾಪನ, ಕಾನೂನು ಪರಿಶೀಲನೆ, ಮಂಜೂರಾತಿ ಹಾಗೂ ಭದ್ರತೆ ಸೃಷ್ಟಿ ಪ್ರಕ್ರಿಯೆಗಳಲ್ಲಿ ಗಂಭೀರ ವ್ಯತ್ಯಾಸಗಳು ಕಂಡುಬಂದಿರುತ್ತದೆ. ಈ ಸಾಲದ ವಸೂಲಾತಿ0ಯ ಸಂಬಂದ ಆಡಳಿತ ಮಂಡಳಿ0ಯ ತೀರ್ಮಾನದಂತೆ ಸಾಲಗಾರನ ಮತ್ತು ಇತರರ ವಿರುದ್ದ ಪೋಲೀಸ್ ಠಾಣೆ0ಯಲ್ಲಿ ದೂರು ದಾಖಲಾಗಿದ್ದು ಇದರ ಜೋತೆಗೆ ಸಾಲ ವಸೂಲಾತಿ ಮೊಕದ್ದಮೆ0ಯನ್ನು ಹೂಡಲು ತೀರ್ಮಾನವಾಗಿರುತ್ತದೆ. ಈಗಾಗಲೇ ಪೋಲಿಸ್ ಠಾಣೆ0ಯಲ್ಲಿ ದಾಖಲಾಗಿರುವ ಮೋಕದ್ದಮೆ0ಯು ಪ್ರಾಥಮಿಕ ಹಂತದ ವಿಚಾರಣೆ0ಯಲ್ಲಿರುತ್ತದೆ. ಇದರ ಬಗ್ಗೆ ಆರ್.ಬಿ.ಐ ಮಾಹಿತಿ0ಯನ್ನು ಸಲ್ಲಿಸುವುದು. ಈ ಸಾಲದ ವಿವರಗಳನ್ನು ಸೆಡ್ಯೂಲ್ 18ರಲ್ಲಿ ತೋರಿಸಲಾಗಿದೆ,

2. ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ	ಆಂತರಿಕ ತನಿಖಾ ಸಮಿತಿಯು ಪ್ರಕರಣವನ್ನು ಪರಿಶೀಲಿಸಿ 30.08.2024 ರಂದು ತನ್ನ ವರದಿಯನ್ನು ಸಲ್ಲಿಸಿತ್ತು. ವರದಿಯ ಆಧಾರದ ಮೇಲೆ ಸಂಬಂಧಿತ ಶಾಖಾ ವ್ಯವಸ್ಥಾಪಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.ಬ್ಯಾಂಕಿನಿಂದ ಪಡೆದ ಮಾಹಿತಿಯ ಪ್ರಕಾರ, ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್ಐಆರ್ ದಾಖಲಿಸಲಾಗಿದೆ.
3. ಅಮಾನತ್ ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ	ಅಮಾನತ್ ಲೆಕ್ಕಗಳು ಹಾಗೂ ಸಂಡ್ರಿ ಡೆಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ ವಿಶ್ಲೇಷಣೆಯನ್ನು ಇತರೆ ಜವಾಬ್ದಾರಿಗಳ ಅಡಿಯಲ್ಲಿ ವಿಶ್ಲೇಷಿಸಲಾಗಿದೆ.
4. ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಾಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು.	ಸದರಿ ಶೀರ್ಷಿಕೆಗಳ ಅಡಿಯಲ್ಲಿ ಪರೀಕ್ಷಾರ್ಥ ಪರಿಶೀಲನೆ ಕೈಗೊಂಡಿದ್ದು ಇದರಲ್ಲಿ ಅಸಾಮಾನ್ಯ ನಮೂದುಗಳು ಯಾವುದು ಕಂಡು ಬಂದಿಲ್ಲ.
<u>ತನಿಖೆ / ಹಿಂದಿನ ತನಿಖೆಯ ದಿನಾಂಕ</u>	ಭಾರತೀಯ ರಿಸರ್ವ್ ಬ್ಯಾಂಕಿನ ವತಿಯಿಂದ ಜುಲೈ 2024 ಮಾಹೆಯಲ್ಲಿ ತನಿಖೆಯಾಗಿದ್ದು ಸಂಬಂದಪಟ್ಟ ತನಿಖಾ ವರದಿಗೆ ಬ್ಯಾಂಕಿನ ವತಿಯಿಂದ ಅನುಸರಣಾ ವರದಿಯನ್ನು ಸಕಾಲದಲ್ಲಿ ಸಲ್ಲಿಸಲಾಗಿರುತ್ತದೆ.

10) ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ

ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?

ಎ	ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯತಃಖ್ತೆ	ಇರುತ್ತದೆ
ಬಿ	ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತುದಾಸ್ತಾನು ಪರಿಶೀಲನೆ ಮಾಡಿದತಃಖ್ತೆ;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಸಿ	ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣತಃಖ್ತೆ;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಡಿ	ಸದಸ್ಯತ್ವ ಮತ್ತು ಷೇರು ಷೆಡ್ಯೂಲು	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಇ	ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಎಫ್	ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಜಿ	ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಹೆಚ್	ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಐ	ಸುಸ್ತಿದಾರರ ಸದಸ್ಯರ ಪಟ್ಟಿ;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಜೆ	ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ;	ಗಣಕಯಂತ್ರದಲ್ಲಿ ನಿರ್ವಹಿಸಲಾಗಿದೆ
ಕೆ	ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಎಲ್	ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಎಂ	ಸಾಲ ದೃಢೀಕರಣ ತಃಖ್ತೆಗಳು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಎನ್	ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಒ	ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಪಿ	ಎರಡು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಕ್ಯೂ	ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು;	ಅನ್ವಯಿಸುವುದಿಲ್ಲ
ಆರ್	ಹಣ ದುರುಪಯೋಗ ಮತ್ತುಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಎಸ್	ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಓ	ವ್ಯಾಜ್ಯ ಮತ್ತುಜಾರಿ ಪ್ರಕರಣಗಳ ಷೆಡ್ಯೂಲು;	ಅನ್ವಯಿಸುವುದಿಲ್ಲ
ಯು	ಮೀಸಲು ಇತರೆ ನಿಧಿಗಳ ಷೆಡ್ಯೂಲು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ವ್ಹಿ	ಠೇವಣಿದಾರರ ಷೆಡ್ಯೂಲು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಡಬ್ಲ್ಯೂ	ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಎಕ್ಸ್	ಅಖೈರುದಾಸ್ತಾನಿನ ಷೆಡ್ಯೂಲು;	ಅನ್ವಯಿಸುವುದಿಲ್ಲ
ವೈ	ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ
ಝಿಡ್	ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು;	ಬ್ಯಾಂಕಿನಲ್ಲಿ ನಿರ್ವಹಿಸಲಾಗಿದೆ

11) <u>ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ:</u>

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ?
ಸಹಕಾರ ಸಂಘಗಳ ಕಾಯಿದೆ ಕಾನೂನು ಪ್ರಕರಣ 63(10) ರಂತೆ ಆಡಳಿತ ಮಂಡಳಿ0ಯ ವಾರ್ಷಿಕ ಸಾಮಾನ್ಯ ದಿನಾಂಕದ 30 ದಿನಗಳ ಒಳಗಾಗಿ ಸಹಕಾರ ಇಲಾಖೆಗೆ ಕ್ರಮ ತೆಗೆದುಕೊಂಡ ವರದಿ0ಯನ್ನು ಸಲ್ಲಿಸಬೇಕಾಗಿದ್ದು, ಬ್ಯಾಂಕು ಸಕಾಲದಲ್ಲಿ ಅನುಪಾಲನಾ ವರದಿ0ಯನ್ನು ಸಲ್ಲಿಸಿರುತ್ತದೆ.

2) ಸಲ್ಲಿಸಿದ್ದ ಪತ್ರ ಸಂಖ್ಯೆ :NSBN: 118:2025–2026 ದಿನಾಂಕ: 15.09.2025

3) ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು. 0ಯಾವುದು ಇರುವುದಿಲ್ಲ.

12) ಸಹಕಾರ ಸಂಘಕ್ಕೆ/ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು(ಸಹಕಾರಕಾಯ್ದೆ ಕಾನೂನಿನ ಉಲ್ಲಂಘನೆ ಹಾಗು ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)

1	ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ	ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ಮತ್ತು ನಿಯಮಗಳ ಪಾಲನೆ ಬಗ್ಗೆ ವಿವರಗಳನ್ನು ಆ0ಯಾ0ಯ ಕಂಡಿಕೆಗಳಲ್ಲಿ ವಿವರಿಸಲಾಗಿದೆ.
2	ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ?	ನಿಬಂಧಕರು / ನಿರ್ದೇಶಕರ ಇಲಾಖೆಯು ನೀಡುವ ಸೂಚನೆ ಸುತ್ತೋಲೆಗಳ ಅಂಶಗಳನ್ನು ಅಳವಡಿಸಿಕೊಂಡು ಅನುಸರಿಸಲಾಗುತ್ತಿದೆ.
3	ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ	ಆರ್.ಬಿ.ಐ ನೀಡುವ ನಿರ್ದೇಶನಗಳು ಹಾಗೂ ಮಾರ್ಗಸೂಚಿಗಳ ಅನುಸರಣೆಆಗುತ್ತಿದೆ.
4	ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ	ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ಆ0ಯಾ0ಯ ಕಂಡಿಕೆಗಳಲ್ಲಿ ವಿವರಿಸಲಾಗಿದೆ.
5	ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ	ಭಾರತೀಯ ರಿಸರ್ವ್ ಬ್ಯಾಂಕಿನ ವತಿಯಿಂದ ಜುಲೈ 2024 ರ ಮಾಹೆಯಲ್ಲಿ ತನಿಖೆಯಾಗಿದ್ದು ಸಂಬಂದಪಟ್ಟ ತನಿಖಾ ವರದಿಗೆ ಬ್ಯಾಂಕಿನ ವತಿಯಿಂದ ಅನುಸರಣಾ ವರದಿಯನ್ನು ದಿನಾಂಕ 02.12.2024 ರಂದು ಸಲ್ಲಿಸಲಾಗಿರುತ್ತದೆ. ವರದಿ ಸಾಲಿನಲ್ಲಿ ಬಿ.ಆರ್.ಕಾಯಿದೆ ಪ್ರಕರಣ 35ರಂತೆ 0ಯಾವುದೇ ಪರಿವಿಕ್ಷಣೆ ನಡೆದಿರುವುದಿಲ್ಲ. ಹಾಗೂ ಸಹಕಾರ ಇಲಾಖೆಯಿಂದಲೂ 0ಯಾವುದೇ ವಿಚಾರಣೆ / ತಪಾಸಣೆ ನಡೆದಿರುವುದಿಲ್ಲ.

ಬ್ಯಾಂಕಿನ ವ್ಯಾವಹಾರಿಕ ವಿವರಗಳು

13) ದಿನಾಂಕ 31–03–2026ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.

ಸದಸ್ಯತ್ವ	ಸಾಮಾನ್ಯ ಸದಸ್ಯತ್ವ		ನಾಮಮಾತ್ರ ಸದಸ್ಯತ್ವ		ಸಹ ಸದಸ್ಯತ್ವ	
	ಪ್ರಸಕ್ತ ಸಾಲು	ಹಿಂದಿನ ಸಾಲು	ಪ್ರ. ಸಾಲು	ಹಿಂ. ಸಾಲು	ಪ್ರ. ಸಾಲು	ಹಿಂ. ಸಾಲು
ವರ್ಷಾರಂಭದಲ್ಲಿ ಇದ್ದ ಸದಸ್ಯರು	8965	8659	12	4	394	385
ಹೊಸದಾಗಿ ಸದಸ್ಯತ್ವ ಪಡೆದವರು	484	367	4	8	4	10
ಸದಸ್ಯತ್ವದಿಂದ ಕಡಿಮೆ ಆದವರು	57	61	0	0	0	1
ಸಾಲಾಖ್ಯೆರಿಗೆ ಇರುವ ಸದಸ್ಯರು	9392	8965	16	12	398	394
ಸದಸ್ಯತ್ವದ ಬಗ್ಗೆ ವಿಮರ್ಷೆ	ಉಪನಿಯಮ 16 ಮತ್ತು 35ರಂತೆ ಬ್ಯಾಂಕಿನಲ್ಲಿ ಸದಸ್ಯರಾಗಲು ಅವಕಾಶವಿರುತ್ತದೆ.					

ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದುರಷ್ಟರನ್ನು ಮೀರತಕ್ಕಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯಕ್ರಮಬದ್ಧ ಸದಸ್ಯತ್ವದ ಹೊಂದಲು ಅರ್ಹವಿದ್ದಲ್ಲಿ ಈ ತಿದ್ದುಪಡಿ ದಿನಾಂಕದಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ಧ ಸದಸ್ಯರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಸಂಘದಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು.	ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಹಸದಸ್ಯರು ಶೇ.15 ರಷ್ಟು ಇರಬೇಕಾಗುತ್ತದೆ. ಬ್ಯಾಂಕಿನಲ್ಲಿ 9392 ಸದಸ್ಯರಿದ್ದು ಇದಕ್ಕೆ ಶೇ.15 ರಂತೆ 1409 ಸಹಸದಸ್ಯರು ಇರಬೇಕಾಗಿದ್ದು 398 ಸಹಸದಸ್ಯರು ಇರುತ್ತಾರೆ. ಇದು ಶೇ.4.24 ರಷ್ಟಿರುತ್ತದೆ. ಈಗಾಗಿ ಸಹಕಾರ ಸಂಘಗಳ ಅಧಿನಿಯಮ ಉಲ್ಲಂಘನೆಯಾಗಿರುವುದಿಲ್ಲ.
ಎಲ್ಲ ಸದಸ್ಯರಿಂದಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಷೆ	ವರದಿ ಸಾಲಿನಲ್ಲಿ ಸದಸ್ಯರಾಗಿರುವ ಸದಸ್ಯರ ಅರ್ಜಿಗಳನ್ನು ಪರೀಶಿಲಿಸಲಾಗಿ ಬ್ಯಾಂಕು ಸದಸ್ಯರಿಂದ ಕೆ.ವೈ.ಸಿ ದಾಖಾಲಾತಿಗಳನ್ನು ಪಡೆಯುತ್ತಿದೆ.

ಬ್ಯಾಂಕಿನ ಸದಸ್ಯರೊಡನೆ ಕೈಗೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಷೆ :

1	ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ	ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಹಾಗೂ ನಿಯಮಗಳಿಗೆ ಅನ್ವಯವಾಗುವಂತೆ ಬ್ಯಾಂಕಿನಲ್ಲಿರುವ ಸಾಮಾನ್ಯ ಸದಸ್ಯರಿಗೆ ಮಾತ್ರ ವಾರ್ಷಿಕ ಮಹಾಸಭೆಗೆ ಹಾಜರಾಗುವ, ನಿರ್ದೇಶಕರ ಸ್ಥಾನಕ್ಕೆ ಸ್ಪರ್ದಿಸುವ ಹಾಗೂ ಮತಹಾಕುವ ಮತ್ತು ಬ್ಯಾಂಕಿನಿಂದ ನೀಡುವ ಇತರೆ ರೀತಿಯ ಎಲ್ಲಾ ಸೌಲಭ್ಯಗಳನ್ನು ಪಡೆಯುವ ಅವಕಾಶವಿರುತ್ತದೆ. ಬ್ಯಾಂಕಿನಲ್ಲಿರುವ ಸಹಸದಸ್ಯರೂ ಕೂಡ ವಿವಿಧ ರೀತಿಯ ಠೇವಣಿಗಳು ಮತ್ತು ಬ್ಯಾಂಕಿನ ವತಿಯಿಂದ ನೀಡುತ್ತಿರುವ ವಿವಿಧ ರೀತಿಯ ಸಾಲಗಳನ್ನು ಪಡೆಯುವ ಅವಕಾಶವಿರುತ್ತದೆ.
2	ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ	ಬ್ಯಾಂಕಿನಲ್ಲಿರುವ ವಿವಿಧರೀತಿಯ ಠೇವಣಿಗಳನ್ನು ಸದಸ್ಯೇತರರಿಂದ ಪಡೆಯಲಾಗುತ್ತಿದೆ.
3	ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು	ವ್ಯಾಪ್ತಿ ಮೀರಿದ ವ್ಯವಹಾರಗಳು ಯಾವುದು ಇರುವುದಿಲ್ಲ.
4	ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ	ಷೇರು ಬಂಡವಾಳವನ್ನು ಬ್ಯಾಂಕಿನ ದಿನನಿತ್ಯ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು ಸದಸ್ಯರಿಗೆ ಸಾಲನೀಡಲು ಹಾಗೂ ಹೆಚ್ಚುವರಿ ಬಂಡವಾಳದ ಹೂಡಿಕೆಗಳಲ್ಲಿ ವಿನಿಯೋಗಿಸುತ್ತಿದ್ದು ಷೇರು ಬಂಡವಾಳದ ನಿರ್ವಹಣೆ ಸಮರ್ಪಕವಾಗಿರುತ್ತದೆ.

14) ಷೇರು ಬಂಡವಾಳ ಬಗ್ಗೆ ವಿಮರ್ಷೆ :

<u>ಅಧಿಕೃತ ಷೇರು ಬಂಡವಾಳ :</u> ಸಂಘದ ಉಪನಿಯಮದನ್ವಯ ಅಧಿಕೃತ ಷೇರು ಭಂಡವಾಳದ ಮಿತಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಸಂಘದ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಷಿಸುವುದು.	1. ದಿನಾಂಕ 2.9.2017ರ ಮಹಾಸಭೆಯಲ್ಲಿ ಬ್ಯಾಂಕು ಸಂಗ್ರಹಿಸಬಹುದಾದ ಗರಿಷ್ಟ ಷೇರು ಬಂಡವಾಳದ ಮಿತಿಯನ್ನು ರೂ.10 ಕೋಟಿಗಳಿಗೆ ನಿಗದಿಪಡಿಸಿರುತ್ತದೆ ಮತ್ತು ಪ್ರತಿ ಷೇರಿನ ಮುಖಬೆಲೆ ರೂ.100/–ಆಗಿದೆ. 2. ಮಹಾಸಭೆಯು ನಿಗದಿಪಡಿಸಿರುವ ಗರಿಷ್ಟ ಷೇರು ಬಂಡವಾಳದ ಮೊತ್ತವು ಬ್ಯಾಂಕಿನ ಅಧಿಕೃತ ಪಾಲು ಬಂಡವಾಳದ ಮೊತ್ತವಾಗಿರತಕ್ಕದ್ದು.

ದಿನಾಂಕ 31–03–2026 ಕ್ಕೆ ಇರುವಂತೆ ಬ್ಯಾಂಕಿನ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.

ಮೊತ್ತ ಲಕ್ಷಗಳಲ್ಲಿ

ಷೇರು ಬಂಡವಾಳ	ಸರಕಾರದ ಶೇರು		ಸಾಮಾನ್ಯ ಶೇರು		ನಾಮಮಾತ್ರ ಸದಸ್ಯತ್ವ		ಸಹ ಸದಸ್ಯರ ಶೇರು	
	ಪ್ರ.ಸಾಲು	ಹಿಂ.ಸಾಲು	ಪ್ರ.ಸಾಲು	ಹಿಂ.ಸಾಲು	ಪ್ರ.ಸಾಲು	ಹಿಂ.ಸಾಲು	ಪ್ರ.ಸಾಲು	ಹಿಂ.ಸಾಲು
ವರ್ಷಾರಂಭದಲ್ಲಿದ್ದಂತೆ	0	0	782.41	750.92	0.012	0.004	0.62	0.61
ಪ್ರಸಕ್ತ ಸಾಲಿನಲ್ಲಿನ ಜಮಾ	0	0	55.04	41.22	0.004	0.008	0.00	0.02
ಪ್ರಸಕ್ತ ಸಾಲಿನಲ್ಲಿನ ಖರ್ಚು	0	0	3.64	9.73	0	0	0.00	0.01
ಸಾಲಾಖ್ಯೆರಿಗೆ ಇದ್ದಂತೆ	0	0	833.81	782.41	0.016	0.012	0.62	0.62

ವರದಿ ಸಾಲಾಖ್ಯರಿಗೆ ಪಾವತಿ0ುದ ಪಾಲು ಬಂಡವಾಳವು ಸುಮಾರು 51.41 ಲಕ್ಷಗಳಷ್ಟು ಹೆಚ್ಚಿಗೆ0ುಗಿರುತ್ತದೆ. ಅಂದರೆ ಹಿಂದಿನ ಸಾಲಾಖ್ಯೆರಿಗೆ ಇದ್ದ ಷೇರು ಬಂಡವಾಳ ಶೇ 6.58 ರಷ್ಟು ಹೆಚ್ಚಿಗೆ0ುಗಿರುತ್ತದೆ.

<u>ಸರ್ಕಾರದ ಶೇರು ಬಂಡವಾಳದ ಬಗ್ಗೆ ವಿಮರ್ಷೆ :</u> ಸರ್ಕಾರದ ಶೇರುಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು.	ಸದರಿ ಬ್ಯಾಂಕಿನಲ್ಲಿ ಸರ್ಕಾರದ ಶೇರುಧನ ಇರುವುದಿಲ್ಲ.
<u>ಸಂದಾಯವಾದ ಶೇರು ಬಂಡವಾಳದ ಬಗ್ಗೆ ವಿಮರ್ಷೆ</u> (ಇದರಲ್ಲಿ ಸಂದಾಯವಾದ ಶೇರು ಬಂಡವಾಳ ಅಧಿಕೃತ ಶೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಶೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಶೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಿಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮರ್ಷಿಸುವುದು.)	1. ಅಧಿಕೃತ ಶೇರು ಬಂಡವಾಳದ ಮಿತಿಯು ರೂ.10 ಕೋಟಿಯಾಗಿರುವುದರಿಂದ ಬ್ಯಾಂಕಿನ ಶೇರುಧನ ಮಿತಿಯೊಳಗೆ ಇರುತ್ತದೆ. 31.03.2026ರ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ.834.45 ಲಕ್ಷ ಬಂಡವಾಳವಿರುತ್ತದೆ. 2. ಉಪನಿಯಮ ಸಂಖ್ಯೆ 10 ರಂತೆ ಬ್ಯಾಂಕಿನ ಪ್ರತಿಶೇರಿನ ಮುಖಬೆಲೆ ರೂ.100/– ಇರತಕ್ಕದ್ದು. ಪ್ರತಿ ಸಹಕಾರ ವರ್ಷದ ಕೊನೆ0ು ದಿನದಂದು ಇರುವಂತೆ ತಮ್ಮ ಸದಸ್ಯರುಗಳ ಒಂದು ಪಟ್ಟಿ0ುನ್ನು ಸಿದ್ದಪಡಿಸಬೇಕಾಗಿದ್ದು ಅದರಂತೆ ಕ್ರಮ ವಿಡಲಾಗಿರುತ್ತದೆ. ಸದಸ್ಯರ ಪಟ್ಟಿ0ುನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸಲಾಗಿದ್ದು ಪ್ರಮಾಣ ಪತ್ರ ಹಾಗೂ ಗುರುತಿನ ಚೀಟಿ ನೀಡಿರುತ್ತಾರೆ.
ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ ? ತಾಳೆಯಾಗಿದೆಯೇ ? (ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಷಿಸುವುದು)	ಬ್ಯಾಂಕು ಸಂಪೂರ್ಣ ಗಣಕೀಕೃತಗೊಂಡಿದ್ದು ಗಣಕಯಂತ್ರದಲ್ಲಿ ಶೇರು ಬಂಡವಾಳ ಮತ್ತು ಸದಸ್ಯರ ಕುಳುವಾರು ಪಟ್ಟಿಯನ್ನು ಪರಿಶೀಲಿಸಲಾಗಿ ಸರಿ ಇರುವುದರ ಬಗ್ಗೆ ಧೃಡೀಕರಿಸಲಾಗಿರುತ್ತದೆ.

15) ಮೀಸಲು ನಿಧಿ ಮತ್ತುಇತರೆ ನಿಧಿಗಳು :'ಶೆಡ್ಯೂಲ್‌ಯು'ನಲ್ಲಿರುವ ಪ್ರಕಾರ

1	ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ ?ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಂಘಕ್ಕೆ ಜಮಾ. ಆಗಿದೆಯೇ ?ಇಲ್ಲದಿದ್ದಲ್ಲಿ ಅವಧಿ ಸಮೇತಕಾರಣ ತಿಳಿಸಿ.	ಬ್ಯಾಂಕಿನಲ್ಲಿ 31.3.2026ರ ಅಂತ್ಯಕ್ಕೆ ರೂ. 8,73,95,754.77 ಆಪದ್ಧನವನ್ನು ಹೊಂದಿರುತ್ತದೆ. ಸಹಕಾರ ಸಂಘಗಳ ಕಾ0ುದೆ ನಿಯಮ 23 ರಂತೆ ಈ ಬಾಬ್ತನ್ನು ಪೂರ್ಣವಾಗಿ ಹೊರಗಿನ ವ್ಯವಹಾರಗಳಲ್ಲಿ ತೊಡಗಿಸಬೇಕಾಗಿದ್ದು, ಅದರಂತೆ ರೂ.9.44 ಕೋಟಿ ರೂ ಹೂಡಿರುತ್ತಾರೆ. ಬ್ಯಾಂಕು ಗುಂತಾಯಿಸಿರುವ ಆಪದ್ಧನ ನಿಧಿಯ ಮೇಲಿನ ಬಡ್ಡಿ ಬ್ಯಾಂಕಿಗೆ ಜಮಾವಾಗಿರುತ್ತದೆ.
2	ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58 ರ ಅಂಶಗಳನ್ನು ಪಾಲಿಸಲಾಗಿದೆಯೆ?	ಆರ್.ಬಿ.ಐ ಸುತ್ತೋಲೆ No.DCBR.BPD(PCB).Cir No.8/16.20.000/2015–16 ದಿ.19.11.2015 ರಂತೆ ಬ್ಯಾಂಕು ಕಾರ್ಯನಿರ್ವಹಿಸುತ್ತಿದೆ.
3	ಬ್ಯಾಂಕ್ ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆಯದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು.	ಬ್ಯಾಂಕು ಕರ್ನಾಟಕ ಸಹಕಾರ ಸಂಘಗಳ ನಿಯಮ 23(2)ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ಕಟ್ಟಡ ನಿರ್ಮಾಣಕ್ಕಾಗಲಿ ಸ್ವಂತಕ್ಕಾಗಲಿ ಉಪಯೋಗಿಸಿಕೊಳ್ಳದೆ ಇರುವುದರಿಂದ ಇಲಾಖಾ ಅನುಮತಿ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

4	ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet)ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು.	ಮೇಲಿನ ಅಂಶದಿಂದಾಗಿ ಸದರಿ ಪ್ರಶ್ನಾವಳಿಗಳಿಗೆ ಯಾವುದೇ ವ್ಯಾಖ್ಯಾನ ಇರುವುದಿಲ್ಲ.
5	ಬ್ಯಾಂಕ್ ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4)(ಬಿ)ಯ ಉಲ್ಲಂಘನೆ?	ವರದಿ ಸಾಲಿನಲ್ಲಿ ಸಹಕಾರ ಶಿಕ್ಷಣ ನಿಧಿಯು ದಿ.03.09.2025 ರಂದು ಸಂಬಂದಪಟ್ಟ ಇಲಾಖೆಗೆ ವಾರ್ಷಿಕ ಮಹಾಸಭೆಯ ಅನುಮೋದನೆಯ ನಂತರ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಲಾಗಿದೆ. 0ಯಾವುದು ಉಲ್ಲಂಘನೆ0ಯಾಗಿರುವುದಿಲ್ಲ

16) ಹೊರಗಿನಿಂದ ಪಡೆದ ಸಾಲಗಳು:

	ಬ್ಯಾಂಕು ಹೊರಗಿನಿಂದ ಸಾಲ ಪಡೆಯಲು ಉಪನಿಯಮದಲ್ಲಿ ಇರುವ ಅವಕಾಶ ಹಾಗೂ ಮಿತಿಯ ಬಗ್ಗೆ ವಿಮರ್ಷೆ	ಉಪನಿಯಮ 8 ರಂತೆ ಆರ್.ಬಿ.ಐ ಕಾಲಕಾಲಕ್ಕೆ ಹೊರಡಿಸಿರುವ ನಿರ್ದೇಶನಗಳಿಗೆ ಒಳಪಟ್ಟು ನಿಯಮ ನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಮಂಡಳಿಯು ನಿರ್ಧರಿಸಿರುವ ಷರತ್ತುಗಳ ಮೇಲೆ ಅಂತಹ ಬಡ್ಡಿದರದಲ್ಲಿ ಅಂತಹ ಮಿತಿಯವರೆಗೆ ಸಾಲಗಳನ್ನು ಮತ್ತು ಠೇವಣಿಗಳನ್ನು ನಿಗದಿಯಾದ ಅವದಿಗೆ ಸ್ವೀಕರಿಸಬಹುದಾಗಿದೆ. ಬ್ಯಾಂಕು ವರದಿ ಸಾಲಿನಲ್ಲಿ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ.

1	**ಬ್ಯಾಂಕಿನಿಂದ ಪಡೆದ ಸಾಲಗಳು:**					
	ಎ] ಬ್ಯಾಂಕಿನ ಹೆಸರು ಮತ್ತು ಶಾಖೆ					ಯಾವುದುಇರುವುದಿಲ್ಲ
	ಬಿ] ಹೊರಗಿನಿಂದ ಪಡೆದ ವಿವಿಧ ಸಾಲದ ವಿವರ:					
	ಕ್ರ.ಸಂ	**ಸಾಲದ ವಿವರ**	**ಆರಂಭದ ಬಾಕಿ**	**ಸಾಲ ತಂದಿದ್ದು**	**ಸಾಲ ಮರುಪಾವತಿ**	**ವರ್ಷಾಂ**
	1	ನಗದು ಪತ್ತಿನ ಸಾಲ	ಯಾವುದುಇರುವುದಿಲ್ಲ			
	2	ಇನ್ನಿತರೆ ಸಾಲಗಳು	ಯಾವುದುಇರುವುದಿಲ್ಲ			
	ಸಿ] ಪಡೆದ ಸಾಲಗಳಲ್ಲಿ ಸುಸ್ತಿ ಸಾಲದ ವಿವರ		ಯಾವುದುಇರುವುದಿಲ್ಲ			
	ಡಿ] ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ [ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು] ಸಾಲಾಂತ್ಯ ದಿ: 31.03.2026 ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು.					ಅನ್ವಯಿಸುವುದಿಲ್ಲ
2	ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ: [ಸಾಲಾಂತ್ಯ ದಿ: 31.3.2026ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು]					ಅನ್ವಯಿಸುವುದಿಲ್ಲ
3	**ಸರ್ಕಾರದ ಸಾಲಗಳು:** {ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ: 31.3.2026 ಕ್ಕೆ ಬಾಕಿ ಇರುವ ಮೊತ್ತಕ್ಕೆದೃಡೀಕರಣ ಪತ್ರದೊಂದಗೆ ತಾಳೆ ಇರುವ ಬಗ್ಗೆ ವಿಮರ್ಷೆ]					ಯಾವುದು ಇರುವುದಿಲ್ಲ
4	ಬ್ಯಾಂಕವು ಹೊರಗಿನಿಂದ ಪಡೆದ ಸಾಲದ ವಷಾಂತ್ಯಕ್ಕೆ ಕೊಡತಕ್ಕ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢೀಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯಾತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.)					ಅನ್ವಯಿಸುವುದಿಲ್ಲ

17) ಠೇವಣಿಗಳು :

1	ಬ್ಯಾಂಕವು ಠೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ	ಬ್ಯಾಂಕಿನ ಉಪನಿಯಮದ ಸಂಖ್ಯೆ 7 ರ ರೀತ್ಯಾ, ಬ್ಯಾಂಕಿನವರು ಈ ಕೆಳಕಂಡ ಠೇವಣಿಗಳನ್ನು ಸಂಗ್ರಹಿಸಬಹುದು. 1)ಚಾಲ್ತಿ ಠೇವಣಿ, 2) ಉಳಿತಾಯ ಠೇವಣಿ 3) ನಿಶ್ಚಿತ ಠೇವಣಿ 4) ಪಿಗ್ಮಿ ಠೇವಣಿ 5) ಆವರ್ತಕ ಠೇವಣಿ 6) ನಿಧಿ ಸ್ವೀಕರಣಾ ಪತ್ರಗಳು (ಕ್ಯಾಷ್ ಸರ್ಟಿಫಿಕೇಟ್) 7) ಪಿಗ್ಮಿ ಭದ್ರತಾ ಠೇವಣಿ 8) ಲಾಕರ್ ಭದ್ರತಾ ಠೇವಣಿ 9) ನಿರ್ದೇಶಕ ಮಂಡಳಿಯವರು ಕಾಲಕಾಲಕ್ಕೆ ನಿರ್ದರಿಸುವ ಇತರೆ ಠೇವಣಿ ಯೋಜನೆಗಳು. ಬ್ಯಾಂಕಿನ ಉಪನಿಯಮದ ಸಂಖ್ಯೆ 8ರ ಪ್ರಕಾರ ಬ್ಯಾಂಕು ಸಾಲಗಳನ್ನು ಮತ್ತು ಠೇವಣಿಗಳನ್ನು ನಿಗದಿಯಾದ ಅವಧಿಗೆ ಸ್ವೀಕರಿಸಬಹುದು.
2	ಬ್ಯಾಂಕವು ಸಂಗ್ರಹಣೆ ಮಾಡಿರುವ ವಿವಿದ ಠೇವಣಿಗಳ ವಿವರಗಳು [ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲಗು ಹೆಚ್ಚು/ಕಡಿಮೆ ಶೇ. ಮಾಹಿತಿಯೊಂದಿಗೆ ವಿಮರ್ಷಿಸಿ	

ಠೇವಣಿ ವಿವರಗಳು	ಆರಂಭ ಬಾಕಿ	ಪ್ರ. ಸಾಲಿನ ಜಮಾ	ಪ್ರ. ಸಾಲಿನ ಖರ್ಚು	ವರ್ಷಾಂತ್ಯಕ್ಕೆ ಬಾಕಿ	ಯಾದಿಯ ಮೊತ್ತ	ಅಂತರ
ನಗದು ಪತ್ರ	157.19	11.69	13.33	155.55	155.55	0
ಮುದ್ದತ್ತಿ ಠೇವಣಿ	13389.23	19895.39	16278.27	17006.35	17006.35	0
ಪಿಗ್ಮಿ ಠೇವಣಿ	1301.28	1996.66	1760.80	1537.14	1537.14	0
ಉಳಿತಾಯ ಠೇವಣಿ	5039.53	37598.27	36806.62	5831.18	5831.18	0
ರಿಕರಿಂಗ್ ಠೇವಣಿ	110.43	167.71	129.52	148.62	148.62	0
ಸಿಬ್ಬಂದಿ ಬದ್ರತಾ ಠೇವಣಿ	12.00	0.00	0.00	12.00	12.00	0
ಐ. ಎಲ್. ಎಫ್. ಡಿ	2.87	0.00	0.00	2.87	2.87	0
ಚಾಲ್ತಿ ಠೇವಣಿಗಳು	90.35	2302.63	2240.74	152.24	152.24	0
ಲಾಕರ್ ಭದ್ರತಾ ಠೇವಣಿ	54.70	28.81	23.16	60.35	60.35	0
ಪಿಗ್ಮೆ ಏಜೆಂಟ್ ಭದ್ರತಾ ಠೇವಣಿ	15.25	2.98	0.31	17.92	17.92	0
ಒಟ್ಟು ಮೊತ್ತ	**20172.82**	**62004.14**	**57252.75**	**24924.21**	**24924.21**	**0**

ಒಟ್ಟು ಠೇವುಗಳ ಕಳೆದ 03 ವರ್ಷಗಳ ಅಂಕಿಗಳೊಂದಿಗೆ ತುಲನಾತ್ಮಕ ವಿವರ:

2023–24 ಕ್ಕೆ	2024–25 ಕ್ಕೆ	2025–26 ಕ್ಕೆ
17143.34	20172.82	24924.21

ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಪ್ರಸಕ್ತಸಾಲಿನಲ್ಲಿ ಶೇಕಡವಾರು 23.55 ರಷ್ಟುಠೇವಣಿ ಹೆಚ್ಚಾಗಿರುತ್ತದೆ

ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಷೆ :

3	ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ ?	ಬ್ಯಾಂಕು ಸದಸ್ಯರಿಂದ ಹಾಗೂ ಸದಸ್ಯರಲ್ಲದವರಿಂದ ಹಿಂದಿನಿಂದಲೂ ಠೇವಣಿ ಸ್ವೀಕರಿಸಲಾಗುತ್ತಿದೆ. ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಿರುವುದಕ್ಕೆ ಪ್ರತ್ಯೇಕ ಲೆಕ್ಕಗಳನ್ನು ಬ್ಯಾಂಕಿನಲ್ಲಿ ಗಣಕಯಂತ್ರದಲ್ಲಿ ಒಟ್ಟು ಠೇವಣಿದಾರರು ಹಾಗೂ ಒಟ್ಟು ಠೇವಣಿಯ ಮೊತ್ತದ ಬಗ್ಗೆ ಪ್ರತ್ಯೇಕ ಲೆಕ್ಕಗಳವಾರು ನಿರ್ವಹಿಸಲಾಗಿರುತ್ತದೆ. ಅದರಂತೆ 12711 ಸದಸ್ಯರಲ್ಲದವರಿಂದ ರೂ.147.09 ಕೋಟಿಯಷ್ಟು ಠೇವಣಿ ಸಂಗ್ರಹಣೆಯಾಗಿರುತ್ತದೆ. ಈ ಮಾಹಿತಿಯು ಬ್ಯಾಂಕಿನ ಗಣಕಯಂತ್ರ/ಸಿಸ್ಟಮ್‌ನಿಂದ ಸ್ವಯಂಚಾಲಿತವಾಗಿ ಸೃಜಿಸಲ್ಪಟ್ಟ ವರದಿಯ ಆಧಾರದ ಮೇಲೆ ಪಡೆಯಲಾಗಿದೆ.
4	ಠೇವಣಿ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ	ಆಡಳಿತ ಮಂಡಳಿಯು ಕಾಲಕಾಲಕ್ಕೆ ನಿಗದಿಪಡಿಸುವ ಬಡ್ಡಿಯ ದರವನ್ನು ಬ್ಯಾಂಕಿನ ವತಿಯಿಂದ ಕಾಲಕಾಲಕ್ಕೆ ನೀಡಲಾಗುತ್ತಿದ್ದು ವರದಿ ಸಾಲಿನ ಅಂತ್ಯಕ್ಕೆ ಪಾವತಿಸಿದ ಬಡ್ಡಿಯು ರೂ.1409.40 ಲಕ್ಷ. ಬ್ಯಾಂಕು 31.03.2026ಕ್ಕೆ ರೂ.24924.21 ಲಕ್ಷ ಒಟ್ಟು ಠೇವಣಿಗಳನ್ನು ಹೊಂದಿದ್ದು ಈ ಪೈಕಿ ಕಡಿಮೆ ವೆಚ್ಚದ ಠೇವಣಿಗಳು 7550.48 ಲಕ್ಷ ಇದ್ದು ಇದು ಒಟ್ಟು ಠೇವಣಿಗಳ ಮೇಲೆ 30.29%ರಷ್ಟು ಇರುತ್ತದೆ. ವರ್ಷಾಂತ್ಯಕ್ಕೆ ಒಟ್ಟು ರೂ.24924.21 ಲಕ್ಷ ಠೇವಣಿಗಳನ್ನು ಹೊಂದಿದ್ದು ಈ ಪೈಕಿ ರೂ.17738.82 ಲಕ್ಷದಷ್ಟು ಸಾಲ ನೀಡಲಾಗಿರುತ್ತದೆ. ಅಂದರೆ ಒಟ್ಟು ಠೇವಣಿಗಳ ಮೇಲೆ 71.17%ರಷ್ಟು ಸಾಲ ನೀಡಿದಂತಾಗುತ್ತದೆ.

5	ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ?	ಆಯಾ ಠೇವಣಿಗಳಿಗೆ ಸಂಬಂಧಪಟ್ಟಂತೆ ಠೇವಣಿದಾರರಿಗೆ ಪಾಸುಪುಸ್ತಕ/ ಸರ್ಟಿಫಿಕೇಟ್ ನೀಡಲಾಗಿರುತ್ತದೆ.
6	ಎಲ್ಲಾ ಠೇವಣಿಗಳ ಮೇಲೆ ಬಡ್ಡಿಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ	2025–2026ನೇ ಸಾಲಿನಲ್ಲಿ ಲಾಭ ನಷ್ಟ ಖಾತೆಗೆ ಹೊಂದಾಣಿಕೆ ಮಾಡಿ ಬ್ಯಾಂಕು ಹೊಂದಿರುವ ವಿವಿಧ ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿಗಾಗಿ ಅವಕಾಶ ಕಲ್ಪಿಸಿದ್ದು ಪಾವತಿಸಬೇಕಾದ ಬಡ್ಡಿಯ ಖಾತೆಯಲ್ಲಿ ರೂ.679.58 ಲಕ್ಷ ಇರುತ್ತದೆ. ಇದಕ್ಕೆ ಕುಳುವಾರು ತಯಾರಿಸಿದ್ದು ಪರಿಶೀಲಿಸಿದಾಗ ಆಸ್ತಿ ಜವಾಬ್ದಾರಿ ತ:ಖ್ತೆಯಲ್ಲಿರುವ ಮೊತ್ತಕ್ಕೆ ತಾಳೆ ಇರುತ್ತದೆ.
7	ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ?	ಹೌದು
8	ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್.	7 ಜನ, ಕಮಿಷನ್ 2.5%
9	ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯತೆರಿಗೆ ನಿಯಮಗಳನ್ನು ಪಾಲಿಸಿರುವರೇ?	ಠೇವಣಾತಿ ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯತೆರಿಗೆ ನಿಯಮಗಳನ್ನು ಪಾಲಿಸಲಾಗಿದೆ. ಬ್ಯಾಂಕಿನ ಆದಾ0ಯ ತೆರಿಗೆ ನಿ0ಯಮದಂತೆ ಬಡ್ಡಿ ಪಾವತಿಸುವಾಗ ತೆರಿಗೆ ಕಟಾಯಿಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿರೂ. 26,14,650/– ಗಳ ಟಿಡಿಎಸ್ ಕಟಾಯಿಸಿ ಆದಾ0ಯತೆರಿಗೆ ಇಲಾಖೆಗೆ ಪಾವತಿಸಿರುತ್ತಾರೆ. ಟಿ.ಡಿ.ಎಸ್ ಅನ್ವ0ಯವಾಗದ ಠೇವಣಿದಾರರಿಂದ ಫಾರಂ 15ಜಿ/15ಹೆಚ್ ಪಡೆದು ಆದಾ0ಯತೆರಿಗೆ ಇಲಾಖೆಗೆ ಸಲ್ಲಿಸಿರುತ್ತಾರೆ.
10	ಅನಿಶ್ಚಿತ (Contingent) ಜವಾಬ್ದಾರಿಗಳು:	1. ಕಳೆದ 10 ವರ್ಷಗಳಿಂದ ಸತತವಾಗಿ ವ್ಯವಹರಿಸದ ಠೇವಣಿ ಹಾಗೂ ಇತರೆ ಖಾತೆಗಳ ಮೊಬಲಗನ್ನು ಆರ್.ಬಿ.ಐನ ಠೇವಣಿದಾರರ ಶಿಕ್ಷಣ ಮತ್ತುಅರವು ನಿಧಿಗೆ (ಡಿ.ಇ.ಎ.ಎಫ್) ವರ್ಗಾಯಿಸಬೇಕಾಗಿದ್ದು ಬ್ಯಾಂಕಿನಲ್ಲಿ ದಿನಾಂಕ 31.03.2026ಕ್ಕೆ 0ಯಾವುದೇ ಮೊತ್ತವಿರುವುದಿಲ್ಲ. ಇದಕ್ಕೆ ಸಂಬಂದಪಟ್ಟಂತೆ ಆಂತರೀಕ ಲೆಕ್ಕಪರಿಶೋಧಕರು ಧೃಢೀಕರಿಸಿರುತ್ತಾರೆ. 2. ಆರ್.ಬಿ.ಐ ಸೂಚನೆ ಮತ್ತುತನಿಖಾ ವರದಿ0ಯಲ್ಲಿನ ಸೂಚನೆಗಳನ್ವ0ಯ ಬ್ಯಾಂಕು ಕೇವಲ 10 ವರ್ಷ ಮೀರಿ ಸ್ಥಗಿತಗೊಂಡ ಉಳಿತಾ0ಯ ಹಾಗೂ ಚಾಲ್ತಿ ಖಾತೆ ಮೊಬಲುಗಳನ್ನು ಅಲ್ಲದೇ ಎಲ್ಲಾ ತರಹದ ನಿಶ್ಚಿತ ಠೇವಣಿ ಮೊಬಲಗನ್ನು ಬ್ಯಾಂಕು ಶಿಲ್ಕುಗಳ ಸಮನ್ವ0ಯ ಪಟ್ಟಿ0ಯಲ್ಲಿ ಉದ್ಬವಿಸಬಹುದಾದ ಜವಾಬ್ದಾರಿ ಬಾಬ್ತುಗಳು ಚುಕ್ತವಾಗದೆ 10 ವರ್ಷ ಮೀರಿ ಮುಂದುವರೆದಿದ್ದಲ್ಲಿ ಸದರಿ ಮೊಬಲಗನ್ನು ಡಿ.ಇ.ಎ.ಎಫ್ ಖಾತೆಗೆ ವರ್ಗಾಯಿಸಬೇಕಾಗಿ ಎಂಬುದನ್ನು ಬ್ಯಾಂಕು ಗಮನಿಸಲಾಗಿದೆ.
11	ದ್ರವ್ಯಾಸ್ತಿಗಳ (Fluid resources) ಬಗ್ಗೆ ವಿಮರ್ಶೆ SLR/CRR ಗಳ ನಿರ್ವಹಣೆ– ಶಾಖೆಗಳ ವಾರದ ಆಖೈರದ ಸ್ಥಿತಿಯ ಬಗ್ಗೆ (Demand & Time liabilities) ಅನುಪಾಲನಾ ವರದಿಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದ ದಾಖಲೆಗಳನ್ನು ನಿರ್ವಹಿಸಲಾಗಿದೆಯೇ?	ಬ್ಯಾಂಕಿಂಗ್ ನಿಯಂತ್ರಣಕಾಯ್ದೆ 1950 ಕಲಂ 18 & 24(ಎ) ರ ಪ್ರಕಾರ ಶಾಸನಬದ್ದ ನಿರ್ವಹಣೆಗೆ ಸಂಬಂದಿಸಿದಂತೆ ಅಧಿಕೃತ ನಮೂನೆಯಲ್ಲಿ ಕಡತವನ್ನು ನಿರ್ವಹಿಸಿದ್ದು ದ್ರವ್ಯಾಸ್ತಿಗಳ ಪಾಲನೆ ಮಾಡಲಾಗಿದೆ. ಬ್ಯಾಂಕಿನಲ್ಲಿ ಬ್ಯಾಂಕಿಂಗ್ ನಿಯಂತ್ರಣ ಕಾ0ದ್ದೆ ಅನ್ವಯ ಸಿ.ಆರ್.ಆರ್. ಮತ್ತು ಎಸ್.ಎಲ್.ಆರ್ ಬಗ್ಗೆ ರಿಜಸ್ಟರ್‌ನಲ್ಲಿ ಮಾಹಿತಿ ನಿರ್ವಹಿಸಿರುತ್ತಾರೆ. ಸದರಿ ರಿಜಸ್ಟರನ್ನು ಪರಿಶೀಲಿಸಲಾಗಿ ಅನೇಕ ವೇಳೆ ನಿಗದಿತ ಮಿತಿಗಿಂತ ಹೆಚ್ಚಾಗಿ ಪಾಲನೆ ಮಾಡಿರುವುದನ್ನು ಗಮನಿಸಿದೆ. ವರದಿ ಸಾಲಿನಲ್ಲಿ ಸಿ.ಆರ್.ಆರ್. ಮತ್ತು ಎಸ್.ಎಲ್.ಆರ್ ನಿರ್ವಹಣೆಯಲ್ಲಿ ಯಾವುದೇ ಕೊರತೆಯಾಗಿಲ್ಲದಿರುವುದನ್ನು ಗಮನಿಸಲಾಗಿದೆ. ಬ್ಯಾಂಕು SLR & CRR ಸ್ಥಿತಿಯ ಬಗ್ಗೆ ಪಿರಿಯೂಡಿಕಲ್ ರಿಟರ್ನ್ಸ್‌ಗಳನ್ನು ಆರ್.ಬಿ.ಐ ಗೆ ಸಲ್ಲಿಸುತ್ತಿದೆ. ಪ್ರಸಕ್ತ 2025–2026ನೇ ಸಾಲಿನಲ್ಲಿ ನಗದು ಮೀಸಲು ಮತ್ತು ದ್ರವ್ಯಾಸ್ತಿ0ಯನ್ನು (ಎಸ್.ಎಲ್.ಆರ್) ಈ ಕೆಳಕಂಡಂತೆ ಆರ್.ಬಿ.ಐ ಸುತ್ತೋಲೆ0ಯಂತೆ ನಿರ್ವಹಿಸಬೇಕಾಗಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ. ಶೇ.18ರಂತೆ SLR ನಿರ್ವಹಿಸಬೇಕಾಗಿದ್ದು ಬ್ಯಾಂಕಿನವರು ಪರಿಮಿತಿ ಉಲ್ಲಂಘನೆ0ಯಾಗದಂತೆ ನಿರ್ವಹಿಸಿರುತ್ತಾರೆ, ಶೇ.3ರಂತೆ CRR ನಿರ್ವಹಿಸಬೇಕಾಗಿದ್ದು ಬ್ಯಾಂಕಿನವರು ಪರಿಮಿತಿ ಉಲ್ಲಂಘನೆ0ಯಾಗದಂತೆ ನಿರ್ವಹಿಸಿರುತ್ತಾರೆ
12	ವರದಿ ಸಾಲಿನಲ್ಲಿ ಇವುಗಳ ಪಾಲನೆಯಲ್ಲಿ ಆಗಿರುವ ವಿಫಲತೆಯ ಬಗ್ಗೆ ಹಾಗೂ ಈ ಕುರಿತು ರಿಝರ್ವ ಬ್ಯಾಂಕಿಗೆ ದಂಡದ ಮೊತ್ತ ಪಾವತಿಸಿದಲ್ಲಿ ಅದಕ್ಕೆ ಸೂಕ್ತ	ಬ್ಯಾಂಕಿಂಗ್ ನಿಯಂತ್ರಣ ಕಾ0ದ್ದೆಯಂತೆ ನಗದು ಮೀಸಲು ಹಣವನ್ನು (CRR) ಶೇ.3 ಪ್ರಮಾಣಕ್ಕೆ ಕಡಿಮೆ ಇಲ್ಲದಂತೆ ಹಾಗೂ ಕಲಂ. 24 ರ ಪ್ರಕಾರ ಬ್ಯಾಂಕಿನಲ್ಲಿ ತಗಾದೆ ಮತ್ತು ಅವದಿ ಹೊಣೆಗಾರಿಕೆಗಳ (ಡಿ.ಟಿ.ಎಲ್) 18 ರ ಪ್ರಮಾಣಕ್ಕೆ ಕಡೆಮೆ ಇಲ್ಲದಂತೆ ಮತ್ತುಗರಿಷ್ಟ ಪ್ರಮಾಣದ 40ಕ್ಕೆ ಮೀರದಂತೆ ದ್ರವ್ಯಾಸ್ತಿ ನಿರ್ವಹಿಸಲಾಗಿದೆ.

	ಜವಾಬ್ದಾರಿ ನಿಗದಿ ಪಡಿಸಿ ಆರ್ಥಿಕತ:ಖ್ತೆಯಲ್ಲಿ ತೋರಿಸಲಾಗಿದೆಯೇ?	
13	**<u>ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು</u>**:– [ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು]	ಠೇವಣಾತಿಗಳ ಶೀರೋನಾಮದಡಿಯಲ್ಲಿ ಇರುವ ಸಿಬ್ಬಂದಿ ಭದ್ರತಾಠೇವಣಿ ಬಾಬ್ತು 12.00 ಲಕ್ಷ ರೂಗಳನ್ನು ಪ್ರತ್ಯೇಕ ಶೀರೋನಾಮದಡಿಯಲ್ಲಿ ಆರ್ಥಿಕ ತ:ಖ್ತೆಗಳಲ್ಲಿ ಪ್ರತಿಬಿಂಬಿಸತಕ್ಕದ್ದು. ಎಲ್ಲಾ ಠೇವಣಿಗಳ ಬಡ್ಡಿ ಲೆಕ್ಕಾಚಾರ ಗಣಕಯಂತ್ರದ ಮೂಲಕ ಆಗುತ್ತಿದ್ದು ಈ ಬಗ್ಗೆ ಬಡ್ಡಿ ಲೆಕ್ಕಾಚಾರ ಕರಾರುವಕ್ಕಾಗಿ ಇದೆಯೇ ಎಂಬುದನ್ನು ಪರೀಕ್ಷಾರ್ಥವಾಗಿ ಪರಿಶೀಲಿಸಿದ್ದು ಇದು ಸರಿ ಇರುವುದು ಕಂಡು ಬಂದಿರುತ್ತದೆ. ರೂ.10ಲಕ್ಷಕ್ಕೆ ಮೇಲ್ಪಟ್ಟು ನಗದು ವ್ಯವಹಾರಗಳ ಬಗ್ಗೆ ವಿವರಗಳನ್ನು ಕಾಲಕಾಲಕ್ಕೆ ಆದಾಯತೆರಿಗೆ ಇಲಾಖೆಯ ಇಂಟಲಿಜೆನ್ಸ್ ವಿಭಾಗಕ್ಕೆ ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಠೇವಣಿ ವಿಮಾ ಕಾರ್ಪೂರೆಷನ್ (ಡಿ.ಐ.ಸಿ.ಜಿ.ಸಿ)ಬ್ಯಾಂಕಿಗೆ ಪ್ರೀಮಿಯಂ ಪಾವತಿಸುತ್ತಿದ್ದು ಠೇವಣಿಗಳ ಮೇಲೆ ರೂ.5 ಲಕ್ಷಗಳವೆರೆಗೂ ವಿಮಾ ರಕ್ಷಣೆ ಪಡೆಯಲಾಗಿದೆ. ವರದಿ ಸಾಲಿನಲ್ಲಿ ಠೇವಣಿ ವಿಮಾ ಪ್ರೀಮಿಯಂ ರೂ.26,26,642/–ಗಳನ್ನು ಪಾವತಿಸಲಾಗಿದೆ.

18) ಸಹಾಯಧನಗಳು :

ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ :	
ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ. [ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು]	ಅನ್ವಯಿಸುವುದಿಲ್ಲ (ಸದರಿ ಬ್ಯಾಂಕು ಸರ್ಕಾರದಿಂದ ಯಾವುದೇ ಸಹಾಯಧನ ಪಡೆದಿರುವುದಿಲ್ಲ)
ಬ್ಯಾಂಕವು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನುಗುಣವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ)	ಅನ್ವಯಿಸುವುದಿಲ್ಲ

19) ಇತರೆ ಜವಾಬ್ದಾರಿಗಳು :{ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು]

ಕ್ರ.ಸ	**ವಿವರ**	**ಮೊತ್ತರೂ. ಲಕ್ಷಗಳಲ್ಲಿ**
1	ಡಿವಿಡೆಂಡ್	26.56
2	ಪೇಆರ್ಡರ್	243.16
3	ಲೆಕ್ಕಪರಿಶೋಧನಾ ಶುಲ್ಕ	2.84
4	ಷೇರು ಫೀ ಮತ್ತು ಪ್ರವೇಶ ಶುಲ್ಕ ಅಮಾನತ್ತು	0.09
5	ಆದಾಯತೆರಿಗೆ ಪಾವತಿಸಬೇಕಾದದ್ದು	85.00
6	ಸಾಲಗಳ ಮೇಲೆ ಬಡ್ಡಿ ನೀಡಬೇಕಾದದ್ದು (ಕಾಂಟ್ರಾ)	250.73
7	ನಿಗದಿತಠೇವಣಿ ಬಡ್ಡಿ ಪಾವತಿಸಬೇಕಾದದ್ದು	656.33
8	ಷೇರು ಅಮಾನತ್ತು	18.93
9	ಸಹಸದಸ್ಯತ್ವಷೇರು ಫೀ ಮತ್ತು ಪ್ರವೇಶ ಶುಲ್ಕ ಅಮಾನತ್ತು	0.01
10	ಪಿಗ್ಮಿಠೇವಣಿ ಬಡ್ಡಿ ಪಾವತಿಸಬೇಕಾದದ್ದು	23.25
11	ಜಿ.ಎಸ್.ಟಿ ಪಾವತಿಸಬೇಕಾದದ್ದು	0.06

A. **<u>ಡಿವಿಡೆಂಡ್</u> :** 31.03.2026ಕ್ಕೆ ಬ್ಯಾಂಕು ತನ್ನ ಸದಸ್ಯರಿಗೆ ರೂ.26.56 ಲಕ್ಷಗಳ ಡಿವಿಡೆಂಡ್ ಪಾವತಿಸಲು ಬಾಕಿ ಇರುತ್ತದೆ. ಬ್ಯಾಂಕ್ ಉಪನಿಯಮ 109ರಂತೆ ಡಿವಿಡೆಂಡನ್ನು ಘೋಷಿಸಿದ ದಿನಾಂಕದಿಂದ 3 ವರ್ಷಗಳ ಒಳಗಾಗಿ ಯಾವುದೇ ಸದಸ್ಯನು ಡಿವಿಡೆಂಡ್ ಪಡೆಯದೆ ಇದ್ದರೆ ಅಂತಹ ಸದಸ್ಯನಿಗೆ 3 ತಿಂಗಳ ನೋಟೀಸ್ ಅವದಿ ನೀಡಿ ಆಗಲೂ ಪಡೆಯದೆ ಇದ್ದಲ್ಲಿ ಅಂತಹ ಮೊಬಲಗನ್ನು ಆಪದ್ದನಕ್ಕೆ ವರ್ಗಾಯಿಸಬೇಕಾಗಿರುತ್ತದೆ. ವರ್ಷಾಂತ್ಯಕ್ಕೆ ಷೇರು ಡಿವಿಡೆಂಡ್‌ಗೆ ಕುಳುವಾರು ತಯಾರಿಸಿದ್ದು ತಾಳೆ ಇರುತ್ತದೆ. ಬ್ಯಾಂಕಿನ ಪ್ರತಿ0ಯೋಬ್ಬ ಸದಸ್ಯರಿಂದಲೂ ಉಳಿತಾ0ಯ ಖಾತೆ0ಯನ್ನು ತೆರೆಸಿ ಸದರಿ ಉಳಿತಾ0ಯ ಖಾತೆಗಳಿಗೆ ವರ್ಗಾಯಿಸುವುದು ಸೂಕ್ತವಾಗಿರುತ್ತದೆ.

B. **<u>ಪೇ ಆರ್ಡರ್</u>** : ಬ್ಯಾಂಕು ದಿ.31.03.26ರ ಅಂತ್ಯಕ್ಕೆ ಪೇ ಆರ್ಡರ್ ವ್ಯವಹಾರಕ್ಕೆ ಸಂಬಂದಪಟ್ಟಂತೆ ರೂ.243.16ಲಕ್ಷಗಳು ಸಂಬಂದಪಟ್ಟವರಿಗೆ ಪಾವತಿಸಲು ಜವಾಬ್ದಾರಿ ಕಡೆ ಮುಂದುವರಿಸಿರುತ್ತದೆ. ಈ ಬಾಬ್ತಿಗೆ ಕುಳುವಾರು ತಯಾರಿಸಿರುತ್ತಾರೆ. 10 ವರ್ಷಕ್ಕೆ ಮೀರಿದ ಬಾಕಿಗಳನ್ನು ಭಾರತೀಯ ರಿಸರ್ವ್ ಬ್ಯಾ0ಕಿನ ಡಿ.ಇ.ಎ.ಎಫ್ ಖಾತೆಗೆ ವರ್ಗಾಯಿಸಲಾಗುತ್ತಿದೆ.

C. **<u>ಲೆಕ್ಕಪರಿಶೋಧನಾ ಶುಲ್ಕ ಕಾದಿರಿಸಿದ್ದು</u>** ; 2025–2026ನೇ ಸಾಲಿನ ಲೆಕ್ಕಪರಿಶೋಧನಾ ಶುಲ್ಕ ಲೆಕ್ಕಪರಿಶೋಧಕರಿಗೆ ಪಾವತಿಸಲು ರೂ.2.84ಲಕ್ಷಗಳನ್ನು ಕಾದಿರಿಸಿಕೊಂಡಿರುತ್ತದೆ. ಈ ಬಾಬ್ತನ್ನು ಲೆಕ್ಕಪರಿಶೋಧನಾ ವರದಿ ಬಿಡುಗಡೆಯಾದ ನಂತರ ಸಂಬಂದಪಟ್ಟವರಿಗೆ ಪಾವತಿಸಿ ಲೆಕ್ಕ ಚುಕ್ತ ಮಾಡಿಕೊಳ್ಳತಕ್ಕದ್ದು.

D. **<u>ಠೇವಣಿಗಳ ಮೇಲೆ ಬಡ್ಡಿ ಕಾದಿರಿಸಿದ್ದು</u>** : ಬ್ಯಾಂಕು ವರ್ಷಾಂತ್ಯಕ್ಕೆ ಈ ಕೆಳಗಿನ ವಿವರಗಳಂತೆ ತಾನು ಸಂಗ್ರಹಿಸಿರುವ ಠೇವಣಿ ಸಂಬಂದ 31.03.2026ರ ಅಂತ್ಯಕ್ಕೆ ಪಾವತಿಸಬೇಕಾಗಿರುವ ಬಡ್ಡಿಯ ವಿವರ ಈ ಕೆಳಕಂಡತಿರುತ್ತದೆ.

ಕ್ರ.ಸಂಖ್ಯೆ	ವಿವರ	ಮೊಬಲಗು
1	ಪಿಗ್ಮಿ ಠೇವಣಿ ಮೇಲಿನ ಬಡ್ಡಿ	23.25ಲಕ್ಷ
2	ನಿಗದಿತ ಠೇವಣಿಗಳ ಮೇಲಿನ ಬಡ್ಡಿ	656.33ಲಕ್ಷ
	ಒಟ್ಟು	679.58ಲಕ್ಷ

ಮೇಲ್ಕಂಡ ಬಡ್ಡಿಗಳಿಗೆ ಸಂಬಂಧಿಸಿದಂತೆ ವಿವರಗಳು ಬ್ಯಾಂಕಿನಲ್ಲಿ ಹಾಜರಿರುತ್ತವೆ. ದಿ.31.03.2026ಕ್ಕೆ ಠೇವಣಿ ಮತ್ತು ಸಾಲದ ಅನುಪಾತ 8.08% ರಷ್ಟಿರುತ್ತದೆ. ವರದಿ ಸಾಲಿನಲ್ಲಿ ಠೇವಣಿಗಳ ಮೇಲಿನ ಬಡ್ಡಿಯ ವೆಚ್ಚ ಸರಾಸರಿ 5.65 ರಷ್ಟಿರುತ್ತದೆ. ಆರ್.ಬಿ.ಐ ಠೇವಣಿ ಮೇಲಿನ ಬಡ್ಡಿಯನ್ನು ನಿರ್ದರಿಸಬಹುದಾದ ಅಧಿಕಾರವನ್ನು ಆಯಾ ಬ್ಯಾಂಕುಗಳ ಆಡಳಿತ ಮಂಡಳಿಗೆ ನೀಡಿರುತ್ತದೆ.

E. **<u>ಆದಾಯತೆರಿಗೆ ಬಗ್ಗೆ ಕಾದರಿಸಿದ್ದು:</u>** ಬ್ಯಾಂಕು 31.03.2026ರ ಅಂತ್ಯಕ್ಕೆ ಆದಾಯತೆರಿಗೆ ಪಾವತಿಸಲು 85 ಲಕ್ಷ ರೂಗಳನ್ನು ಕಾದಿರಿಸಿಕೊಂಡಿರುತ್ತದೆ. ಕಾದಿರಿಸಿಕೊಂಡಿರುವ ಬಾಬ್ತು ಮುಂಗಡವಾಗಿ ಆದಾಯತೆರಿಗೆ ಇಲಾಖೆಗೆ ಪಾವತಿಸಿರುತ್ತದೆ.

F. **<u>ಸಹಸದಸ್ಯರ ಷೇರು ಅಮಾನತ್ತು:</u>**ವರದಿ ಸಾಲಿನಲ್ಲಿ ಬ್ಯಾಂಕು ಸದಸ್ಯತ್ವ ಸಂಖ್ಯೆ 6,413 ರವರು ದೈವಾಧಿನರಾದ ಕಾರಣ ಉಪನಿಯಮ 21ರ ಪ್ರಕಾರ ಸದಸ್ಯತ್ವ ರದ್ದಾಗಿರುವುದರಿಂದ ಅವರ ಖಾತೆಯಲ್ಲಿದ್ದ ರೂ.17.53ಲಕ್ಷಗಳನ್ನು ಹಾಗೂ ಸದಸ್ಯತ್ವ ಕೋರಿ ಸಲ್ಲಿಸಿರುವ 16 ಅರ್ಜಿಗಳ ಬಾಬ್ತು 1.40 ಲಕ್ಷಗಳನ್ನು ಷೇರು ಅಮಾನತ್ತು ಖಾತೆಗೆ ವರ್ಗಾಯಿಸಿರುವುದು ಕಂಡುಬರುತ್ತದೆ.

G. **ಷೇರು ಫೀ ಮತ್ತು ಪ್ರವೇಶ ಶುಲ್ಕ ಅಮಾನತ್ತು:**ಬ್ಯಾಂಕಿನಲ್ಲಿ ಷೇರಿಗಾಗಿ ಅರ್ಜಿ ಸಲ್ಲಿಸಿರುವ 16 ಅರ್ಜಿಗಳ ಷೇರು ಫೀ ಮತ್ತು ಪ್ರವೇಶ ಶುಲ್ಕವನ್ನು ಅಮಾನತ್ತು ಖಾತೆಗೆ ವರ್ಗಾಯಿಸಿರುವುದು ಕಂಡುಬರುತ್ತದೆ.

20) ಲಾಭ ವಿಂಗಡಣೆ

ಹಿಂದಿನ ಸಾಲಿನ ಕ್ರೋಢೀಕೃತ ಲಾಭ	ಹಿಂದಿನ ಸಾಲಿನ ಕ್ರೂಢೀಕೃತ ಲಾಭ ರೂ. 392.71 ಲಕ್ಷಗಳು
ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ ?ಅದು ಕ.ಸ.ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪ ನಿಯಮ 107 ರನ್ವಯ ಮಾಡಿಕೊಳ್ಳಲಾಗಿದೆಯೇ ?	1. ಲಾಭ ವಿಂಗಡಣೆಗೆ ಮಹಾಸಭೆಯ ಒಪ್ಪಿಗೆ ಪಡೆಯಲಾಗಿದೆ. ವರದಿ ಸಾಲಿನಲ್ಲಿ ದಿನಾಂಕ 31.08.2025 ರನ್ವಯ ಸರ್ವಸದಸ್ಯರ ಸಭೆಯಲ್ಲಿ ಲಾಭ ವಿಲೆವಾರಿ ಮಾಡಿರುತ್ತಾರೆ. ಸದರಿ ಲಾಭ ವಿಲೇವಾರಿ ಮಾಡಿಕೊಳ್ಳುವಾಗ ಶಾಸನಬದ್ದ ನಿದಿಗಳನ್ನು ಕ್ರಮಬದ್ದವಾಗಿ ತೆಗೆದಿರಿಸಿಕೊಂಡಿರುತ್ತದೆ.
ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ?	2024–2025ನೇ ಸಾಲಿನಲ್ಲಿ ಶೇ.16ರಷ್ಟು ಡಿವಿಡೆಂಡ್ ಘೋಷಿಸಲ್ಪಟ್ಟಿತ್ತು.
ವಿತರಣೆಯಾಗದ ಲಾಭಾಂಶದ ಮೊತ್ತ	31.03.2026ಕ್ಕೆ ಬ್ಯಾಂಕು ತನ್ನ ಸದಸ್ಯರಿಗೆ ರೂ.26.56 ಲಕ್ಷಗಳ ಡಿವಿಡೆಂಡ್ ಪಾವತಿಸಲು ಬಾಕಿ ಇರುತ್ತದೆ. ಬ್ಯಾಂಕ್ ಉಪನಿಯಮ 109ರಂತೆ ಡಿವಿಡೆಂಡನ್ನು ಘೋಷಿಸಿದ ದಿನಾಂಕದಿಂದ 3 ವರ್ಷಗಳ ಒಳಗಾಗಿ ಯಾವುದೇ ಸದಸ್ಯನು ಡಿವಿಡೆಂಡ್ ಪಡೆಯದೆ ಇದ್ದರೆ ಅಂತಹ ಸದಸ್ಯನಿಗೆ 3 ತಿಂಗಳ ನೋಟೀಸ್ ಅವದಿ ನೀಡಿ ಆಗಲೂ ಪಡೆಯದೆ ಇದ್ದಲ್ಲಿ ಅಂತಹ ಮೊಬಲಗನ್ನು ಆಪದ್ದನಕ್ಕೆ ವರ್ಗಾಯಿಸಬೇಕಾಗಿರುತ್ತದೆ. ವರ್ಷಾಂತ್ಯಕ್ಕೆ ಷೇರು ಡಿವಿಡೆಂಡ್‌ಗೆ ಕುಳುವಾರು ತಯಾರಿಸಿದ್ದು ತಾಳೆ ಇರುತ್ತದೆ. ಬ್ಯಾಂಕಿನ ಪ್ರತಿ0ಯೋಬ್ಬ ಸದಸ್ಯರಿಂದಲೂ ಉಳಿತಾ0ಯ ಖಾತೆ0ಯನ್ನು ತೆರೆಸಿ ಸದರಿ ಉಳಿತಾ0ಯ ಖಾತೆಗಳಿಗೆ ವರ್ಗಾಯಿಸುವುದು ಸೂಕ್ತವಾಗಿರುತ್ತದೆ.
ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿರಿಸಲು ಸೂಚಿಸುವುದ.	3 ವರ್ಷಗಳ ಕ್ರೂಡಿಕೃತ ಲಾಭಾಂಶ ಯಾವುದೇ ಬಾಕಿ ಇರುವುದಿಲ್ಲ.

21) ನಗದು ಶಿಲ್ಕು ಪರಿಶೀಲನೆ:

ಸಾಲಾಖ್ಯೆರಿಗೆ ಸಂಘದಲ್ಲಿನ ನಗದು ಶಿಲ್ಕು	ದಿ.31.03.2026ಕ್ಕೆ ಕೇಂದ್ರ ಕಛೇರಿ ಹಾಗೂ 2 ಶಾಖೆಗಳಲ್ಲಿ ಒಟ್ಟುರೂ 18433079/– ನಗದು ಶಿಲ್ಕು ಮತ್ತು ಎಟಿಎಂ ನಲ್ಲಿ ನಗದು ರೂ.444100/–ಇದ್ದು ಅದರ ವಿವರಕೆಳಕಂಡಿರುತ್ತದೆ. 1. ಕೆಂದ್ರ ಕಛೇರಿ ರೂ. 9628426.00 2. ಸಿಟಿಸಿವಿಲ್ ಕೋರ್ಟ್ ಶಾಖೆ ರೂ 7290960.00 3. ಮ್ಯಾಜಿಸ್ಟ್ರೇಟ್ ಕೋರ್ಟ್ ಶಾಖೆ ರೂ. 783493.00 4. ಎಟಿಎಂ ನಗದು ರೂ. 730200.00 ಒಟ್ಟುರೂ. 18433079.00 ವರ್ಷಾಂತ್ಯಕ್ಕೆ ಕೇಂದ್ರ ಕಛೇರಿ ಹಾಗೂ ಶಾಖೆಗಳಿದ್ದ ನಗದು ಶಿಲ್ಕು ಝಡ್ತಿ0ಯಾಗಿರುವುದಕ್ಕೆ 0ಯಾವುದೇ ದಾಖಲಾತಿ ಇರುವುದಿಲ್ಲ.
ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು	ದಿ.31.03.2026ರ ಅಂತ್ಯಕ್ಕೆ ಬ್ಯಾಂಕಿನಲ್ಲಿ ರೂ 18433079.00 ಗಳ ನಗದು ಶಿಲ್ಕು ಇರುತ್ತದೆ ಲೆಕ್ಕಪರಿಶೋಧನಾ ವೇಳೆಯಲ್ಲಿ ಬ್ಯಾಂಕಿನ ಕೇಂದ್ರಕಛೇರಿ ಅದರ 2 ಶಾಖೆಗಳ ನಗದು ಪರಿಶೀಲನೆ ಈ ಕೆಳಕಂಡಂತೆ ಇರುತ್ತದೆ.

ಪರಿಶೀಲನೆಯಕಛೇರಿ	ದಿನಾಂಕ	ಹಾಜರ ಪಡಿಸಿದ ಸಿಬ್ಬಂದಿ ಹೆಸರು/ಹುದ್ದೆ
ಮುಖ್ಯಕಚೇರಿ	**31.03.2026**	ರೂ.96,28,426.00 ನಾಗರಾಜು.ಆರ್ ನಗದುಗುಮಾಸ್ತರು
ಸಿಟಿಸಿವಿಲ್ ಕೋರ್ಟ್ ಶಾಖೆ	**31.03.2026**	ರೂ.72,90,960.00 ಬಾಮಿನಿ.ಎಂ.ಆರ್ ನಗದುಗುಮಾಸ್ತರು
ಮ್ಯಾಜಿಸ್ಟ್ರೇಟ್‌ಕೋರ್ಟ್ ಶಾಖೆ	**31.03.2026**	ರೂ. 7,83,493.00 ದೀಪಾ.ಎಸ್ ನಗದುಗುಮಾಸ್ತರು
ಪರಿಶೀಲಿಸಿದ ನಗದು ಪುಸ್ತಕನೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ?		ನಾವು ಮಾರ್ಚ್ 31 2026 ರಂದು ಪ್ರಧಾನ ಕಚೇರಿ, ಸಿವಿಲ್ ಶಾಖೆ ಮತ್ತು ಮ್ಯಾಜಿಸ್ಟ್ರೇಟ್ ಶಾಖೆಗೆ ಹೋಗಿ ನಗದು ಪರಿಶೀಲಿಸಿದ್ದೇವೆ. ನಗದು ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತದೆ
ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಅದನ್ನು ಯಾವ ದಿನಾಂಕದ ವರೆಗೆ ಬರೆಯಲಾಗಿದೆ ಎಂಬುದರ ಬಗ್ಗೆ ವಿವರಣೆ ನೀಡುವುದು. ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಿ ಹಾಜರಪಡಿಸಿದ ಕೈ ಶಿಲ್ಕಿದ ಮೊತ್ತ ನಗದು ಪುಸ್ತಕದಲ್ಲಿ ನಮೂದಿಸುವುದು		ಲೆಕ್ಕಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ತಹಲೆವರೆಗೂ ಬರೆದಿಡಲಾಗಿರುತ್ತದೆ.
ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿ?		ಬ್ಯಾಂಕಿನ ಉಪನಿಯಮ 95ರಂತೆ ಬ್ಯಾಂಕಿನ ನಗದು ಹಣ ಮುಖ್ಯಕಾರ್ಯನಿರ್ವಾಹಕರ ಹಾಗೂ ನಗದು ಗುಮಾಸ್ತರ ಜಂಟಿ ಅಭಿರಕ್ಷೆಯಲ್ಲಿಡತಕ್ಕದ್ದು ಹಾಗೂ ಜಂಟಿ ಭದ್ರತೆಯಲ್ಲಿರುವ ಹಣದ ಮಿತಿಯನ್ನು ಮಂಡಳಿಯು ಕಾಲಕಾಲಕ್ಕೆ ನಿಗದಿಪಡಿಸತಕ್ಕದ್ದು. ಸದರಿ ಉಪನಿಯಮದಂತೆ ಕಾರ್ಯಕಾರಿ ಮಂಡಳಿಯವರು ಬ್ಯಾಂಕಿನ ಶಿಲ್ಕಿನ ಮಿತಿಯನ್ನು ರೂ.2.50ಕೋಟಿ ಗಳಿಗೆ ನಿಗದಿ ಪಡಿಸಿಕೊಂಡಿರುತ್ತಾರೆ.
ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ.		ಸಾಮಾನ್ಯವಾಗಿ ನಗದು ಶಿಲ್ಕಿನ ಮಿತಿಗಿಂತ ಅನಾವಶ್ಯಕವಾಗಿ ನಗದುಶಿಲ್ಕು ಮುಂದುವರಿಸಿಕೊಂಡು ಬಂದಿರುವುದಿಲ್ಲ. ಆದರೆ ಮಿತಿಗಿಂತ ಹಲವಾರು ದಿನಗಳಲ್ಲಿ ಹೆಚ್ಚಿಗೆ ನಗದನ್ನು ಬ್ಯಾಂಕಿನಲ್ಲಿರಿಸಿಕೊಂಡಿರುತ್ತಾರೆ.
ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ.		ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಿರುತ್ತಾರೆ. ನಗದಿಗೆ ರೂ.2.5 ಕೋಟಿ ಮತ್ತು ಸಾಗಾಣಿಕೆಯಲ್ಲಿರುವ ನಗದಿಗೆ ರೂ.50 ಲಕ್ಷ ವಿಮೆ ಒಳಪಡಿಸಿರುತ್ತಾರೆ ವಿಮಾ ಅವದಿ 31.03.2027 ರವರೆಗೆ ಇರುತ್ತದೆ. ಪಾಲಿಸಿಯು ಬ್ಯಾಂಕಿನಲ್ಲಿ ಲಭ್ಯವಿರುತ್ತದೆ.
ನಗದು ಶಿಲ್ಕನ್ನು ಕಾಲಕಾಲಕ್ಕೆ ಅದಿಕೃತರು ಪರೀಕ್ಷಿಸಿದ್ದಾರೆಯೆ?		ನಗದು ಶಿಲ್ಕನ್ನು ಕಾಲಕಾಲಕ್ಕೆ ಅಧಿಕೃತರು ಪರೀಕ್ಷಿಸಿರುವುದರ ಬಗ್ಗೆ ಮಾಹಿತಿ ಇರುತ್ತದೆ.

22) ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು **ರೂಗಳಲ್ಲಿ**

ಬ್ಯಾಂಕಿನ ಹೆಸರು	ಶಾಖೆ	ಬ್ಯಾಂಕಿನ ಪ್ರಕಾರ ಉಳಿಕೆ ಶಿಲ್ಕು	ಲೆಕ್ಕದ ಪ್ರಕಾರ	ಷರಾ
ತಬಿ.ಡಿ. ಮತ್ತು ಬಿ.ಆರ್.ಡಿ.ಸಿ.ಸಿ. ಬ್ಯಾಂಕು	ಪ್ರಧಾನಕಛೇರಿ	74,97,228.27	74,97,228.27	0.00
ಅಪೆಕ್ಸ್(ಐಖಅಂ) ಬ್ಯಾಂಕ್	ಪ್ರಧಾನಕಛೇರಿ	4,39,21,663.32	4,39,21,663.32	0.00
ಅಪೆಕ್ಸ್(ಐಖಅಂ) ಬ್ಯಾಂಕ್	ವಿಧಾನಸೌಧ	2,53,97,069.85	2,53,97,069.85	0.00
ಹೆಚ್.ಡಿ.ಎಫ್.ಸಿ ಬ್ಯಾಂಕ್,	ಕಸ್ತೂರ್‌ಬಾರಸ್ತೆ ಶಾಖೆ	26,92,562.89	26,92,562.89	0.00
ಆಕ್ಸಿಸ್ ಬ್ಯಾಂಕ್	ಚಾಮರಾಜಪೇಟೆ	4,56,88,473.79	4,56,26,973.79	61,500.00
ಐ.ಡಿ.ಬಿ.ಐ	ಮಲ್ಲೇಶ್ವರಂ ಶಾಖೆ	1,95,80,694.94	1,95,80,694.94	0.00
ಹೆಚ್.ಡಿ.ಎಫ್.ಸಿ ಬ್ಯಾಂಕ್,	ಗಾಂಧಿನಗರ ಶಾಖೆ	1,03,33,431.14	1,03,33,431.14	0.00
ಆಕ್ಸಿಸ್ ಬ್ಯಾಂಕ್ –ಎಟಿಎಂಖಾತೆ	ಚಾಮರಾಜಪೇಟೆ	4,31,05,576.99	4,31,05,576.99	0.00
ಕರ್ನಾಟಕ ಬ್ಯಾಂಕ್	ನೃಪತುಂಗರಸ್ತೆ	67,19,613.00	67,19,613.00	0.00
	ಒಟ್ಟು	20,49,36,314.19	20,49,97,814.19	61,500.00

ಬ್ಯಾಂಕು ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢೀಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.)	ಮೇಲ್ಕಂಡ ವಿವಿಧ ಬ್ಯಾಂಕುಗಳಿಂದ ಪಡೆದ ದೃಢೀಕರಣಕ್ಕೆ ತಾಳೆ ಇರುತ್ತದೆ. ವ್ಯತ್ಯಾಸ ಇರುವ ಲೆಕ್ಕಗಳನ್ನು ಮುಂದಿನ ಸಾಲಿನಲ್ಲಿ ಸರಿಪಡಿಸಿಕೊಳ್ಳಲಾಗಿದೆ.

ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58 (ಇ) ಪ್ರಕಾರ ಮಂಜೂರಾತಿ ಪಡೆದಿದೆಯೇ ?	ಆಡಳಿತ ಮಂಡಳಿಯ ತೀರ್ಮಾನದಂತೆ ಆಕ್ಸಿಸ್ ಬ್ಯಾಂಕ್, ಹೆಚ್.ಡಿ.ಎಫ್.ಸಿ ಬ್ಯಾಂಕ್, ಕರ್ನಾಟಕ ಬ್ಯಾಂಕ್, ಐ.ಡಿ.ಬಿ.ಐ. ಬ್ಯಾಂಕುಗಳಲ್ಲಿ ಚಾಲ್ತಿ ಖಾತೆಗಳನ್ನು ಪ್ರಾರಂಭಿಸಿ ಖಾತೆಗಳನ್ನು ವ್ಯವಹರಿಸಲಾಗಿರುತ್ತದೆ. ಆರ್.ಬಿ.ಐ ಕಾಲಕಾಲಕ್ಕೆ ಹೊರಡಿಸಿದ ಸೂಚನೆಗಳಿಗೆ ಮತ್ತು ನಿರ್ದೇಶನಗಳಿಗೆ ಅನುಸಾರವಾಗಿ ವ್ಯವಹರಿಸುತ್ತಿದೆ.
ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ	ಯಾವುದು ಇರುವುದಿಲ್ಲ.
ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ	ಮೇಲ್ಕಂಡ ಎಲ್ಲಾ ಖಾತೆಗಳು ಚಾಲ್ತಿ ಖಾತೆಗಳಾಗಿದ್ದು ಚಾಲ್ತಿ ಖಾತೆಗಳಿಗೆ ಯಾವುದೇ ಬಡ್ಡಿಯು ಬಂದಿರುವುದಿಲ್ಲ

23) ಹೂಡಿಕೆಗಳು

ಷಡ್ಯೂಲ್ ಕೆ ಪ್ರಕಾರ ದಿನಾಂಕ 31-03-2026 ಕ್ಕೆ ಸಂಘವು ಹೊಂದಿರುವ ಹೂಡಿಕೆಗಳು ರೂ.**9077.28ಲಕ್ಷಗಳು**
ವಿವರಗಳು ಈ ಕೆಳಕಂಡಂತೆ ಇರುತ್ತದೆ

ಕ್ರ ಸಂ	ಹೂಡಿಕೆ ಸ್ವರೂಪ	31.3.2026ಕ್ಕೆ ಮೊಬಲಗು (ಲಕ್ಷಗಳು)
1	ಸರ್ಕಾರಿ ಭದ್ರತಾಠೇವಣಿ	4794.75
2	ಬಿ.ಡಿ. ಮತ್ತು ಬಿ.ಆರ್.ಡಿ.ಸಿ.ಸಿ. ಬ್ಯಾಂಕು – ಆರ್.ಎಫ್.ಡಿ	943.50
3	ಅಪೆಕ್ಸ್ ಬ್ಯಾಂಕ್-ಎಫ್.ಡಿ	470.00
4	ಐ.ಡಿ.ಬಿ.ಐ ಬ್ಯಾಂಕ್- ಮಲ್ಲೇಶ್ವರಂ ಶಾಖೆ	950.00
5	ಬಿ.ಡಿ. ಮತ್ತು ಬಿ.ಆರ್.ಡಿ.ಸಿ.ಸಿ. ಬ್ಯಾಂಕು -.ಎಫ್.ಡಿ	104.03
6	ಹೆಚ್.ಡಿ,ಫ್.ಸಿ ಬ್ಯಾಂಕ್ ಎಫ್‌ಡಿ	735.00
7	ಕರ್ನಾಟಕ ಬ್ಯಾಂಕ್ ಎಫ್‌ಡಿ	1080.00
	ಒಟ್ಟು ಮೊಬಲಗು	**9077.28**

1	ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿಸುವುದು.	ಬ್ಯಾಂಕು ಹೂಡಿಕೆಗಳಿಗೆ ಸಂಬಂದಪಟ್ಟಂತೆ ಡಿಮ್ಯಾಟ್ ಖಾತೆಯನ್ನು ಹೊಂದಿದ್ದು, ಇತರ ಮುಖೇನ ಖರೀದಿ ಮತ್ತು ಮಾರಾಟದ ವ್ಯವಹಾರಗಳನ್ನು ನಡೆಸುವ ಪದ್ದತಿ ಹೊಂದಿರುತ್ತದೆ. ಹೂಡಿಕೆಗಳ ಬಗ್ಗೆ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿ ತೀರ್ಮಾನಕ್ಕೆ ಬರಲಾಗುತ್ತಿದೆ. ಆಡಳಿತ ಮಂಡಳಿಯ ಸಭೆಯ ತೀರ್ಮಾನಗಳನ್ನು ಪರಿಶೀಲಿಸಿದಾಗ ಕೆಲವೊಮ್ಮೆ ಹೂಡಿಕೆಗಳ ಬಗ್ಗೆ ವ್ಯವಹರಿಸಲು ಅಧಿಕಾರ ಪ್ರತ್ಯಾಯೋಜನೆಯನ್ನು ಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ಹೂಡಿಕೆ ಸಮಿತಿಗೆ ಅಧಿಕಾರ ನೀಡಿರುತ್ತದೆ. ವರದಿಯಲ್ಲಿ ಕಾಲಕಾಲಕ್ಕೆ ಆಡಳಿತ ಮಂಡಳಿಯಲ್ಲಿ ವಿಷಯ ಮಂಡಿಸುವ ಕ್ರಮವಿಟ್ಟಿರುತ್ತದೆ ದಿನಾಂಕ 31.03.2026ಕ್ಕೆ ಸದರಿ ಬ್ಯಾಂಕ್ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಭದ್ರತಾ ಪತ್ರಗಳಲ್ಲಿ ಹೂಡಿರುವ ಮೊತ್ತ 4794.75ಲಕ್ಷಗಳಾಗಿರುತ್ತದೆ. ದಿನಾಂಕ 31.03.2026ಕ್ಕೆ ಬ್ಯಾಂಕಿನ ಎನ್.ಡಿ.ಟಿ.ಎಲ್‌ನ ಮೊತ್ತ 25,680.07 ಲಕ್ಷಗಳಾಗಿದ್ದು, ಇದೇ ಅವಧಿಗೆ ಎಸ್.ಎಲ್.ಆರ್.ನ ಹೂಡಿಕೆ ಶೇ.18.67 ಲಕ್ಷಗಳಷ್ಟಿರುತ್ತದೆ. ಆರ್.ಬಿ.ಐನ ಸೂಚನೆ0ಯನ್ವ0ಯ ಇದು ಶೇ.18ರಷ್ಟು ಇರಬೇಕಾಗಿರುತ್ತದೆ. ಸದರಿ ಬ್ಯಾಂಕ್ ವರದಿ ಸಾಲಿನಲ್ಲಿ ನಾನ್ ಎಸ್.ಎಲ್.ಆರ್ ನಲ್ಲಿ 0ಯಾವುದೇ ಹೂಡಿಕೆ ಮಾಡಿರುವುದಿಲ್ಲ. 31.03.2026ಕ್ಕೆ ಸದರಿ ಬ್ಯಾಂಕು ಇತರೆ ಬ್ಯಾಂಕುಗಳ ಚಾಲ್ತಿ ಹಾಗೂ ನಿಶ್ಚಿತ ಠೇವಣಿ ರೂಪದಲ್ಲಿ 6331.89 ಲಕ್ಷ ರೂಗಳನ್ನು ತೋಡಗಿಸಿರುತ್ತದೆ. ಅರ್.ಬಿ ಐ ನಿ0ಯಾಮಾನುಸಾರ ಒಟ್ಟು ಬ್ಯಾಂಕುಗಳ ಠೇವಣಿ ದರ ಶೇ.20ರಷ್ಟು ಇರಬೇಕಾಗಿರುವುದು ಹೆಚ್ಚಿಗೆ ಆಗಿರುತ್ತದೆ. ದಿನಾಂಕ 31.03.2025ಕ್ಕೆ ಬ್ಯಾಂಕಿನಲ್ಲಿ ಇದ್ದ ಠೇವಣಿಗಳ ಸಂಗ್ರಹಣೆ 20172.82 ಲಕ್ಷಗಳಾಗಿದ್ದು, ಆರ್.ಬಿ.ಐ ಸೂಚನೆಗಳನ್ವ0ಯ ಎಲ್ಲಾ ಬ್ಯಾಂಕುಗಳ ಠೇವಣಿಗಳ ಮೊತ್ತ ಕಳೆದ ಸಾಲುಗಳ ಸಂಗ್ರಹಗಳ ಶೇ.20 ಮೀರಬಾರದು. ಈಗಾಗಿ 4034.56ಲಕ್ಷ ರೂಗಳ ಮೊತ್ತ ತೊಡಗಿಸಬೇಕಾಗಿದ್ದು ತೊಡಗಿಸಿರುವ ಮೊತ್ತ 6331.89 ಲಕ್ಷ ಆಗಿರುತ್ತದೆ ಪ್ರತಿ ಬ್ಯಾಂಕಿನ ಠೇವಣಿಗಳಲ್ಲಿ ತೊಡಗಿಸಿರುವ ಮೊತ್ತ ಹಿಂದಿನ ಸಾಲಿನ ಠೇವಣಿಗಳ ಮೊತ್ತಕ್ಕಿಂತ ಶೇ.5ರಷ್ಟು ಮೀರಬಾರದೆಂಬ ಕಟ್ಟಳೆ ಆರ್.ಬಿ.ಐ ನಿಂದ ಇರುತ್ತದೆ. ಆದರೆ ಈ ಮೆಲ್ಕಾಣಿಸಿದ ಮಿತಿಗಳು ಪ್ರಸಕ್ತ ಸಾಲಿನ ಠೇವಣಿಗಳ ಆದಾರದ ಪ್ರಮಾಣಿಕರಿಸಿದಾಗ ಅದು ಆರ್.ಬಿ.ಐ ನೀಡಿರುವ ಮಿತಿ0ಯೊಳಗೆ ಇರುತ್ತದೆ. ಪ್ರಸಕ್ತ ವರದಿ ಸಾಲಿನಲ್ಲಿ ಬ್ಯಾಂಕು ತನ್ನ

		ಎಲ್ಲಾ ಹೂಡಿಕೆಗಳಿಂದ 499.74 ಲಕ್ಷ ಲಾಭಾಂಶದಿಂದಾಗಿ ಬಡ್ಡಿ0ಯು ಆದಾ0ಯ ರೂಪದಲ್ಲಿ ಗಳಿಸಿದ್ದು ಸದರಿ ಗಳಿಕೆ0ಯ ಸರಾಸರಿ ಪ್ರಮಾಣದಲ್ಲಿ ಒಟ್ಟು ಹೂಡಿಕೆಗಳ ಶೇ.5.42 ರಷ್ಟಿರುತ್ತದೆ. ಬ್ಯಾಂಕು ಹಿಂದಿನ ಸಾಲಾಂತ್ಯಕ್ಕೆ 6501.51 ಲಕ್ಷಗಳನ್ನು ಹೂಡಿಕೆಗಳಲ್ಲಿ ತೋಡಗಿಸಿದ್ದು ವರದಿ ಸಾಲಾಂತ್ಯಕ್ಕೆ 9077.53 ಲಕ್ಷ ರೂ.ಗಳನ್ನು ತೋಡಗಿಸಿರುತ್ತದೆ. ಹಿಂದಿನ ಸಾಲಿಗೆ ಹೊಲಿಸಿದಾಗ ಶೆ.39.62 ರಷ್ಟು ಹೂಡಿಕೆ ಹೆಚ್ಚಾಗಿರುತ್ತದೆ ಹೂಡಿಕೆಗಳ ನಿತಿ0ಯನ್ನು ಬ್ಯಾಂಕಿನ ಆಡಳಿತ ಮಂಡಳಿ ಅನುಮೋದಿಸಿದೆ. ಬ್ಯಾಂಕು ತಾನು ಹೊಂದಿರುವ ಎಲ್ಲಾ ಹೂಡಿಕೆಗಳಿಗೆ ಸಂಬಂದಪಟ್ಟ ಧೃಢೀಕರಣಗಳನ್ನು ಹೊಂದಿರುತ್ತದೆ.
2	ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯಗೊಳಿಸುವಿಕ ಬಗ್ಗೆ ವಿಮರ್ಷೆ	ಬ್ಯಾಂಕಿನ ಸಮವರ್ತಿ ಲೆಕ್ಕಪರಿಶೋಧಕರವರು ಹೂಡಿಕೆಗಳ ವಿಭಾಗವನ್ನು ಲೆಕ್ಕಪರಿಶೋಧನೆಗೆ ಒಳಪಡಿಸಿ ಅದರ ಪಲಿತಾಂಶಗಳನ್ನು ಆಗಿಂದಾಗ್ಗೆ ಬ್ಯಾಂಕಿನ ಆಡಳಿತ ಮಂಡಳಿಯ ಗಮನಕ್ಕೆ ತರುತ್ತಿರುವುದನ್ನು ಗಮನಿಸಲಾಗಿದೆ. ಬ್ಯಾಂಕಿನ ಹೂಡಿಕೆಗಳ ಬಗ್ಗೆ ಆಡಳಿತ ಮಂಡಳಿಯ ಸಭೆಯಲ್ಲಿ ಅಧ್ಯಕ್ಷರು ಮತ್ತು ಇತರ ನಿರ್ದೇಶಕರುಗಳೂಂದಿಗೆ ಹೂಡಿಕೆಗಳನ್ನು ಪರಿಶೀಲಿಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಂಡಿರುವುದು ಅಲ್ಲದೆ ಹೂಡಿಕೆಗಳ ಪ್ರಮಾಣಪತ್ರ, ಭೌತಿಕ ಪರಿಶೀಲಿನಾ ಕ್ರಮ ಇಟ್ಟಿರುವುದು ಮತ್ತು ಹೂಡಿಕೆಗಳ ಬಗ್ಗೆ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಮುಂದಿನ ಆಡಳಿತ ಮಂಡಳಿಯ ಸಭೆಯಲ್ಲಿ ದೃಢಪಡಿಸಿಕೊಳ್ಳಲಾಗುತ್ತಿದೆ. ಬ್ಯಾಂಕು ಹೂಡಿಕೆ ಮಾಡಿರುವ ಸಂಬಂಧಪಟ್ಟ ಸಂಸ್ಥೆಗಳಿಂದ ಪ್ರತಿ 3 ತಿಂಗಳಿಗೊಮ್ಮೆ ಮತ್ತು ವಾರ್ಷಿಕ ಅಂತ್ಯಕ್ಕೆ ಇದ್ದಂತೆ ಕ್ರಮವಾಗಿ ತ:ಖ್ತೆ ಮತ್ತು ಬಾಕಿ ಸ್ಥಿರಿಕರಣ ಪತ್ರಗಳನ್ನು ಪಡೆದು ಲೆಕ್ಕಪತ್ರಗಳೂಂದಿಗೆ ತಾಳೆ ನೋಡುವ ಕ್ರಮ ಇಡಲಾಗಿದೆ. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಪ್ರಭಾರ ಮತ್ತು ನಗದು ಗುಮಾಸ್ತರ ಅಭಿರಕ್ಷೆಯಲ್ಲಿ ಹೂಡಿಕೆಗಳ ಪ್ರಮಾಣ ಪತ್ರಗಳನ್ನು (ಡಿಮ್ಯಾಟ್ ಖಾತೆಯಲ್ಲಿರುವ ಹೂಡಿಕೆಗಳನ್ನು ಹೊರತುಪಡಿಸಿ)ಭದ್ರತಾ ಕೊಠಡಿಯಲ್ಲಿ ಇಡಲಾಗಿದೆ.
3	ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ ವಿಮರ್ಷೆ	ಹೂಡಿಕೆಗಳನ್ನು ಖರೀದಿಸುವಾಗ ಪ್ರೀಮಿಯಮ್ ಬರಿಸಿದ್ದರೆ, ಪ್ರೀಮಿಯಮ್ಮನ್ನು ಹೂಡಿಕೆಯ ಅವಧಿಗೆ ಖರ್ಚು ಹಾಕುತ್ತಿದ್ದು ಹೂಡಿಕೆಗಳನ್ನು ಖರಿದಿಸುವಾಗ ಡಿಸಕೌಂಟ ಪಡೆದಲ್ಲಿ, ಡಿಸಕೌಂಟನ್ನು ಅದೆ ವರ್ಷ ತೆಗೆದುಕೂಳ್ಳುತ್ತಿರುವ ಕ್ರಮ ಇಟ್ಟಿರುತ್ತಾರೆ. ದಿನಾಂಕ 31.03.2026ರ ಅಂತ್ಯಕ್ಕೆ ರೂ.1.60 ಲಕ್ಷ ಮೊತ್ತವು ಸರ್ಕಾರಿ ಭದ್ರತೆಗಳ ಮೇಲೆ ಪಾವತಿಸಿದ್ದ ಪ್ರೀಮಿಯಂ ಅಮಾರ್ಟೈಸೆಷನ್ ಮಾಡುತ್ತಿದ್ದು ಈ ವರ್ಷ ಕೂಡ ಪ್ರೀಮಿಯಂ ರೂ.0.28ಲಕ್ಷ ಅಮಾರ್ಟೈಸೆಷನ್ ಮಾಡಲಾಗಿದೆ. 31.03.2026ಕ್ಕೆ ಹೂಡಿಕೆಗಳ ಮೌಲ್ಯಮಾಪನವನ್ನು ಖರೀದಿ ಮೌಲ್ಯದಲ್ಲಿ ಮಾಡಲಾಗಿದೆ. ಇದು ಬುಕ್ಕ ಮೌಲ್ಯಕಿಂತ ಕಡಿಮೆಯಾಗಿರುತ್ತದೆ. ಕಾಲಕಾಲಕ್ಕೆ ಫಿಮ್ಡ್ ಇಂದ ಪ್ರಕಟಗೊಳ್ಳುವ ಹೂಡಿಕೆಗಳ ಮೌಲ್ಯವನ್ನು ಆದರಿಸಿ ಹೂಡಿಕೆಗಳ ಮೌಲ್ಯಮಾಪನ ಮಾಡಿರುವುದನ್ನು ಗಮನಿಸಿದೆ. (ರೂ.ಲಕ್ಷಗಳಲ್ಲಿ) ಹೂಡಿಕೆಗಳ ಖರೀದಿ ಮೌಲ್ಯ: 4793.15 ಹೂಡಿಕೆಗಳ ಬುಕ್ಕ ಮೌಲ್ಯ: 4850.00
4	SGL/BRSಪದ್ಧತಿ, ಸಾಲಾಂತ್ಯಕ್ಕೆ ಇರವ SGL/BRS ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ.	ಈ ಹೂಡಿಕೆಗಳ ಸಂಬಂಧಸಿ. ಎಸ್.ಜಿ.ಎಲ್ ಮತ್ತು ಡಿಮ್ಯಾಟ್ ಖಾತೆಗಳನ್ನು ಬೆಂಗಳೂರಿನ ಹೆಚ್.ಡಿ.ಎಫ್.ಸಿ ಬ್ಯಾಂಕಿನ ಕೇಂದ್ರಕಛೇರಿಯಲ್ಲಿ ತೆರೆದು ನಿರ್ವಹಿಸಿರುತ್ತಾರೆ.
23. ಎ	**<u>ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:</u>**	
	1)ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ.	ಬ್ಯಾಂಕು ಹೊಂದಿರುವ ಇತರೆ ನಿಧಿಗಳ ಪೈಕಿ ಸಹಕಾರ ಕಲ್ಯಾಣ ನಿಧಿ ಹಾಗೂ ಸಹಕಾರ ಅಭಿವೃದ್ದಿ ನಿಧಿ ಸೃಷ್ಟಿಗೆ ಉಪನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಕ್ರ | ಖಾತೆಗಳ ವಿವರ | ಮೊಬಲಗು 1 | ಬಿಡಿಮತ್ತು ಬಿಆರ್.ಡಿ.ಸಿ.ಬ್ಯಾಂಕು ಆರ್.ಎಫ್.ಡಿ | 9,43,50,098 2 | ಅಪೆಕ್ಸ್ ಬ್ಯಾಂಕ್ಎಫ್.ಡಿ | 4,70,00,000 3 | ಐ.ಡಿ.ಬಿ.ಐ ಬ್ಯಾಂಕ್ ಮಲ್ಲೇಶ್ವರ್ಂ ಶಾಖೆ | 9,50,00,000 4 | ಬಿಡಿ ಮತ್ತು ಬಿಆರ್.ಡಿ.ಸಿ.ಬ್ಯಾಂಕು ಎಫ್.ಡಿ | 1,04,03,162

		5	ಹೆಚ್.ಡಿ.ಎಫ್.ಸಿ ಬ್ಯಾಂಕ್ ಎಫ್‌ಡಿ	7,35,00,000
		6	ಕರ್ನಾಟಕ ಬ್ಯಾಂಕ್ ಎಫ್‌ಡಿ	10,80,00,000
			ಒಟ್ಟು	42,82,53,260
		ಮೇಲ್ಕಂಡ ಬಾಬ್ತುಗಳಿಗೆ ಎಲ್ಲವು ದೃಢೀಕರಣ ಹಾಜರಿದ್ದು ತಾಳೆ ಇರುತ್ತದೆ. ಉಪನಿಯಮ (09)ರಂತೆ ಬ್ಯಾಂಕು ಹೊಂದಿರುವ ನಿಧಿಗಳ ಪೈಕಿ ಕೆಲವು ನಿಧಿಗಳನ್ನು ಬ್ಯಾಂಕಿನ ನಿತ್ಯ ವ್ಯವಹಾರಗಳಿಂದ ಪ್ರತ್ಯೇಕಿಸಿ ಹೊರಗಿನ ವ್ಯವಹಾರಗಳಲ್ಲಿ ತೊಡಗಿಸಲು ಕ್ರಮ ಅಗತ್ಯವಿರುತ್ತದೆ.		
	2)SLR ಹೂಡಿಕೆಗಳನ್ನು AFS, HTM ಮತ್ತು HFT ಗಳಿಂದು ಪ್ರತ್ಯೇಕಿಸಲಾಗಿದೆಯೇ?	ಬ್ಯಾಂಕು ದಿನಾಂಕ 31.03.2026ಕ್ಕೆ ರೂ.4794.75 ಲಕ್ಷ ಮೊತ್ತವನ್ನು ಕೇಂದ್ರ ಸರ್ಕಾರದ ಭದ್ರತೆಗಳಲ್ಲಿ ಹೂಡಿಕೆ ಮಾಡಿದ್ದು ಅವುಗಳನ್ನು ಪರಿಪಕ್ವತೆಯ ವರ್ಗದಲ್ಲಿ ವರ್ಗೀಕರಿಸಲಾಗಿರುತ್ತದೆ. ಸರ್ಕಾರಿ ಹೂಡಿಕೆ ಮತ್ತು ಇತರೆ ಹೂಡಿಕೆ ಬಗ್ಗೆ ರಿಜಿಸ್ಟರ್ ಇಟ್ಟಿದ್ದು ಈ ಬಗ್ಗೆ ಪರಿಶೀಲಿಸಲಾಗಿದೆ.	
	3) ರೂ.100 ಕೋಟಿ ಮೀರಿಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ?	ಬ್ಯಾಂಕಿನಲ್ಲಿ ಒಟ್ಟು ಠೇವಣಿಯು ರೂ.20,172.82 ಲಕ್ಷ ಇದ್ದು, ಆರ್.ಬಿ.ಐ. ನಿಯಾಮಾನುಸಾರ ಬ್ಯಾಂಕಿನ ಒಟ್ಟು ರೂ.4,295.78 ಲಕ್ಷ ಮೊತ್ತವನ್ನು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ ಹೂಡಿಕೆ ಮಾಡಿದ್ದು ಅವುಗಳನ್ನು ಪರಿಪಕ್ವತೆಯ ವರ್ಗದಲ್ಲಿ ವರ್ಗೀಕರಿಸಲಾಗಿರುವುದರಿಂದ ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸುವ ಅವಶ್ಯಕತೆ ಇರುವುದಿಲ್ಲ.	

ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ?	ಹೌದು
ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ?	ಬ್ಯಾಂಕಿನ ವತಿಯಿಂದ ಹೂಡಿಕೆಗಳ ನಿಯಾಮಾವಳಿಗಳನ್ನು ರಚಿಸಿ ಕೇಂದ್ರ ಸರ್ಕಾರದ ಹೂಡಿಕೆಗಳನ್ನು ಖರೀದಿಸುವ ಮೊದಲು ಆಡಳಿತ ಮಂಡಳಿಯು ಅನುಮತಿಯನ್ನು ಪಡೆದು ಹೂಡಿಕೆಗಳನ್ನು ಖರೀದಿಸಲಾಗಿರುತ್ತದೆ.
ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೆ?	ಹೌದು
ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾಆಗಿದೆಯೇ ?	ಹೌದು. ವರದಿ ಸಾಲಿನಲ್ಲಿರೂ. 4,99,74,847.33 ಬಡ್ಡಿಜಮಾ ಬಂದಿರುತ್ತದೆ.
ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ	ಸರ್ಕಾರಿ ಹೂಡಿಕೆ ಮತ್ತುಇತರೆ ಹೂಡಿಕೆ ಬಗ್ಗೆ ರಿಜಿಸ್ಟರ್ ಇಟ್ಟಿದ್ದು ಈ ಬಗ್ಗೆ ಪರಿಶೀಲಿಸಲಾಗಿದೆ.

24) **ಸದಸ್ಯರ ಸಾಲ ಮತ್ತು ಮುಂಗಡಗಳು :**

	ಎ	**<u>ಸಾಲಗಳ ಮೌಲ್ಯಾಂಕನ (Credit Appraisal)</u>** ಉಪ ನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವದಿ , ಒಬ್ಬ ಸದಸ್ಯನು ಎಲ್ಲ ರೀತಿಯ ಪಡೆಯ ಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ ಸಂಘದಲ್ಲಿ ಬರೆದಿಟ್ಟಿರುವುದ ಬಗ್ಗೆ ವಿಮರ್ಶೆ.	ಬ್ಯಾಂಕಿನ ಉಪನಿಯಮ 70ರಂತೆ ಈ ಕೆಳಕಂಡ ವಿವಿದ್ಧೋದ್ದೇಶಗಳಿಗೆ ಸಾಲಗಳನ್ನು ಮಂಜೂರು ಮಾಡಬಹುದಾಗಿರುತ್ತದೆ. ಸದರಿ ಸಾಲಗಳನ್ನು ಆರ್.ಬಿ.ಐ. ಆಗಿಂದಾಗ್ಗೆ ಹೊರಡಿಸುವ ಉದ್ದೇಶಗಳಿಗೆ ಅನುಸಾರವಾಗಿ ಇರಬೇಕಾಗಿರುತ್ತದೆ. 1. ವೈಯಕ್ತಿಕ ಜವಾಬ್ದಾರಿ ಮೇಲೆ ಸಾಲ 2. ಚರ ಮತ್ತು ಸ್ಥಿರಾಸ್ತಿಗಳ ಮೇಲೆ ಸಾಲ 3. ಯಂತ್ರೋಪಕರಣ ಸಾಲ 4. ಚಿನ್ನಾಭರಣ ಸಾಲ 5. ಠೇವಣಿ ಮೇಲಿನ ಸಾಲ ಸಾಲದ ಮಿತಿಯು ಪ್ರತ್ಯೇಕ ಸದಸ್ಯರಿಗೆ ರೂ.2.5ಕೋಟಿ ಮತ್ತು ಸಮೂಹಗಳಿಗೆ ರೂ.4 ಕೋಟಿ ಸಾಲ ನೀಡಬಹುದಾಗಿದ್ದು ಇದನ್ನು ದಿ.27.05.2024 ರ ಕಾರ್ಯಕಾರಿ ಮಂಡಳಿಯಲ್ಲಿ ತೀರ್ಮಾನಿಸಿರುತ್ತಾರೆ.
	ಬಿ	**ಸಾಲ ಮಂಜೂರಾತಿ/ ವಿತರಣೆ**	
		ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ?	ಬ್ಯಾಂಕಿನ ಸಾಲ ಮಂಜೂರಾತಿಯ ಎಲ್ಲಾ ಹಕ್ಕುಗಳನ್ನು ಆಡಳಿತ ಮಂಡಳಿ ಹೊಂದಿರುತ್ತದೆ. ಠೇವಣಿ ಆದಾರಿತ ಸಾಲಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಮಾತ್ರ ಆಯಾ ಶಾಖಾ ವ್ಯವಸ್ಥಾಪಕರು ಹೊಂದಿರುತ್ತಾರೆ. ಶಾಖಾ ವ್ಯವಸ್ಥಾಪಕರು ನೀಡಿರುವ ಠೇವಣಿ ಆದಾರಿತ ಸಾಲಗಳಿಗೆ ನಿರ್ದೇಶಕರ ಮಂಡಳಿಯಿಂದ ಫಟೋನೋತ್ತರ ಅನುಮತಿ ಪಡೆಯಲಾಗುತ್ತಿದೆ. ಸಾಲ ಮಂಜೂರಾತಿಯ ನಿಬಂದನೆಗಳನ್ನು ಮತ್ತು ದಾಖಲೆಗಳನ್ನು ಪಡೆದ ನಂತರ ಸಾಲ ಬಿಡುಗಡೆ ಮಾಡುವಕ್ರಮ ವಿರಿಸಿರುತ್ತಾರೆ.

			ಬ್ಯಾಂಕಿನ ಉಪನಿಯಮ 69ರಂತೆ ನಿ0ಯಾಮಾನುಸಾರ ಕಾರ್ಯಕಾರಿ ಮಂಡಳಿಯು ಸಾಲ ಮತ್ತು ಮುಂಗಡಗಳನ್ನು ಮಂಜೂರು ಮಾಡುವ ಮುನ್ನಾ ಭಾರತೀಯ ರಿಜರ್ವ್ ಬ್ಯಾಂಕ್ ಮತ್ತು ನಿಬಂಧಕರು ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳಿಗೆ ಅನುಗುಣವಾಗಿರುತ್ತದೆ.
	ಸಿ	**<u>ದಾಖಲೀಕರಣ ಸಂಗ್ರಹಣೆ</u>** **<u>(Documentation)</u>** ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances)	ಸಾಲಗಳ ಮೌಲ್ಯಾಂಕನ(credit appraisal)ಕ್ಕಾಗಿ ಅಗತ್ಯ ದಾಖಲೆಗಳನ್ನು ಪಡೆಯುತ್ತಿರುವುದು ತನಿಖೆ ಕೈಗೊಳ್ಳುತ್ತಿರುವುದು, ಸಾಕಷ್ಟು ಭದ್ರತೆಗಳನ್ನು ಪಡೆಯುತ್ತಿರುವುದು, ಸವಿವರವಾಗಿ ಟಿಪ್ಪಣಿಗಳನ್ನು ದಾಖಲೆ ಮಾಡುತ್ತಿರುವುದು, ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆಯುತ್ತಿರುವುದು, ಸ್ಥಿರಾಸ್ತಿಯನ್ನು ಅಧಿಕೃತ ಮೌಲ್ಯ ಮಾಪಕರಿಂದ ಧೃಢೀಕರಿಸಿಕೊಳ್ಳುತ್ತಿರುವುದು, ಸಾಲಗಾರರು ಸಾಲ ಪಡೆಯುವ ಅರ್ಹತೆ ಬಗ್ಗೆ, ಆದಾಯ ಮೂಲಗಳನ್ನು ಖಚಿತಪಡಿಸಿಕೊಳ್ಳುತ್ತಿರುವುದು – ಇವೇ ಮೊದಲಾದ ಉತ್ತಮ ಪದ್ಧತಿಯನ್ನು ಅನುಸರಿಸುತ್ತಿರುವುದನ್ನು ಗಮನಿಸಿದೆ. ಕೆಲವೊಮ್ಮೆ ವ್ಯವಸ್ಥಾಪಕರು ಆದಾಯ ತೆರಿಗೆಯ ರಿಟರ್ನ್ಗಳ ಆಧಾರದ ಮೇಲೆ ಸೂಚಿಸಿರುವ ಮೊತ್ತಕ್ಕಿಂತ ಅಧಿಕ ಪ್ರಮಾಣದಲ್ಲಿ ಆಡಳಿತ ಮಂಡಳಿಯು ಸಾಲಗಳನ್ನು ಮಂಜೂರು ಮಾಡಲಾಗುತ್ತದೆ. ಅಂತಹ ಸನ್ನಿವೇಶಗಳಲ್ಲಿ ಆಡಳಿತ ಮಂಡಳಿಯು ಸಾಲಗಾರರ ಸಂಪಾದನೆಯ ಸಾಮರ್ಥ್ಯಕ್ಕನುಸಾರವಾಗಿ ಮಂಜೂರಾತಿ ಮಾಡುತ್ತದೆ. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ 0ಯಾವುದು ಇರುವುದಿಲ್ಲ.
	ಡಿ	**ದಾಖಲೆಗಳ ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:**	
	1	ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ	ಬ್ಯಾಂಕು ವಿತರಿಸದ ಸಾಲಗಳ ಪುನರ್ ಪರಿಶೋದನೆಯನ್ನು ಕಾಲಕಾಲಕ್ಕೆ ಕೈಗೊಳ್ಳುತ್ತಿದೆ. ಕೆಲವು ಸಾಲಗಾರರಿಂದ ಧೃಢೀಕರಣ ಪಡೆಯಲಾಗಿರುತ್ತದೆ.
	2	ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ–ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿ ಯಾಗುತ್ತಿರುವ ಬಗ್ಗೆ.	ದಾಸ್ತಾನಿನ ಆಧಾರದ ಮೇಲೆ ಯಾವುದೇ ಸಾಲಗಳು ಇರುವುದಿಲ್ಲ.
	3	ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ.	ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗ ಸೂತ್ರದ ಅನುಸಾರ ಕಾರ್ಪೋರೇಟರ್ ಇತರ ಸಾಲಗಳಿಗೆ ಸಂಬಂಧಿಸಿದಂತೆ ರೂ.10 ಲಕ್ಷಗಳಿಗಿಂತ ಹೆಚ್ಚು ಸಾಲ ನೀಡಿದ ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆ ಕಡ್ಡಾಯವಾಗಿದ್ದು ಈ ಬಗ್ಗೆ ಕ್ರಮವಿಟ್ಟಿರುವುದಿಲ್ಲ.
	4	ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ.	ಸದರಿ ಮಾಹಿತಿಗಳನ್ನು ಪಡೆ0ಯುವ ಬಗ್ಗೆ ಅನುಸರಿಸುವ ಪದ್ದತಿ0ಯಾಗಲೀ ಹಿಂಬಾಲಿಕೆ ಕ್ರಮವಾಗಲಿ ಇಟ್ಟಿರುವುದಿಲ್ಲ.
	5	ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತುತನಿಖಾ ಪದ್ಧತಿಯ ಬಗ್ಗೆ.	ಅನ್ವಯಿಸುವುದಿಲ್ಲ (ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇದಕ್ಕೆ ಸಂಬಂದಪಟ್ಟ ಆದಾರದ ಮೇಲೆ ಯಾವುದೇ ಸಾಲವನ್ನು ನೀಡಿರುವುದಿಲ್ಲ)
	6	ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ	ಸಾಲ ಮಂಜೂರಾತಿ ಪೂರ್ವದಲ್ಲಿ ಬ್ಯಾಂಕಿನ ಮೌಲ್ಯಮಾಪಕರು ಸಾಲದ ಘಟಕಗಳಿಗೆ ಭೇಟಿ ನೀಡಿರುತ್ತಾರೆ ಅದಕ್ಕೆ ಸಂಬಂದಪಟ್ಟ ವರದಿಗಳು ಲಭ್ಯವಿರುತ್ತವೆ.
	7	ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI)	ಆರ್.ಬಿ.ಐ. ಈ ವಿಷ0ಯಕ್ಕೆ ಸಂಬಂದಪಟ್ಟಂತೆ ನೀಡಿರುವ ಸುತ್ತೋಲೆಯಂತೆ ಈ ಪದ್ದತಿಯನ್ನು ಕೈಬಿಡಲಾಗಿದೆ.
	8	ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳಗೊಂಡಂತೆ ಸಾಲಗಳ ವಿಮರ್ಶೆ, ಸಾಲದ	ನಿಗದಿತ ಮಿತಿ0ಯೊಳಗೆ ಸುತ್ತೋಲೆ0ಯಂತೆ ಸಾಲವನ್ನು ಮಂಜೂರು ಮಾಡಲಾಗುತ್ತಿದೆ.

		ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ.	
	9	ಸೌಲಭ್ಯಗಳ ನವೀಕರಣ	ಅಂತಹ ಯಾವ ಪ್ರಕರಣಗಳು ಇರುವುದಿಲ್ಲ.
	10	ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ.	ಲೆಕ್ಕಪರಿಶೋಧನಾ ವರದಿ ಸಾಲಿನಲ್ಲಿ ಕೈಗಾರಿಕೆಗಳಿಗೆ ಸಾಲ ಮಂಜೂರು ಮಾಡಿರುವುದಿಲ್ಲ.
	ಇ	**ಕರಡು ಮತ್ತು ಸಂಶಯಾಸ್ಪದ ಸಾಲಗಳು:**	
	1	ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ:	ಭಾರತೀಯ ರಿಜರ್ವ್ ಬ್ಯಾಂಕ್ ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ವಯ ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಿತಿಗಳನ್ನು ಕಲೆ ಹಾಕುವಲ್ಲಿ ಪರಿಣಾಮಕಾರಿ ಪದ್ಧತಿ ಅನುಸರಿಸುವುದನ್ನು ಗಮನಿಸಿದೆ ಮತ್ತು ವಾಸ್ತವವಾಗಿ ಕಾದಿರಿಸಬೇಕಾದ ಮೊತ್ತಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಾದಿರಿಸಿರುತ್ತದೆ, ಅವಕಾಶ ಕಲ್ಪಿಸಿರುವುದರಲ್ಲಿ ಯಾವುದೇ ಕೊರತೆ ಇರುವುದಿಲ್ಲ. ಇದನ್ನು ಗಮನಿಸಿದಾಗ ಬ್ಯಾಂಕು ಕರಡು ಮತ್ತು ಸಂಶಯಾಸ್ಪದ ಸಾಲಗಳನ್ನು ಪರಿಶೀಲಿಸಿ ಮತ್ತು ವಿವರಗಳನ್ನು ಕಲೆ ಹಾಕುವಲ್ಲಿ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದೆ.
	2	ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ	ದಿ.31.03.2026 ಕ್ಕೆ ಕರಡು ಮತ್ತು ಸಂಶಯಾಸ್ಪದ ಸಾಲಗಳ ಅವಕಾಶ ರೂ.105.05 ಲಕ್ಷ ಅವಶ್ಯವಿದ್ದು, ಈಗಾಗಲೆ ಕರಡು ಮತ್ತು ಸಂಶಯಾಸ್ಪದ ಸಾಲಗಳ ಅವಕಾಶ ರೂ.490 ಲಕ್ಷ ಕಲ್ಪಿಸಲಾಗಿದೆ.
	3	ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ.	ರಿಜರ್ವ್ ಬ್ಯಾಂಕ್ ಮಾರ್ಗಸೂಚಿಯಂತೆ ಸಾಲಗಳ ಮೇಲೆ ಬಡ್ಡಿಯನ್ನು ಸಾಲದ ಖಾತೆಗಳಿಗೆ ವಿಧಿಸದೆ ಅದನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದೆ.
	4	ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನ: ಸ್ಪಷ್ಟೀಕರಣದ (Rehabilitation)ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC/ECGCಯನ್ನೊಳಗೊಂಡಂತೆ.	ಭದ್ರತಾ ಸಾಲಗಳನ್ನು ಸಾಕಷ್ಟು ಹೆಚ್ಚಿನ ಮೌಲ್ಯದ ಆಸ್ತಿ ಭದ್ರತೆ ಪಡೆದು ನೀಡಲಾಗಿದೆ. ಪುನ: ಸ್ಪಷ್ಟೀಕರಣ ಸಾಲದ ಪ್ರಕರಣಗಳು ಯಾವುದು ಇರುವುದಿಲ್ಲವೆಂದು ಹಾಗೂ 0ಯಾವುದೇ ಸಾಲಗಳು DICGC/ECGC ಅಡಿ0ಯಲ್ಲಿ ಇಲ್ಲವೆಂದು ಬ್ಯಾಂಕಿನವರು ತಿಳಿಸಿರುತ್ತಾರೆ.
	5	ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು	ಕಲ್ಪಿಸಲಾದ ಅವಕಾಶಗಳು ಯಾವುದು ಇರುವುದಿಲ್ಲ.
	6	ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ.	ಪ್ರತಿ ಮಾಹೆ ಸಾಲ ವಸೂಲಾತಿ ಉಪಸಮಿತಿಯಲ್ಲಿ ಹಮ್ಮಿಕೊಂಡಯೋಜನೆ ಮತ್ತು ವಿಧಿ ವಿಧಾನಗಳನ್ನು ಸಾಕಷ್ಟು ಸಾಧಿಸಲ್ಪಟ್ಟ ಪ್ರಗತಿಯನ್ನು ಆಡಳಿತ ಮಂಡಳಿ ಸಭೆಯಲ್ಲಿ ವಿಮರ್ಷಿಸಲಾಗುತ್ತಿರುವುದನ್ನು ಗಮನಿಸಿದೆ ಹಾಗೂ ಸುಸ್ತಿಯಾದ ಸಾಲಗಾರರ ಮೇಲೆ ಸಿಟಿಸಿವಿಲ್ ಕೋರ್ಟಿನಲ್ಲಿ ದಾವಾ ಹೂಡಲಾಗಿರುತ್ತದೆ.
	ಎಫ್	**<u>ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:</u>** ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯ ಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ.	ಸಾಲಕ್ಕೆ ಆಧಾರವಾಗಿ ಪಡೆದ ಸ್ಥಿರಾಸ್ತಿಗಳಿಗೆ ವಿಮೆ ಪಾಲಿಸಿ ಪಡೆದಿರುವುದಿಲ್ಲ. 1.ದೊಡ್ಡ ಪ್ರಮಾಣ/ಸಾಲಗಳನ್ನು ನೀಡುವ ಮುಂಚೆ ಸಾಲಗಾರರು ತಮ್ಮ ಆಸ್ತಿ0ಯನ್ನು ಸಾಲದ ಭದ್ರತೆಗಾಗಿ ಬ್ಯಾಂಕಿಗೆ ಡಿ.ಟಿ.ಡಿ ಕೊಡುತ್ತಿರುವುದು ಸರಿ0ಯಷ್ಟೇ. ಸದರಿ ಆಸ್ತಿಗಳ ಸತ್ಯಾತ್ಯತೆ0ಯನ್ನು ದೃಢೀಪಡಿಸಿಕೊಳ್ಳಲು ಸರ್ಚ್ ರಿಪೂರ್ಟ್ ಪಡೆ0ಯತಕ್ಕದ್ದು. ಸಾಲಗಾರರ ಸಾಲ ಮರುಪಾವತಿ ಸಾಮಾರ್ಥ್ಯ ಹಾಗೂ ಪಾವತಿ ಇತಿಹಾಸ ಮಾಹಿತಿ ನೀಡುವ ಏಜೆನ್ಸಿಗಳಿಂದ (ಸಿಬಿಲ್) ಕ್ರೆಡಿಟ್ ಸ್ಕೋರ್ ಗಂಭಿರವಾಗಿ ಪರಿಗಣಿಸುವುದು. ಕ್ರೆಡಿಟ್ ಸ್ಕೋರ್ ಉತ್ತಮವಾಗದಿದ್ದಲ್ಲಿ 0.25ಹೆಚ್ಚು ಬಡ್ಡಿ ವಿಧಿಸುವುದು ಸೂಕ್ತ. 2. ಗೃಹ ನಿರ್ಮಾಣ ಸಂಬಂದ ಸಾಲಗಾರರ ಅನುಮೋದಿತ ನಕ್ಷೆ0ಯಂತೆ ಕಟ್ಟಡ ನಿರ್ಮಿಸುವುದಾಗಿ0ಯೂ, ಅಥವಾ ಕಟ್ಟಡ ಖರೀದೀಸಿದ ಸಂಬಂದಪಟ್ಟಂತೆ ಸದರಿ

			ಕಟ್ಟಡ ಅನುಮೋದಿತ ನಕ್ಷೆಯಂತೆ ನಿರ್ಮಿತವಾಗಿದೆ ಎಂದು ಪ್ರಮಾಣ ಪತ್ರ ನೀಡಬೇಕಾಗಿದೆ. ಬ್ಯಾಂಕು ನೇಮಿಸಿದ ವಾಸ್ತು ಶಿಲ್ಪಿ ಸಹ ಇಂತಹದೇ ಪ್ರಮಾಣ ಪತ್ರ ನೀಡಬೇಕಾಗಿದೆ.
	ಜಿ	**ಸದಸ್ಯರ ಸಾಲ ಮತ್ತು ಮುಂಗಡಗಳು :**ಬ್ಯಾಂಕಿನ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಶೆ.		

ಸಾಲದತರಹ	**ಸಾಲದಗರಿಷ್ಟ ಮೊತ್ತ**	**ಅವಧಿ**
ಜಾಮೀನು ಸಾಲ	100,000	03 ವರ್ಷಗಳು
ಸಂಬಳಾದಾರರ ಸಾಲ	100,000	03 ವರ್ಷಗಳು
ಸಿಬ್ಬಂದಿ ಸಾಲ	10,00,000	10 ವರ್ಷಗಳು
ವಾಹನ ಸಾಲ	25,00,000	3–5 ವರ್ಷಗಳು
ಅಡಮಾನ ಸಾಲ	2,50,00,000	20 ವರ್ಷಗಳು
ಗೃಹ ಸಾಲ	1,40,00,000	20 ವರ್ಷಗಳು
ಗ್ರೂಪ್ ಹೌಸಿಂಗ್ ಸಾಲ	4,00,00,000	20 ವರ್ಷಗಳು

	2	ವರದಿ ಸಾಲಿನಲ್ಲಿಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು.

ಸಾಲಗಳ ಸ್ವರೂಪ:	**ಆರಂಭದ ಬಾಕಿ**	**ಪ್ರ.ಸಾಲಿನಲ್ಲಿ ವಸೂಲಿಸಿದ ಸಾಲ**	**ಪ್ರ.ಸಾಲಿನಲ್ಲಿ ಹಂಚಿದ ಸಾಲ**	**ವರ್ಷಾಂತ್ಯಕ್ಕೆ ಬಾಕಿ**	**ಯಾದಿಯ ಮೊತ್ತ**	**ಅಂತರ**
ನಿಗದಿತ ಠೇವಣಿ ಸಾಲ	133.37	200.23	206.20	139.34	139.34	0
ಆವರ್ತ ಠೇವಣಿ ಸಾಲ	0.40	0.40	0.00	0.00	0.00	0
ನಗದು ಪತ್ರದ ಸಾಲ	1.74	3.49	3.56	1.81	1.81	0
ಪಿಗ್ಮಿ ಠೇವಣಿ ಮೇಲೆ ಸಾಲ	41.68	134.34	158.74	66.08	66.08	0
ಜಾಮೀನುಸಾಲ	13.28	0.82	2.00	14.46	14.46	0
